ಸೋಮವಾರ, ನವೆಂಬರ್ 4, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 305 | ಪುಟ 12
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಗೂಗಲ್ ಕಂಪನಿಯಲ್ಲಿ ಇಂಟರ್ನ್‌ಷಿಪ್ ಮಾಡಬೇಕೆ?

ಆಳ–ಅಗಲ
ವಿಮಾನ ತಯಾರಿಕೆಗೆ ಮುಂದಡಿ
ಕಮಲಾ, ಟ್ರಂಪ್ ಅಬ್ಬರದ ಪ್ರಚಾರ 8
ಹಿಂದಿಯಲ್ಲಿ ಪತ್ರ: ಕೇಂದ್ರ ಸಚಿವರಿಗೆ ಮಲಯಾಳದಲ್ಲಿ ಪತ್ರ ಬರೆದು ಪ್ರತಿಭಟನೆ 9
ಎಸ್‌ಟಿ, ಒಬಿಸಿಗಿಲ್ಲ ಮೀಸಲಾತಿ 3
ಮುಂಬೈ ಟೆಸ್ಟ್‌ನಲ್ಲೂ ಮುಖಭಂಗ 10

ರೈತರಿಗೆ ನೋಟಿಸ್ ನೀಡಿ, ಅವರ ಪಹಣಿಗಳಲ್ಲಿ ವಕ್ಫ್ ಆಸ್ತಿ ಎಂದು ನಮೂದು ಮಾಡಿದೆ ಎನ್ನಲಾದ ಪ್ರಕರಣವು ರಾಜ್ಯದಲ್ಲಿ ಮತ್ತೊಂದು ಸುತ್ತಿನ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿದೆ. ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷ ಬಿಜೆಪಿ ಪರಸ್ಪರ ವಾಕ್ಸಮರದಲ್ಲಿ ತೊಡಗಿವೆ. ಬಿಜೆಪಿ ಸೋಮವಾರ ರಾಜ್ಯವ್ಯಾಪಿ ಪ್ರತಿಭಟನೆ ಹಮ್ಮಿಕೊಂಡಿದೆ. ಇದಕ್ಕೆ ತಿರುಗೇಟು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರೈತರಿಗೆ ನೀಡಿರುವ ನೋಟಿಸ್‌ಗಳನ್ನು ತಕ್ಷಣ ಹಿಂಪಡೆಯಬೇಕು. ಪಹಣಿಯಲ್ಲಿ ತಿದ್ದುಪಡಿ ಮಾಡಿದ್ದರೆ ಅದನ್ನು ರದ್ದು ಮಾಡಬೇಕು ಎಂದು ಸೂಚನೆ ನೀಡಿದ ಬಳಿಕವೂ ಬಿಜೆಪಿ ರಾಜಕೀಯ ದುರುದ್ದೇಶದಿಂದ ಪ್ರತಿಭಟನೆ ನಡೆಸುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಸಿಬಿಐ, ಇ.ಡಿ ತನಿಖೆಗೆ ಒಪ್ಪಿಸಬೇಕು ಎಂದು ಬಿಜೆಪಿ ಒತ್ತಾಯಿಸಿದೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ವಕ್ಫ್ ಆಸ್ತಿಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಒತ್ತಾಯಿಸಿ ಅಹೋರಾತ್ರಿ ಧರಣಿ ನಡೆಸುವ ತೀರ್ಮಾನ ತೆಗೆದುಕೊಂಡಿದ್ದಾರೆ

‘ಕೈ’– ‘ಕಮಲ’ ವಕ್ಫ್ ಕಾಳಗ

ಇಂದು ಬಿಜೆಪಿ ಪ್ರತಿಭಟನೆ

ಬೆಂಗಳೂರು: ರಾಜ್ಯದಲ್ಲಿ ರೈತರು, ದೇವಸ್ಥಾನಗಳು, ಮಠಗಳು, ಶಾಲೆಗಳ ಆಸ್ತಿಗಳನ್ನು ವಕ್ಫ್ ಆಸ್ತಿ ಎಂದು ನಮೂದಿಸಿರುವುದನ್ನು ಪ್ರತಿಭಟಿಸಿ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಬಿಜೆಪಿ ಪ್ರತಿಭಟನೆ ಹಮ್ಮಿಕೊಂಡಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ, 1974ರ ವಕ್ಫ್ ಆಸ್ತಿ ಕುರಿತ ಗೆಜೆಟ್ ಅಧಿಸೂಚನೆ ಹಿಂಪಡೆಯಲು ಆಗ್ರಹಿಸಿ ಮತ್ತು ಅಧಿಕಾರ ದುರ್ಬಳಕೆ ಕುರಿತು ಸಿಬಿಐ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಜನಾಂದೋಲನ ರೂಪಿಸಲಾಗುವುದು ಎಂದು ಹೇಳಿದರು.

‘ಕರ್ನಾಟಕದ ವಕ್ಫ್‌ನಲ್ಲಿ ನಡೆದಿರುವ ಖೊಟ್ಟಿ ದಾಖಲೆಗಳ ಸೃಷ್ಟಿ, ಆ ಮೂಲಕ ಮಾಡಿಕೊಂಡಿರುವ ಲಾಭದ ಕುರಿತು ಜಾರಿ ನಿರ್ದೇಶನಾಲಯದಿಂದ (ಇ.ಡಿ) ತನಿಖೆ ಆಗಬೇಕು. 50 ವರ್ಷದ ಹಿಂದಿನ ಗೆಜೆಟ್ ನೆಪ ಒಡ್ಡಿ 50 ವರ್ಷ ಯಾವುದೇ ಕ್ರಮ ಕೈಗೊಳ್ಳದೇ, ಈಗ ಅಲ್ಪಸಂಖ್ಯಾತರ ಮತ ಬ್ಯಾಂಕ್ ರಾಜಕಾರಣಕ್ಕಾಗಿ, ತುಷ್ಟೀಕರಣಕ್ಕಾಗಿ, ರಾಜ್ಯ ವಕ್ಫ್ ಮಂಡಳಿ ಮೂಲಕ ಮಾಡಿರುವ ಬೃಹತ್ ದಾಖಲೆಗಳ ಸೃಷ್ಟಿಯ ಎಲ್ಲ ವ್ಯವಹಾರಗಳನ್ನೂ ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ವಕ್ಫ್ ಕಾಯ್ದೆಯ ದುರ್ಬಳಕೆಯ ಕಾರಣಕ್ಕಾಗಿ ರೈತರು, ಜನಸಾಮಾನ್ಯರು, ಮಠಮಾನ್ಯಗಳು, ಹಿಂದೂ ದೇವಾಲಯಗಳು ಸೇರಿದಂತೆ ಎಲ್ಲರೂ ಆತಂಕದಲ್ಲಿದ್ದಾರೆ ಎಂದು ಟೀಕಿಸಿದರು.

ರೈತರು ವಿಭಿನ್ನ ತರಹದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಷ್ಟೇ ಅಲ್ಲದೇ ಆಸ್ತಿ ಕಳೆದುಕೊಳ್ಳುವ ಭೀತಿಯೂ ಎದುರಾಗಿದೆ. ಈ ಸಂಬಂಧ ನೋಟಿಸ್ ಹಿಂಪಡೆದರೆ ಸಾಲದು. ರೈತರ ಆಸ್ತಿಗಳಲ್ಲಿ ರೈತರ ಹೆಸರು ಸ್ಪಷ್ಟವಾಗಿ ನಮೂದಿಸಬೇಕು. ಅಲ್ಲದೇ, 1974ರ ವಕ್ಫ್ ಆಸ್ತಿ ಕುರಿತ ಗೆಜೆಟ್ ಅಧಿಸೂಚನೆ ಹಿಂಪಡೆಯಬೇಕು ಎಂದೂ ಅಶ್ವತ್ಥನಾರಾಯಣ ಒತ್ತಾಯಿಸಿದರು. ವಿರೋಧಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ತೇಜಸ್ವಿಸೂರ್ಯ ಮತ್ತು ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

‘ದುರುದ್ದೇಶದಿಂದ ಪ್ರತಿಭಟನೆ’

‘ವಕ್ಫ್ ಆಸ್ತಿ ವಿಚಾರದಲ್ಲಿ ರೈತರಿಗೆ ನೀಡಿರುವ ನೋಟಿಸ್‌ಗಳನ್ನು ತಕ್ಷಣ ಹಿಂಪಡೆಯಬೇಕು. ಪಹಣಿಯಲ್ಲಿ ಯಾವುದೇ ತಿದ್ದುಪಡಿ ಮಾಡಿದ್ದರೆ ಅದನ್ನೂ ರದ್ದು ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ ನಂತರವೂ ಬಿಜೆಪಿ ನಾಯಕರು ಪ್ರತಿಭಟನೆಗೆ ಮುಂದಾಗಿರುವುದರ ಹಿಂದೆ ರಾಜಕೀಯ ಲಾಭದ ದುರುದ್ದೇಶ ಇದೆಯೇ ಹೊರತು, ಅದರಲ್ಲಿ ರೈತರ ಹಿತಾಸಕ್ತಿ ರಕ್ಷಣೆಯ ಯಾವ ಸದುದ್ದೇಶವೂ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

‘ಕಾನೂನುಬಾಹಿರವಾಗಿ ಹಾಗೂ ನೋಟಿಸ್ ನೀಡದೆ ಪಹಣಿಯಲ್ಲಿ ಯಾವುದೇ ರೀತಿಯ ತಿದ್ದುಪಡಿಗಳನ್ನು ಮಾಡಿದ್ದರೆ ತಕ್ಷಣ ರದ್ದು ಮಾಡಬೇಕು. ಅಧಿಕಾರಿಗಳು ಎಚ್ಚರ ವಹಿಸಿ ರೈತರಿಗೆ ತೊಂದರೆ ಆಗುವ ಯಾವುದೇ ತೀರ್ಮಾನವನ್ನು ಕೈಗೊಳ್ಳಬಾರದು ಎಂದು ನಾನು ಸ್ಪಷ್ಟವಾಗಿ ಸೂಚನೆ ನೀಡಿದ್ದೇನೆ. ಈ ಸೂಚನೆಯ ನಂತರವೂ ಬಿಜೆಪಿ ನಾಯಕರು ಯಾವ ಕಾರಣಕ್ಕಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ’ ಎಂದು ಅವರು ಪ್ರಶ್ನಿಸಿದ್ದಾರೆ.

3A ಪುಟ ನೋಡಿ

ಕೇಂದ್ರ ಸರ್ಕಾರವು ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿದ್ದರಿಂದಾಗಿ ಇಷ್ಟೆಲ್ಲ ಮಾಡುತ್ತಿದ್ದಾರೆ. ಕಾಯ್ದೆ ಜಾರಿಯಾದ ಬಳಿಕ ಏನು ಮಾಡಲು ಆಗುತ್ತದೆ? ಅದಕ್ಕೆ ಬೇರೆ ದಾರಿಯನ್ನು ಹುಡುಕಿಕೊಳ್ಳುತ್ತೇವೆ

ಜಮೀರ್ ಅಹಮದ್ ಖಾನ್, ವಕ್ಫ್ ಮತ್ತು ವಸತಿ ಸಚಿವ

‘ಶಾಶ್ವತ ಪರಿಹಾರಕ್ಕೆ ಕಾನೂನು ತನ್ನಿ’

‘ರಾಜ್ಯದಾದ್ಯಂತ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ಗದ್ದಲಗಳು ಮಾರ್ದನಿಸಿದ್ದು, ರೈತರು ಒಳಗೊಂಡಂತೆ ಸಾರ್ವಜನಿಕರು ಆತಂಕಕ್ಕೆ ಒಳಗಾಗಿದ್ದಾರೆ. ಇದನ್ನು ನಿವಾರಿಸಲು ರಾಜ್ಯ ಸರ್ಕಾರ ಕಾನೂನು ಜಾರಿಗೆ ತರಬೇಕು ಮತ್ತು ಸಾರ್ವಜನಿಕ ಆಸ್ತಿ ಮೇಲೆ ವಕ್ಫ್ ಹಿಡಿತ ಸಾಧಿಸುವುದನ್ನು ತಡೆಯಬೇಕು’ ಎಂದು ಚಿತ್ರದುರ್ಗದ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಒತ್ತಾಯಿಸಿದ್ದಾರೆ.

3A ಪುಟ ನೋಡಿ

ಜಾತ್ರೆ ವಿಜಯಪುರ ತಾಲ್ಲೂಕಿನ ನಾಗಠಾಣ ಗ್ರಾಮದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ಬೀರದೇವರ ಹಾಗೂ ಪರಮಾನಂದ ದೇವರ ಜಾತ್ರಾ ಮಹೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ-ಭಕ್ತಿಯಿಂದ ನಡೆಯಿತು. ವಿವಿಧೆಡೆಗಳಿಂದ ಸೇರಿದ್ದ ಭಕ್ತರು ಭಂಡಾರದಲ್ಲಿ ಮಿಂದೆದ್ದರು –ಪ್ರಜಾವಾಣಿ ಚಿತ್ರ

ನಿರ್ದೇಶಕ ಗುರುಪ್ರಸಾದ್ ಮೃತದೇಹ ಪತ್ತೆ, ಆತ್ಮಹತ್ಯೆ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ, ಸಿನಿಮಾ ನಿರ್ದೇಶಕ ಗುರುಪ್ರಸಾದ್ (52) ಅವರ ಮೃತ ದೇಹವು ನ್ಯೂ ಹೆವನ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್ ಸಂಖ್ಯೆ 11ರಲ್ಲಿ ಕೊಳೆತ ಸ್ಥಿತಿಯಲ್ಲಿ ಭಾನುವಾರ ಪತ್ತೆಯಾಗಿದೆ.

ಗುರುಪ್ರಸಾದ್

ಕೆಲ ದಿನಗಳ ಹಿಂದೆಯೇ ಅವರು ಆತ್ಮಹತ್ಯೆ ಮಾಡಿಕೊಂಡಿರಬೇಕು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನಹಳ್ಳಿ ಬಳಿಯ ಅಪಾರ್ಟ್‌ಮೆಂಟ್‌ನಲ್ಲಿ ಆರು ತಿಂಗಳಿನಿಂದ ಗುರುಪ್ರಸಾದ್ ವಾಸವಾಗಿದ್ದರು. ಸುತ್ತಮುತ್ತಲಿನ ಮನೆಯ ನಿವಾಸಿಗಳಿಗೆ ಕೆಟ್ಟ ವಾಸನೆ ಬಂದ ಕಾರಣ, ಮನೆ ಪರಿಶೀಲನೆ ಮಾಡಿದಾಗ ಸಾವಿಗೀಡಾಗಿರುವ ವಿಚಾರ ಗೊತ್ತಾಗಿದೆ.

ಸ್ಥಳಕ್ಕೆ ಮಾದನಾಯಕನಹಳ್ಳಿ ಠಾಣೆ ಪೊಲೀಸರು ಭೇಟಿ ನೀಡಿದರು. ತವರು ಮನೆಯಲ್ಲಿದ್ದ ಗುರುಪ್ರಸಾದ್ ಅವರ ಪತ್ನಿ ಸುಮಿತ್ರಾ ಅವರನ್ನು ಕರೆಯಿಸಿ, ಮನೆಯ ಬೀಗ ಒಡೆದು ಬಾಗಿಲು ತೆರೆಯಲಾಯಿತು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿತು.

3A ಪುಟ ನೋಡಿ

‘ಸಾಲ ಬಾಧೆ: ಖಿನ್ನತೆಗೆ ಒಳಗಾಗಿದ್ದ ಪತಿ...’

‘ಪತಿ ಸಾವಿನಲ್ಲಿ ಯಾವುದೇ ಅನುಮಾನ ಇಲ್ಲ, ಸಾಲ ಬಾಧೆಯಿಂದಾಗಿ ಮಾನಸಿಕ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆಗೆ ಶರಣಾಗಿದ್ದಾರೆ’ ಎಂದು ನಿರ್ದೇಶಕ ಗುರುಪ್ರಸಾದ್ ಅವರ ಪತ್ನಿ ಸುಮಿತ್ರಾ ಪೊಲೀಸರಿಗೆ ದೂರು ನೀಡಿದ್ದಾರೆ. ಅವರ ದೂರು ಆಧರಿಸಿ ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲಾಗಿದೆ.

‘ಗುರುಪ್ರಸಾದ್ ಅವರಿಗೆ ಈ ಹಿಂದೆ ಆರತಿ ಎಂಬುವವರೊಂದಿಗೆ ವಿವಾಹವಾಗಿತ್ತು. ಅವರಿಂದ ವಿಚ್ಛೇದನ ಪಡೆದುಕೊಂಡಿದ್ದರು. ನಾನು 2020ರಲ್ಲಿ ಗುರುಪ್ರಸಾದ್ ಅವರನ್ನು ವಿವಾಹವಾದೆ. ನಮಗೆ ಮೂರೂವರೆ ವರ್ಷದ ಹೆಣ್ಣು ಮಗುವಿದೆ. ಮದುವೆ ಬಳಿಕ ನಾಲ್ಕು ವರ್ಷ ಕನಕಪುರ ರಸ್ತೆಯಲ್ಲಿರುವ ಎನ್.ಎ.ಪಿ.ಎ ವ್ಯಾಲಿ, ಆರ್‌ಆರ್ ನಗರದ ಈಸಿ ಡಿವೈನ್ ಬ್ಲಾಕ್ ಹಾಗೂ ಬಸವೇಶ್ವರನಗರದ ಬಾಲಾಜಿ ರೆಸಿಡೆನ್ಸಿಯಲ್ಲಿ ವಾಸವಿದ್ದೆವು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

3A ಪುಟ ನೋಡಿ

ಮೊದಲು ತಿಳಿವಳಿಕೆ: ಬಳಿಕ ದಾವೆ

ಸಾಲ ಮರುಪಾವತಿಗೆ ರೈತರು ವಿಫಲರಾದರೆ ನೋಟಿಸ್; ಆಸ್ತಿ ಹರಾಜು ಪ್ರಕ್ರಿಯೆ ಇಲ್ಲ

• ರಾಜೇಶ್ ರೈ ಚಟ್ಲ

ಬೆಂಗಳೂರು: ‘ರೈತರು ಸಾಲ ಮರುಪಾವತಿಸಲು ವಿಫಲರಾದರೆ, ಸಾಲ ಮರು ಪಾವತಿಸುವಂತೆ ತಿಳಿವಳಿಕೆ ಪತ್ರ ನೀಡಬೇಕು. ಆ ಬಳಿಕವೂ ಸಾಲ ಮರು ಪಾವತಿಸದೇ ಇದ್ದರೆ ಅವರ ವಿರುದ್ಧ ದಾವೆ ದಾಖಲಿಸಬೇಕು’ ಎಂದು ಸಹಕಾರಿ ಸಂಘಗಳು, ಬ್ಯಾಂಕುಗಳು ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಸೂಚನೆ ನೀಡಿದೆ.

ಸುಸ್ತಿಯಾದ ಅಲ್ಪಾವಧಿ ಕೃಷಿ ಸಾಲಗಳನ್ನು ರೈತರಿಂದ ವಸೂಲು ಮಾಡಲು ಸಹಕಾರ ಸಂಘಗಳು ಮತ್ತು ಬ್ಯಾಂಕುಗಳಿಗೆ ಅನುಮತಿ ನೀಡುವ ಸಂಬಂಧ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ (ಡಿಸಿಸಿ) ವ್ಯವಸ್ಥಾಪಕ ನಿರ್ದೇಶಕರಿಗೆ ಸಹಕಾರ ಇಲಾಖೆಯು ಅ. 14ರಂದು ಪತ್ರ ಬರೆದಿದೆ.

ಸಹಕಾರ ಸಂಘಗಳ ನಿಬಂಧಕ ಟಿ.ಎಚ್.ಎಂ. ಕುಮಾರ್ ಅವರು ಈ ಪತ್ರವನ್ನು ಬರೆದಿದ್ದಾರೆ. ಅವರು ಎಲ್ಲ ಸಹಕಾರ ಸಂಘಗಳ ಜಂಟಿ ನಿಬಂಧಕರು, ಉಪ ನಿಬಂಧಕರು ಮತ್ತು ಸಹಾಯಕ ನಿಬಂಧಕರಿಗೂ ಪತ್ರ ರವಾನಿಸಿದ್ದಾರೆ.

3A ಪುಟ ನೋಡಿ

ಸುಸ್ತಿಯಾದ ಸಾಲಗಳ ಮಾಹಿತಿ (2024ರ ಆಗಸ್ಟ್ 31ರವರೆಗೆ)

₹594.55 ಕೋಟಿ	ಅಲ್ಪಾವಧಿ ಕೃಷಿ ಸಾಲ
₹81.22 ಕೋಟಿ	ಮಧ್ಯಮಾವಧಿ ಕೃಷಿ ಸಾಲ
₹66.78 ಕೋಟಿ	ಸ್ವಸಹಾಯ ಗುಂಪು (ಎಸ್‌ಎಚ್‌ಜಿ)

ಪತ್ರದಲ್ಲಿರುವ ಸೂಚನೆಗಳೇನು?

- ನಿಗದಿತ ಗಡುವು ದಿನಾಂಕದ ಪೂರ್ವದಲ್ಲಿ ಅಸಲು ಮರುಪಾವತಿಸಿ, ಸರ್ಕಾರದ ಬಡ್ಡಿ ಸಹಾಯಧನದ ಲಾಭ ಪಡೆದುಕೊಳ್ಳಿ ಎಂದು ಗಡುವು ದಿನಾಂಕಕ್ಕಿಂತ ಮೊದಲೇ ರೈತರಿಗೆ ತಿಳಿವಳಿಕೆ ಪತ್ರ ನೀಡಬೇಕು
- ರೈತರು ಸಾಲ ಮರುಪಾವತಿಸಲು ವಿಫಲರಾಗಿ ಸುಸ್ತಿಯಾದರೆ, ಸಾಲ ಮರುಪಾವತಿಸುವಂತೆ ತಿಳಿವಳಿಕೆ ಪತ್ರಗಳನ್ನು ನೀಡಬೇಕು. ನೋಟಿಸ್ ನೀಡಬಾರದು
- ತಿಳಿವಳಿಕೆ ಪತ್ರ ನೀಡಿದ ನಂತರವೂ ಸಾಲ ಮರುಪಾವತಿಸದೇ ಇದ್ದರೆ ಮಾತ್ರ ಸಹಕಾರ ಸಂಘಗಳ ಕಾಯ್ದೆ ಕಲಂ 70ರಡಿ ದಾವೆ ದಾಖಲಿಸಬೇಕು
- ದಾವೆ ದಾಖಲಿಸಿ, ಅವಾರ್ಡ್ ಪಡೆದ ನಂತರ ಅಮಲ್ಜಾರಿ ಅರ್ಜಿ ದಾಖಲಿಸಬೇಕು. ಆದರೆ, ಆಸ್ತಿ ಹರಾಜಿನ ಪ್ರಕ್ರಿಯೆ ಕೈಗೊಳ್ಳಬಾರದು

ಗ್ರೆನೇಡ್ ದಾಳಿ; 12 ಮಂದಿಗೆ ಗಾಯ

ಶ್ರೀನಗರ: ಇಲ್ಲಿನ ತೀವ್ರ ಜನಸಂದಣಿಯ ಮಾರುಕಟ್ಟೆಯೊಂದರ ಬಳಿ ‘ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಬಂಕರ್’ ಗುರಿಯಾಗಿಸಿ ಭಯೋತ್ಪಾದಕರು ಭಾನುವಾರ ಗ್ರೆನೇಡ್ ದಾಳಿ ನಡೆಸಿದ್ದು, 12 ಮಂದಿ ಗಾಯಗೊಂಡಿದ್ದಾರೆ.

9

ಆದಿತ್ಯನಾಥಗೆ ಜೀವ ಬೆದರಿಕೆ ಮಹಿಳೆ ಬಂಧನ

ಮುಂಬೈ (ಪಿಟಿಐ): ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಜೀವ ಬೆದರಿಕೆ ಹಾಕಿದ ಆರೋಪದಡಿ ಮುಂಬೈ ಪೊಲೀಸರು 24 ವರ್ಷದ ಮಹಿಳೆಯೊಬ್ಬರನ್ನು ಬಂಧಿಸಿದ್ದಾರೆ.

ಆರೋಪಿಯನ್ನು ಠಾಣೆ ಜಿಲ್ಲೆಯ ಉಲ್ಲಾಸನಗರದ ನಿವಾಸಿ ಫಾತಿಮಾ ಖಾನ್ ಎಂದು ಗುರುತಿಸಲಾಗಿದೆ. ಮಹಿಳೆಯು ಮಾಹಿತಿ ತಂತ್ರಜ್ಞಾನದಲ್ಲಿ ಬಿ. ಎಸ್‌ಸಿ ಪದವಿ ಪಡೆದಿದ್ದು, ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಂಬೈ ಸಂಚಾರ ಠಾಣೆ ಪೊಲೀಸರ ವಾಟ್ಸ್‌ಆ್ಯಪ್ ಸಂಖ್ಯೆಗೆ ಶನಿವಾರ ಸಂದೇಶ ಬಂದಿತ್ತು. ಅದರಲ್ಲಿ ಆದಿತ್ಯನಾಥ ಅವರು ಸಿ.ಎಂ ಸ್ಥಾನಕ್ಕೆ 10 ದಿನಗಳಲ್ಲಿ ರಾಜೀನಾಮೆ ನೀಡದಿದ್ದಲ್ಲಿ ಬಾಬಾ ಸಿದ್ದೀಕಿ ಮಾದರಿಯಲ್ಲಿ ಹತ್ಯೆಯಾಗುತ್ತಾರೆ ಎಂದು ಬೆದರಿಕೆ ಹಾಕಲಾಗಿತ್ತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ADVERTORIAL

ಮಂಡಿನೋವು

ಸರ್ಜರಿ ಇಲ್ಲದೇ ಉಪಶಮನ

10,000ಕ್ಕೂ ಹೆಚ್ಚು ಮಂದಿಗೆ ಅಲಿವಿಯೇಟ್‌ನಿಂದ ನೋವು ಮುಕ್ತ ಜೀವನ

ಕೇವಲ 30-60 ನಿಮಿಷದ ವಿಧಾನ | ಆಸ್ಪತ್ರೆ ವಾಸವಿಲ್ಲ | ವೇಗವಾದ ಚೇತರಿಕೆ

ಮೊಣಕಾಲಿನ ಅಸ್ಥಿಸಂಧಿವಾತದ ನೋವನ್ನು ಕೇವಲ ಔಷಧಿಗಳಿಂದ ಮಾತ್ರವೇ ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಾಧ್ಯವೇ ಇಲ್ಲ. ಸಂಧಿವಾತವು ತೀವ್ರವಾಗಿರುವವರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದರೂ ಸಹ, ಬಹುಪಾಲು ಜನರು ಶಸ್ತ್ರಚಿಕಿತ್ಸೆಯಿಲ್ಲದ ನೋವಿನಿಂದ ಮುಕ್ತರಾಗಬಹುದು.

ರೇಡಿಯೊ ಫ್ರೀಕ್ವೆನ್ಸಿ ಅಬ್ಲೇಶನ್ (ಆರ್.ಎಫ್.ಎ), ಸರ್ಜರಿಯೇ ಇಲ್ಲದೇ ನೋವನ್ನು ಉಪಶಮಿಸುವ ಆಧುನಿಕ ಚಿಕಿತ್ಸಾ ವಿಧಾನಗಳಲ್ಲಿ ಒಂದಾಗಿದೆ.

ಈ ವಿಧಾನವು ಪೀಡಿತ ಪ್ರದೇಶದಲ್ಲಿನ ನೋವಿಗೆ ಕಾರಣವಾಗುವ ನರಗಳನ್ನು ಗುರುತಿಸಿ, ಅವು ಮೆದುಳಿಗೆ ನೋವಿನ ಸಂದೇಶ ನೀಡದಂತೆ ತಡೆಯುವ ಕೆಲಸ ಮಾಡುತ್ತದೆ. ಇದರಿಂದಾಗಿ ನೋವು ಹಂತ ಹಂತವಾಗಿ ಕಡಿಮೆಯಾಗುತ್ತದೆ.

RADIO FREQUENCY ABLATION FDA APPROVED

ಈ ಪ್ರಕ್ರಿಯೆಯು ಕನಿಷ್ಠ ಛೇದನವನ್ನು ಒಳಗೊಂಡಿರುವುದು ಮಾತ್ರವಲ್ಲದೇ, ಅತೀ ಕಡಿಮೆ ಚೇತರಿಕೆಯ ಸಮಯವನ್ನು ತೆಗೆದುಕೊಳ್ಳುತ್ತದೆ. ಹೆಚ್ಚಿನ ರೋಗಿಗಳು ಅದೇ ದಿನ ಮನೆಗೆ ತೆರಳಿ, ಮರುದಿನ ದಿಂದಲೇ ಸಾಮಾನ್ಯ ಚಟುವಟಿಕೆಗಳನ್ನು ಶುರು ಮಾಡಬಹುದು.

ಮೊಣಕಾಲು ನೋವಿನ ಪ್ರಚೋದಕ ಸ್ಥಳವನ್ನು ಕಂಡುಹಿಡಿಯುತ್ತಿರುವ ವೈದ್ಯರು

ಆರ್‌ಎಫ್‌ಎ ವಿಧಾನದ ಹಂತಗಳು :

1. ತಯಾರಿ: ವೈದ್ಯರು ಸ್ಥಳೀಯ ಅರಿವಳಿಕೆಯನ್ನು ನೋವು ಇರುವ ಜಾಗಕ್ಕೆ ಚುಚ್ಚಿ, ಮಂಡಿಯ ಪ್ರದೇಶ ನಿಷ್ಕ್ರಿಯಗೊಳಿಸುತ್ತಾರೆ.
2. ಚಿತ್ರಣ: ನೋವು ಉಂಟುಮಾಡುವ ನರಗಳನ್ನು ಪತ್ತೆಹಚ್ಚಲು ವೈದ್ಯರು ಎಕ್ಸ್–ರೇ ಅಥವಾ ಅಲ್ಟ್ರಾಸೌಂಡ್ ಅನ್ನು ಬಳಸುತ್ತಾರೆ.
3. ಪರೀಕ್ಷೆ: ಸರಿಯಾದ ನರವನ್ನು ಖಚಿತಪಡಿಸಲು ಸೂಜಿಯ ಮೂಲಕ ವಿದ್ಯುತ್ ಪ್ರವಾಹವನ್ನು ಕಳುಹಿಸಲಾಗುತ್ತದೆ, ಇದು ಜುಮ್ಮೆನಿಸುವಿಕೆ ಸಂವೇದನೆ ಉಂಟುಮಾಡುತ್ತದೆ.
4. ತಾಪನ: ರೇಡಿಯೋ ಆವರ್ತನದ ಮೂಲಕ ಉತ್ಪತ್ತಿಯಾಗುವ ಶಾಖವು ಪೀಡಿತ ಪ್ರದೇಶದ ನರಗಳಿಗೆ ನೀಡಲಾಗುತ್ತದೆ, ಇದು ನರಗಳಲ್ಲಿ ಸಣ್ಣ ಗಾಯವನ್ನು ಉಂಟುಮಾಡಿ ನೋವಿನ ಸಂಕೇತಗಳನ್ನು ಮೆದುಳಿಗೆ ಕಳುಹಿಸದಂತೆ ತಡೆಯುತ್ತದೆ.
5. ಪ್ರಕ್ರಿಯೆಯ ನಂತರ: ಸಣ್ಣ ಬ್ಯಾಂಡೇಜ್ ಅನ್ನು ಅನ್ವಯಿಸಲಾಗುತ್ತದೆ. ನೀವು ಸ್ವಲ್ಪ ವಿಶ್ರಾಂತಿ ಪಡೆದು ಮನೆಗೆ ತೆರಳಬಹುದು. ನಂತರ ನೋವು ಕ್ರಮ ಕ್ರಮವಾಗಿ ಉಪಶಮನಗೊಳ್ಳುತ್ತದೆ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಸರ್ಜರಿ ಇಲ್ಲದೇ ಚಿಕಿತ್ಸೆ ಲಭ್ಯ

ನೋವು ಮುಕ್ತ ಜೀವನಕ್ಕೆ ಇಂದೇ ಸಂಪರ್ಕಿಸಿ
81475 50855
080 23614888

ಅಲಿವಿಯೇಟ್ ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್ಸ್
ಪೀಣ್ಯಾ ದಾಸರಹಳ್ಳಿ Google Reviews 4.8

ಇವರ ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲಿವೆ: ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ವೈಟ್‌ಫೀಲ್ಡ್ | ಜಯನಗರ | ಇಂದಿರಾನಗರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಒಂದು ಬಾರಿ ಪರಿಹಾರ ಯೋಜನೆ
ಓ ಟಿ ಎಸ್ ಕೊನೆಯ ದಿನಾಂಕ 30ನೇ ನವೆಂಬರ್ 2024

ನಿಮ್ಮ ಆಸ್ತಿ ತೆರಿಗೆ ಬಾಕಿಯನ್ನು
➤ ಸಂಪೂರ್ಣ ಬಡ್ಡಿ ಮನ್ನಾ
ಹಾಗೂ
➤ ಸಂಪೂರ್ಣ ದಂಡ ರಹಿತ#
ದೂಂದಿಗೆ ಪಾವತಿಸಿ

ತಡ ಮಾಡದಿರಿ! ಕಡೆಯ ದಿನಾಂಕದವರೆಗೆ ಕಾಯದಿರಿ

#ದಂಡ ಕೇವಲ ರೂ.100/- ಪ್ರತಿ ವರ್ಷಕ್ಕೆ

ಇಲ್ಲಿ ಪಾವತಿಸಿ:- https://bbmptax.karnataka.gov.in

ಓ ಟಿ ಎಸ್ ಯೋಜನೆ ಅಂತ್ಯವಾದಲ್ಲಿ ನಿಮ್ಮ ಬಾಕಿ ಆಸ್ತಿ ತೆರಿಗೆಯು 1ನೇ ಡಿಸೆಂಬರ್ 2024 ರಿಂದ ದುಪ್ಪಟ್ಟಿಗಿಂತ ಹೆಚ್ಚಾಗುವುದು

ಒಂದು ನಗರ – ಒಂದು ಸಂಖ್ಯೆ
ಬೃ.ಬೆಂ.ಮ.ಪಾ ಕುಂದುಕೊರತೆಗಳಿಗೆ ಸಂಪರ್ಕಿಸಿ 1533

ಕಳೆದ ವರ್ಷಕ್ಕೆ ಹೋಲಿಸಿದರೆ ಕಣ್ಣಿಗೆ ಗಾಯವಾದವರ ಸಂಖ್ಯೆ ಏರಿಕೆ • ಹತ್ತು ಮಕ್ಕಳಿಗೆ ಗಂಭೀರ ಸ್ವರೂಪದ ಗಾಯ

ಪಟಾಕಿ ಅವಗಢ: ನೂರಕ್ಕೂ ಹೆಚ್ಚು ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ ಮೂರು ದಿನಗಳಲ್ಲಿ (ಅ.31ರಿಂದ ನ.3ರವರೆಗೆ) ಮೂರು ಆಸ್ಪತ್ರೆಗಳಲ್ಲಿ ಪಟಾಕಿ ಸಿಡಿತದಿಂದ ಕಣ್ಣಿಗೆ ಗಾಯ ಮಾಡಿಕೊಂಡಿರುವ ನೂರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಪಟಾಕಿ ಸಿಡಿಸುತ್ತಿದ್ದವರ ಜೊತೆಗೆ, ಪಟಾಕಿ ಸಿಡಿಸುವುದನ್ನು ನೋಡುತ್ತಿದ್ದವರಿಗೆ ಹಾಗೂ ಪಟಾಕಿ ತ್ಯಾಜ್ಯದ ಪಕ್ಕ ನಡೆದು ಹೋಗುತ್ತಿದ್ದವರಿಗೂ ಪಟಾಕಿ ಸಿಡಿದು ಗಾಯಗಳಾಗಿದ್ದು, ಅವರೂ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ನಾರಾಯಣ ನೇತ್ರಾಲಯದಲ್ಲಿ 73, ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ 53 , ಶಂಕರ್ ಕಣ್ಣಿನ ಆಸ್ಪತ್ರೆಯಲ್ಲಿ 18 ಪ್ರಕರಣ ದಾಖಲಾಗಿವೆ. ಇವರಲ್ಲಿ ಕೆಲವರು ಹೊರ ರೋಗಿಯಾಗಿ ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ 38 ಮಂದಿ ಹೊರ ರೋಗಿಗಳು, 15 ಮಂದಿ ಒಳ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಗಂಭೀರವಾಗಿ ಗಾಯಗೊಂಡವರು 23 ಮಂದಿ. ನಾಲ್ವರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಇಲ್ಲಿನ ಒಟ್ಟು ಪ್ರಕರಣಗಳಲ್ಲಿ 34 ಮಕ್ಕಳಿದ್ದಾರೆ.

ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ ದಾಖಲಾಗಿರುವ 18 ಪ್ರಕರಣಗಳಲ್ಲಿ, 14 ಮಕ್ಕಳ ಪ್ರಕರಣಗಳಾಗಿವೆ. ಮೂರು ವರ್ಷದಿಂದ 14 ವರ್ಷಗಳವರೆಗಿನ ಮಕ್ಕಳು ಗಾಯಗೊಂಡಿದ್ದಾರೆ. ಐವರು ಮಕ್ಕಳು ಗಂಭೀರವಾಗಿ ಗಾಯಗೊಂಡಿದ್ದಾರೆ. ಮಕ್ಕಳಲ್ಲದೆ ನಾಲ್ವರು ವಯಸ್ಕರರೂ ವಿವಿಧೆಡೆ ಗಾಯಗೊಂಡಿದ್ದು, 52 ವರ್ಷದ ವ್ಯಕ್ತಿಯೊಬ್ಬರಿಗೆ ಗಂಭೀರ ಗಾಯಗಳಾಗಿವೆ. 'ಎಲ್ಲರಿಗೂ ಪ್ರಥಮ ಚಿಕಿತ್ಸೆ ನೀಡಲಾಗಿದೆ. ಈ ವಾರ ಮತ್ತೆ ಚಿಕಿತ್ಸೆಗೆ ಬರಲು ತಿಳಿಸಲಾಗಿದೆ' ಎಂದು ಕರ್ತವ್ಯದಲ್ಲಿರುವ ವೈದ್ಯರು ತಿಳಿಸಿದ್ದಾರೆ.

ನಾರಾಯಣ ನೇತ್ರಾಲಯದಲ್ಲಿ ದಾಖಲಾಗಿರುವ ಒಟ್ಟು ಪ್ರಕರಣಗಳಲ್ಲಿ 35 ಮಕ್ಕಳು, 38 ಮಂದಿ ವಯಸ್ಕರರು ಸೇರಿದ್ದಾರೆ. ಹಾನಿಗೊಳಗಾದವರಲ್ಲಿ ಯುವ ಜನರೇ ಹೆಚ್ಚಾಗಿದ್ದಾರೆ. 'ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಕಣ್ಣಿನ ಗಾಯಗಳು ಹಾಗೂ ತುರ್ತು ಪ್ರಕರಣಗಳು ಹೆಚ್ಚಾಗಿವೆ' ಎಂದು ನೇತ್ರಾಲಯದ ಅಧ್ಯಕ್ಷ ಡಾ. ರೋಹಿತ್ ಶೆಟ್ಟಿ ತಿಳಿಸಿದ್ದಾರೆ.

'ಪಟಾಕಿ ಹೊಡೆಯುವುದನ್ನು ನೋಡುತ್ತಾ ನಿಂತಿದ್ದ 37 ಮಂದಿಯ ಕಣ್ಣಿಗೆ ಗಾಯಗಳಾಗಿವೆ. ಕೈಯಲ್ಲಿದ್ದ ಪಟಾಕಿ ಸಿಡಿದು 10 ವರ್ಷದ ಬಾಲಕನೊಬ್ಬನ ಕಣ್ಣಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಅವನಿಗೆ ತೀವ್ರ ನಿಗಾ ಘಟಕದಲ್ಲಿ ದಾಖಲಿಸಿ, ಚಿಕಿತ್ಸೆ ನೀಡಲಾಗಿದೆ. ಹತ್ತು ಮಕ್ಕಳು ಗಂಭೀರವಾಗಿ ಗಾಯಗೊಂಡಿದ್ದಾರೆ' ಎಂದು ತಿಳಿಸಿದರು.

ತ್ಯಾಜ್ಯದಲ್ಲಿ ಬಿದ್ದಿದ್ದ ಪಟಾಕಿ ಸಿಡಿದು ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ವ್ಯಕ್ತಿಯೊಬ್ಬರ ಕಣ್ಣಿನ ಕಾರ್ನಿಯಲ್‌ಗೆ ಹಾನಿಯಾಗಿದೆ. ಇದು ಆಂತರಿಕ ರಕ್ತಸ್ರಾವಕ್ಕೆ ಕಾರಣವಾಗಿದೆ. ಅವರನ್ನು ತೀವ್ರ ನಿಗಾ ಘಟಕದಲ್ಲಿರಿಸಿ ಚಿಕಿತ್ಸೆ ನೀಡಲಾಗಿದೆ ರೋಹಿತ್ ವಿವರಿಸಿದರು.

ಗಾಯಾಳುಗಳ ಸಂಖ್ಯೆ

ಆಸ್ಪತ್ರೆ	ಸಂಖ್ಯೆ
ನಾರಾಯಣ ನೇತ್ರಾಲಯದಲ್ಲಿ	73
ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ	53
ಶಂಕರ್ ಕಣ್ಣಿನ ಆಸ್ಪತ್ರೆಯಲ್ಲಿ	18
ಒಟ್ಟು	144

ಮುಖ್ಯಾಂಶಗಳು

- ಪಟಾಕಿ ಸಿಡಿಸುವುದನ್ನು ನೋಡುತ್ತಿದ್ದವರಿಗೂ ಹಾನಿ
- ಗಾಯಗೊಂಡಿರುವವರಲ್ಲಿ ಮಕ್ಕಳೇ ಹೆಚ್ಚು
- ತುರ್ತು ಪ್ರಕರಣಗಳು ಅಧಿಕ

ಪಟಾಕಿಯಿಂದ ಗಾಯಗೊಂಡ ಮಕ್ಕಳಿಗೆ ಮಿಂಟೋ ಕಣ್ಣಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಪಟಾಕಿ ಹಚ್ಚಿ ಪುಂಡಾಟ: ದಂಡ

ಬೆಂಗಳೂರು: ದ್ವಿಚಕ್ರ ವಾಹನ ಚಾಲನೆ ವೇಳೆ ಪಟಾಕಿಗೆ ಬೆಂಕಿ ಹಚ್ಚಿ, ಇತರರೆಡೆ ಎಸೆಯುತ್ತಾ ಪುಂಡಾಟ ಪ್ರದರ್ಶಿಸುತ್ತಿದ್ದ ಇಬ್ಬರು ವ್ಯಕ್ತಿಗಳಿಗೆ ಹೆಣ್ಣೂರು ಸಂಚಾರಿ ಪೊಲೀಸರು ದಂಡ ವಿಧಿಸಿದ್ದಾರೆ. ಹೆಣ್ಣೂರು ಬಳಿಯ ಎಚ್.ಬಿ.ಆರ್. ಲೇಔಟ್ ಬಳಿ ಹೆಲ್ಮೆಟ್ ಧರಿಸದೆ ಅಡ್ಡಾದಿಡ್ಡಿಯಾಗಿ ದ್ವಿಚಕ್ರ ವಾಹನದಲ್ಲಿ ಸಾಗುತ್ತಿದ್ದ ಇಬ್ಬರು, ಪಟಾಕಿ ಹಚ್ಚಿ ರಸ್ತೆಯತ್ತ ಎಸೆಯುತ್ತಿದ್ದರು.

ಪುಂಡಾಟವನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದ ವ್ಯಕ್ತಿಯೊಬ್ಬರು, 'ಎಕ್ಸ್' ಮೂಲಕ ಪೊಲೀಸರಿಗೆ ಮಾಹಿತಿ ನೀಡಿದ್ದರು. ತಕ್ಷಣ ಕಾರ್ಯಪ್ರವೃತ್ತರಾದ ಹೆಣ್ಣೂರು ಸಂಚಾರ ಪೊಲೀಸರು ಇಬ್ಬರನ್ನು ಪತ್ತೆಹಚ್ಚಿ ಹೆಲ್ಮೆಟ್‌ರಹಿತ ಚಾಲನೆ, ಚಾಲನಾ ಪರವಾನಗಿ ಇಲ್ಲದಿರುವುದು, ಅಪಾಯಕಾರಿ ಚಾಲನೆ, ಸಂಚಾರಕ್ಕೆ ಅಡಚಣೆ ಮಾಡುತ್ತಿರುವುದರ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಿಧಿಸಿದ್ದಾರೆ.

ಸುದ್ದಿ 2 ನಿಮಿಷ

ದರ್ಶನ್‌ಗೆ ಶಸ್ತ್ರಚಿಕಿತ್ಸೆ: ಇಂದು ನಿರ್ಧಾರ

ಬೆಂಗಳೂರು: ಬೆನ್ನುನೋವು ಚಿಕಿತ್ಸೆಗಾಗಿ ಕೆಂಗೇರಿಯ ಬಿಜಿಎಸ್ ಗ್ಲೋಬಲ್ ಆಸ್ಪತ್ರೆಗೆ ದಾಖಲಾಗಿರುವ ರೇಣುಕಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ, ನಟ ದರ್ಶನ್ ಅವರಿಗೆ ಎಂಆರ್‌ಐ, ಎಕ್ಸ್‌ರೇ ಹಾಗೂ ರಕ್ತ ಪರೀಕ್ಷೆ ಮಾಡಲಾಗಿದ್ದು, ಪರೀಕ್ಷಾ ವರದಿ ಬಂದ ಬಳಿಕ ವೈದ್ಯರು ಚಿಕಿತ್ಸೆಯ ಸ್ವರೂಪವನ್ನು ನಿರ್ಧರಿಸಲಿದ್ದಾರೆ.

ನರರೋಗ ತಜ್ಞ ಡಾ.ನವೀನ್ ಅಪ್ಪಾಜಿಗೌಡ ನೇತೃತ್ವದ ತಂಡ ಶುಕ್ರವಾರ ದರ್ಶನ್ ಅವರ ಆರೋಗ್ಯ ತಪಾಸಣೆ ನಡೆಸಿದ ವೇಳೆ ಅವರ ಎಡಗಾಲಿನ ಸ್ಪರ್ಶ ಸಂವೇದನೆ ಕಡಿಮೆ ಇತ್ತು. ಹಾಗಾಗಿ ಫಿಸಿಯೋಥೆರಪಿ ಚಿಕಿತ್ಸೆ ಆರಂಭಿಸಿ, ನೋವು ನಿವಾರಕ ಔಷಧಗಳನ್ನು ನೀಡಲಾಗುತ್ತಿದೆ.

'ಪರೀಕ್ಷಾ ವರದಿ ಸೋಮವಾರ ಕೈಸೇರಲಿದ್ದು, ಬಳಿಕ ಶಸ್ತ್ರ ಚಿಕಿತ್ಸೆ ಮಾಡಬೇಕಾ ಅಥವಾ ಫಿಸಿಯೋಥೆರಪಿ ಚಿಕಿತ್ಸೆಯಿಂದ ಗುಣಪಡಿಸಬಹುದೇ ಎಂದು ನಿರ್ಧರಿಸಲಾಗುವುದು. ಯಾವುದೇ ನಿರ್ಧಾರ ಕೈಗೊಳ್ಳುವ ಮುನ್ನ ಕುಟುಂಬದ ಸದಸ್ಯರ ಜತೆ ಚರ್ಚಿಸಲಾಗುವುದು' ಎಂದು ವೈದ್ಯರು ತಿಳಿಸಿದ್ದಾರೆ.

ದರ್ಶನ್ ಭೇಟಿಗೆ ಬಂದು ಹೋಗುವವರ ಬಗ್ಗೆ ಪೊಲೀಸರು ದಾಖಲಾತಿ ಪುಸ್ತಕ ಪರಿಶೀಲಿಸುತ್ತಿದ್ದಾರೆ. ಅವರ ಕುಟುಂಬದವರು, ಆಪ್ತರು ಮತ್ತು ವಕೀಲರಿಗೆ ಮಾತ್ರ ಭೇಟಿಗೆ ಅವಕಾಶ ನೀಡಲಾಗಿದೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ದರ್ಶನ್ ಅವರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ನ್ಯಾಯಾಲಯ ಆರು ವಾರಗಳ ಮಧ್ಯಂತರ ಜಾಮೀನು ನೀಡಿತ್ತು.

'ಪರ್ಯಾಯ ರಾಜಕೀಯ ಅಗತ್ಯ'

ಬೆಂಗಳೂರು: 'ರಾಜ್ಯದಲ್ಲಿರುವ ಕಾಂಗ್ರೆಸ್, ಜೆಡಿಎಸ್, ಬಿಜೆಪಿಯ ನಾಯಕರು ಒಬ್ಬರ ಮೇಲೆ ಒಬ್ಬರು ಆರೋಪ ಮಾಡುತ್ತಾ ಎಲ್ಲರೂ ಅಕ್ರಮ ಆಸ್ತಿ ಮಾಡಿಕೊಳ್ಳುತ್ತಿದ್ದಾರೆ. ರಾಜ್ಯದ ಜನರ ಒಳಿತಿಗಾಗಿ ಪರ್ಯಾಯ ರಾಜಕೀಯ ಕಟ್ಟಬೇಕಿದೆ' ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಭಾನುವಾರ ಇಲ್ಲಿ ತಿಳಿಸಿದರು.

ಬಿಎಸ್‌ಪಿ ನಗರದಲ್ಲಿ ಹಮ್ಮಿಕೊಂಡಿದ್ದ 'ಮುಂದಿನ ರಾಜಕೀಯ ಭವಿಷ್ಯ' ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ಮಾತನಾಡಿದರು.

'ಹಣ, ಹೆಂಡ, ಸೀರೆ, ಕುಪ್ಪಸ ನೀಡಿ ಮತದಾರರನ್ನೂ ಪಕ್ಷಗಳು ಹಾಳುಮಾಡಿವೆ. ಮತ ಮಾರಾಟ ಮಾಡದೇ ತಮ್ಮ ಏಳಿಗೆಗಾಗಿ ಕೆಲಸ ಮಾಡುವವರಿಗೆ ಮತ ನೀಡುವಂತೆ ಬೂತ್ ಮಟ್ಟದಲ್ಲಿ ಜಾಗೃತಿ ಮೂಡಿಸಬೇಕು. 2028ರ ಚುನಾವಣೆಯಲ್ಲಿ ಬಿಎಸ್‌ಪಿ ಪರ್ಯಾಯ ಶಕ್ತಿಯಾಗಿ ಅಧಿಕಾರಕ್ಕೆ ಬರಬೇಕು' ಎಂದು ಹೇಳಿದರು.

ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಸಂಯೋಜಕ ಎಂ. ಗೋಪಿನಾಥ್, ರಾಜ್ಯ ಸಂಯೋಜಕ ಆರ್. ಮುನಿಯಪ್ಪ, ರಾಜ್ಯ ಉಪಾಧ್ಯಕ್ಷರಾದ ವೆಂಕಟಗಿರಯ್ಯ, ಗುರುಮೂರ್ತಿ, ಲೋಕೇಶ್ ಚಂದ್ರ, ಪ್ರಧಾನ ಕಾರ್ಯದರ್ಶಿಗಳಾದ ಅಂದನಪ್ಪ, ವೆಂಕಟೇಶ್, ಸರ್ದಾರ್ ಗೋಡಚಿ, ಎ. ಡಿ.ಶಿವಪ್ಪ, ಕಾರ್ಯದರ್ಶಿಗಳಾದ ರಮೇಶ್ ಕತ್ರಿಗುಪ್ಪೆ, ಬೈಲಪ್ಪ ಮತ್ತು ರಾಜ್ಯ ಖಜಾಂಚಿ ಸುಧಾ ಚಿತ್ರಲೇಖಾ ಅವರು ಭಾಗವಹಿಸಿದ್ದರು.

PUBLIC NOTICE

Our Clients intends to transact with the owners of the Schedule Property viz. **MR. SHRAVAN GUPTA** (PAN : ACNPG1870D and AADHAAR NO. : 9369 5757 9345), son of Late R A Nagaraja Gupta, R/at No. 10, First Cross, Gupta Layout, South End Road, Basavanagudi, Bangalore – 560 004; and **M/s. S R V RETAIL** (PAN : ABKFS9719D), a registered Partnership Firm, having its Office at Shop No. 306, Third Floor, No. 8, Prabhat Complex, Kempegowda Road, Bangalore – 560 009, represented by its Partners, **MR. M D KASTURI RANGA** (PAN : ACEPK1088L & Aadhaar No. 4205 7464 5941), son of Dattaraj M K, R/at No. 10, Ranga Rao Road, Opp. Keshava Krupa, Basavanagudi, Bangalore – 560 004, who represented that they are the joint and absolute owners of industrially converted land in **Survey No. 94/4** measuring 03 Acres 16 Guntas, situated at **KACHARAKANAHALLI** Village, **JADIGENAHALLI** Hobli, **HOSKOTE** Taluk, **BANGALORE RURAL** District, mentioned in the Schedule hereunder.

Any person/s having objection for the transaction with the above person/s in respect of the Schedule Property or claims to have any right, title or interest in the Schedule Property, he/she shall intimate the same in writing with documentary evidence to the undersigned within 10 (Ten) days from the date of publication of this notice. In the event no such claim is received within the stipulated time, our client shall proceed with aforesaid transaction as if no such claim exists or that they have been waived or abandoned.

SCHEDULE PROPERTY

All that piece and parcel of immovable property being undeveloped industrially converted land (Official Memorandum/Conversion Order bearing No. ALN(HJ)CR/86/2011-12 dated 09/04/2012, issued by the Deputy Commissioner, Bangalore District) in **Survey No. 94/4** measuring 03 Acres 16 Guntas, situated at **KACHARAKANAHALLI** Village, **JADIGENAHALLI** Hobli, **HOSKOTE** Taluk, **BANGALORE RURAL** District, together with all rights, appurtenances whatsoever whether underneath or above the surface and bounded on:
East by:Road; West by:Land in Survey No. 90 and 91;
North by: Land in Survey No. 94/3; South by:Land in Survey No. 68.

Sd/-
Divya Vani H.K., B.A., LL.M.
Advocate
RAVI LOBO & CO.,
#37/7, Meanee Avenue, S.C. Garden, Tank Road
Opp to Lakeside Hospital
(near Ulsoor Lake) Bangalore - 560 042
Office: +9180 25591702 / 41123363

Place: Bangalore
Dated: 02/11/2024

ಕುಂಟೆಯಲ್ಲಿ ಮುಳುಗಿ ಮೂವರ ಸಾವು

ಚಿಕ್ಕಬಳ್ಳಾಪುರ: ದೀಪಾವಳಿ ಹಬ್ಬಕ್ಕೆ ಸಂಬಂಧಿಕರ ಮನೆಗೆ ಬಂದಿದ್ದ ಮೂವರು ಕುಂಟೆಯಲ್ಲಿ ಮುಳುಗಿ ಮೃತಪಟ್ಟ ಘಟನೆ ಗುಡಿಬಂಡೆ ತಾಲ್ಲೂಕಿನ ಕಮ್ಮತ್ತನ ಹಳ್ಳಿಯಲ್ಲಿ ಭಾನುವಾರ ನಡೆದಿದೆ.

ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ರಂಜಿತ್ (27), ಎಂ.ಬಿ.ಎ. ವಿದ್ಯಾರ್ಥಿನಿ ರಮ್ಯಾ (24), ಬಿ.ಇ. ವಿದ್ಯಾರ್ಥಿ ಅಭಿಲಾಷ್ (21) ಮೃತರು.

ಒಂದೇ ಕುಟುಂಬದ ಇವರು ದೀಪಾವಳಿ ಹಬ್ಬಕ್ಕೆ ಕಮ್ಮತ್ತನಹಳ್ಳಿ ಸಂಬಂಧಿಕರ ಮನೆಗೆ ಬಂದಿದ್ದರು. ಊಟದ ನಂತರ ಕುಂಟೆಗೆ ಇಳಿದಿದ್ದಾರೆ. ಕುಂಟೆ ಆಳವಾಗಿದ್ದು ನೀರು ತುಂಬಿತ್ತು.

ರಮ್ಯಾ ನೀರಿನಲ್ಲಿ ಮುಳುಗುತ್ತಿರುವುದನ್ನು ಕಂಡು ಅಭಿಲಾಷ್, ರಂಜಿತ್ ರಕ್ಷಿಸಲು ಮುಂದಾದರು. ಈಜು ಬಾರದ ಮೂವರೂ ಕುಂಟೆಯಲ್ಲಿ ಮುಳುಗಿ ಮೃತಪಟ್ಟರು.

'ಪರಿಸರ ಸಮತೋಲನಕ್ಕಾಗಿ ಗಿಡ ನೆಡಿ'

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: 'ಮನುಷ್ಯನಿಗೆ ಜೀವಿಸಲು ಬೇಕಾಗಿರುವ ಪ್ರಾಣವಾಯು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಅದಕ್ಕಾಗಿ ಹೆಚ್ಚು ಗಿಡಗಳನ್ನು ನೆಡಬೇಕು' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ಶಿವಗಂಗೆಯ ಹಿಪ್ಪೆ ವನದಲ್ಲಿ ಏರ್ಪಡಿಸಿದ್ದ ಸಸಿ ನೆಡುವ ಹಾಗೂ ಜೈವಿಕ ಉದ್ಯಾನ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಗಿಡ ನೆಟ್ಟು ಅವರು ಮಾತನಾಡಿದರು.

'70ರ ದಶಕದಲ್ಲಿ ನೀರಿನ ಬಾಟಲ್‌ಗಳು ಬಂದವು. ಇವತ್ತು ನೀರಿನ ಬಾಟಲ್ ಎಲ್ಲೆಡೆ ಆವರಿಸಿಕೊಂಡಿದೆ. ಅದರಂತೆ ಮುಂದಿನ ದಿನಗಳಲ್ಲಿ ಮಕ್ಕಳು ಶಾಲಾ ಬ್ಯಾಗ್‌ಗಳನ್ನು ಬೆನ್ನಿಗೆ ಹಾಕಿಕೊಳ್ಳುವಂತೆ, ಮನುಷ್ಯರು ಆಮ್ಲಜನಕದ ಸಿಲಿಂಡರ್ ಹಾಕಿಕೊಂಡು ಓಡಾಡಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಜನ್ಮದಿನ, ಮದುವೆ ವಾರ್ಷಿಕೋತ್ಸವ ಸಹಿತ ವಿವಿಧ ಕಾರ್ಯಕ್ರಮಗಳನ್ನು ಎಲ್ಲರೂ ವಿಭಿನ್ನವಾಗಿ ಆಚರಣೆ ಮಾಡಿಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಗಿಡಗಳನ್ನು ನೆಟ್ಟು, ಪೋಷಣೆ ಮಾಡಿ ಬೆಳೆಸಿದರೆ ಶುಭ ಕಾರ್ಯಕ್ಕೂ ಬೆಲೆ, ಪರಿಸರಕ್ಕೂ ಕೊಡುಗೆ ನೀಡಿದಂತೆ ಆಗುತ್ತದೆ' ಎಂದು ಹೇಳಿದರು.

ವಿಜಯನಗರ ಆದಿಚುಂಚನಗಿರಿ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ ಭಾಗವಹಿಸಿದ್ದರು.

ಶಿವಗಂಗೆಯ ಹಿಪ್ಪೆ ವನದಲ್ಲಿ ಗಿಡ ನೆಟ್ಟು ನೀರೆರೆದ ನಿರ್ಮಲಾನಂದ ಸ್ವಾಮೀಜಿ

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Industrial And Factory

AVAILABLE OF Industrial Shed of 95000sqft at Soukya Road, Whitefield. Available Built-to-Suit Warehouse 160000 sqft Vijipura Hoskote Contact: 9341234288/ 9663224353/ 9845417487.

REAL ESTATE BUYING

Sites

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED/ AVAILABLE 50x80, 40x60, 30x40, 20x30, BDA Sites Vishveswaraiah Layout, Kempegowda Layout. Contact: 9886634578/ 9742681666

REAL ESTATE SELLING

Sites

Kempegowda Layout

***NADAPRABHU* KEMPEGOWDA** LAYOUT 1st-Block K Sector 30x40 W/F 84 Lakhs,7th Block _F Sector 50x80 West-facing behind 100feet Road on 50 feet road, Nayara Petrol bunk backside and Vishveshwaraiah Layout 3rd-Block 40x60 East-facing. Contact:9686469799

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, **PRASANTH** S/o Manjunath K S. Residing at # 379, Garaganduru, Kodagu, Karnataka-571251 have changed my name to **PRASHANTH K M** vide affidavit dated 15.10.2024 before Notary C.V. Earappa, Bengaluru. Henceforth I shall be known as **PRASHANTH K M** only.

I, B.MARIYA W/o K Balachander, residing at No.170/A,40th Cross, 2nd Block, Near ESI Hospital, Rajajinagar, Bangalore-560010 havechanged my name to B HARIPRIYA vide affidavit dated 29.10.24 Sworn before notary: Aruna.V, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact:
+91 9901641752 | +91 9845114560 | +91 9886213331

ನಗರದಲ್ಲಿ ಇಂದು

ವಿಜ್ಞಾನ ಮತ್ತು ತಂತ್ರಜ್ಞಾನ ಜಾಗೃತಿ ಎಕ್ಸ್‌ಪೊ: ಅತಿಥಿಗಳು: ಅಶೋಕ್ ಆಲೂರ್, ತುಷಾರ್ ಕಾಂತಿ ಬೆಹೆರಾ, ಎಂ.ವಿ. ಧನಂಜಯ, ಎಸ್.ವಿ. ಸುರೇಶ, ಆಯೋಜನೆ: ಪಾರ್ಟೆಕ್ಸ್ ಟ್ರೇಡ್ ಟೆಕ್ನಾಲಜೀಸ್ ಲಿಮಿಟೆಡ್, ಸ್ಥಳ: ದಿ ಕ್ಯಾಪಿಟಲ್ ಹೋಟೆಲ್, ರಾಜಭವನ ರಸ್ತೆ, ಮಧ್ಯಾಹ್ನ 3

ವಿ. ರಾಣಿ ಗೋವಿಂದರಾಜು ದತ್ತಿ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು: ರಾಮಣ್ಣ ಕೋಡಿಹೊಸಹಳ್ಳಿ, ಅಭಿನಂದನಾ ನುಡಿ: ಎಂ. ಪ್ರಕಾಶಮೂರ್ತಿ, ಉಪಸ್ಥಿತಿ: ವಿ. ರಾಣಿ ಗೋವಿಂದರಾಜು, ಅಧ್ಯಕ್ಷತೆ: ಪಿ.ವಿ. ನಾರಾಯಣ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಕನ್ನಡ ಹವ್ಯಾಸಿ ರಂಗೋತ್ಸವಕ್ಕೆ ಚಾಲನೆ: ಕೆ.ವಿ. ನಾಗರಾಜಮೂರ್ತಿ, ಅತಿಥಿ: ಅರಮನೆ ಶಂಕರ್, ಉಪಸ್ಥಿತಿ: ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, 'ಯಕ್ಷಲಾಪ' ಏಕವ್ಯಕ್ತಿ ನಾಟಕ ಪ್ರದರ್ಶನ: ರಚನೆ: ನಾರಾಯಣ ಘಟ್ಟ, ನಿರ್ದೇಶನ: ಎಂ.ಸಿ. ನಾಗರಾಜ್, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಸಭಾಂಗಣ, ಕೆಂಪೇಗೌಡನಗರ, ಸಂಜೆ 6

ಎಲ್‌ಒಸಿ ಬಳಿ ಫಿರಂಗಿ ಪರೀಕ್ಷೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ನಿಯಂತ್ರಣಾ ರೇಖೆ (ಎಲ್‌ಒಸಿ) ಬಳಿ ಪಾಕಿಸ್ತಾನ ಫಿರಂಗಿಗಳ ಪರೀಕ್ಷೆ ನಡೆಸಿದೆ.

ಎಸ್‌ಎಚ್‌-15 ಮತ್ತು 155 ಎಂಎಂ ಟ್ರಕ್ ಅಳವಡಿತ ಹೊವಿಟ್ಜರ್ ಮಾದರಿಯ ಫಿರಂಗಿ ಸೇರಿ ಹಲವು ಶಸ್ತ್ರಾಸ್ತ್ರಗಳ ಪರೀಕ್ಷೆ ನಡೆಸಿದೆ. ಪಾಕಿಸ್ತಾನವು ಗಲ್ಫ್ ಮತ್ತು ಪಾಶ್ಚಿಮಾತ್ಯ ಯುರೋಪ್ ರಾಷ್ಟ್ರಗಳು, ದೀರ್ಘಕಾಲದ ಮಿತ್ರ ಟರ್ಕಿ ಜೊತೆಗೆ ರಕ್ಷಣಾ ಸಂಬಂಧ ಉತ್ತಮ ಪಡಿಸಿಕೊಳ್ಳುತ್ತಿರುವ ಪರಿಣಾಮ ಈ ಬೆಳವಣಿಗೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾದ ರಕ್ಷಣಾ ಕಂಪನಿ ಮೇಲ್ವಿಚಾರಣೆಯಲ್ಲಿ ಗಲ್ಫ್ ರಾಷ್ಟ್ರದ ಸಹಯೋಗದಲ್ಲಿ ನಿರ್ಮಿಸಿದ 155 ಎಂಎಂ ಫಿರಂಗಿಗಳು ಇತ್ತೀಚೆಗೆ ಎಲ್‌ಒಸಿ ಬಳಿ ಸಾಗಿದ್ದನ್ನು ಗಮನಿಸಲಾಗಿದೆ ಎಂದು ತಿಳಿಸಿದ್ದಾರೆ.

ಮನೆಭಾಷೆ ಮನೆಗೆ, ಹೊರಗೆ ಕನ್ನಡವಿರಲಿ

ಕಾವ್ಯಶ್ರೀ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ರಾಮಲಿಂಗೇಶ್ವರ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೆ ಬೇರೆ ಭಾಷಿಕರು ಕನ್ನಡ ನಾಡಿನಲ್ಲಿ ಬದುಕುತ್ತಿದ್ದಾರೆ. ಅವರ ಮನೆ ಭಾಷೆ ಮನೆಯಲ್ಲಿಯೇ ಇರಲಿ. ಹೊರಗೆ ವ್ಯಾಪಾರ, ವ್ಯವಹಾರಗಳಿಗೆ ಕಡ್ಡಾಯವಾಗಿ ಕನ್ನಡ ಬಳಕೆಯಾಗಲಿ ಎಂದು ಸಾಹಿತಿ ಎಸ್. ರಾಮಲಿಂಗೇಶ್ವರ (ಸಿಸಿರಾ) ತಿಳಿಸಿದರು.

ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ ಭಾನುವಾರ ಹಮ್ಮಿಕೊಂಡಿದ್ದ 'ಕಾವ್ಯಶ್ರೀ ಕನ್ನಡ ಸಾಹಿತ್ಯ ಸಮ್ಮೇಳನ'ದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆಂಗ್ಲಭಾಷೆಯೇ ಜೀವನ ಎಂಬ ಭ್ರಮೆಯನ್ನು ಮಕ್ಕಳಲ್ಲಿ ಪೋಷಕರು ಉಂಟುಮಾಡಬಾರದು. ಶಿಶುವಿಹಾರದಿಂದ ಪದವಿಯವರೆಗೂ ಕನ್ನಡ ಪ್ರಥಮ ಭಾಷೆಯಾಗಿ ಓದುವ, ಬರೆಯುವ, ಮಾತನಾಡುವ ವಾತಾವರಣವನ್ನು ಸೃಷ್ಟಿಸಬೇಕು ಎಂದು ಸಲಹೆ ನೀಡಿದರು.

ತಮಿಳರು, ಮಲಯಾಳಿಗರು, ಬಂಗಾಳಿ ಭಾಷಿಕರು ಪ್ರದರ್ಶಿಸುವ ರಾಜ್ಯಾಭಿಮಾನ, ಭಾಷಾಭಿಮಾನ ಕನ್ನಡಿಗರಿಗೆ ಪ್ರೇರಣೆಯಾಗಬೇಕು ಎಂದು ಹೇಳಿದರು.

'ಕಾವ್ಯಶ್ರೀ ಕನ್ನಡ ಸಾಹಿತ್ಯ ಸಮ್ಮೇಳನ'ದಲ್ಲಿ ಸಮ್ಮೇಳನಾಧ್ಯಕ್ಷ ಎಸ್. ರಾಮಲಿಂಗೇಶ್ವರ (ಸಿಸಿರಾ) ದಂಪತಿಯನ್ನು ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ನೆಲ, ಜಲ, ಭಾಷೆ, ಸಂಸ್ಕೃತಿಯ ಎಲ್ಲ ಸಮಸ್ಯೆಗಳನ್ನು ಪರಿಹರಿಸಬೇಕು. ಸರ್ಕಾರವು ಗ್ಯಾರಂಟಿಗಳೊಂದಿಗೆ ವಿದ್ಯೆ, ಉದ್ಯೋಗ, ಆರೋಗ್ಯ ಸುಧಾರಣೆಗೂ ಮಹತ್ವ ನೀಡಬೇಕು ಎಂದರು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಕವಿ ಸುಬ್ಬು ಹೊಲೆಯಾರ್, 'ಕನ್ನಡ ಭಾಷೆಯ ಅನನ್ಯತೆ ಹಾಗೂ ಅಸ್ಮಿತೆಯನ್ನು ನಮ್ಮ ಹಿರಿಯ ಜನಪದರು ಹಾಗೂ ವಚನಕಾರರು ಉಳಿಸಿದ್ದಾರೆ. ತಾಯಿ ಪ್ರಕೃತಿ, ಜೀವಸಂಕುಲವನ್ನು ಪೊರೆಯುವ ಹಾಗೆ, ಕನ್ನಡ ತಾಯಿ ನಮ್ಮನ್ನು ಪೋಷಿಸುತ್ತಾಳೆ. ಗೊಡ್ಡು ಸಂಪ್ರದಾಯಗಳಿಗೆ ನಾವು ಒಗ್ಗಿಹೋಗುವ ಬದಲು ಆಧುನಿಕ ಕ್ರಾಂತಿಗೆ ತೆರೆದುಕೊಳ್ಳಬೇಕು' ಎಂದು ಸಲಹೆ ನೀಡಿದರು.

ರಾಮೋಹಳ್ಳಿ ಸಿದ್ಧಾರೂಢ ಮಿಶನ್ ಟ್ರಸ್ಟ್‌ನ ಆರೂಢ ಭಾರತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಾಹಿತಿಗಳಾದ ವೆಂಕಟೇಶ ಎಸ್. ಸಂಪ, ಮುರಳಿಗೌಡ ಸೀತಿ ಹೊಸೂರು, ಆಶಾ ಶಿವುಗೌಡ, ಚಂದ್ರಶೇಖರ ಮಾಡಲಗೇರಿ, ಮಧು ಅಕ್ಬರಿ, ಎಂ.ಎಸ್. ಆಶಾಲತಾ, ಕುಂಚ ಕಲಾವಿದೆ ಶಾಂತಿ ವಾಸು, ಕಾವ್ಯಶ್ರೀ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಶಿವಣ್ಣ ಜಿ. ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಬಾಹ್ಯ ವ್ಯವಹಾರದಲ್ಲಿ ಕನ್ನಡ ಕಡ್ಡಾಯ ಬಳಕೆ ಆಗಲಿ
- ಕನ್ನಡ ಮಾತನಾಡುವ, ಬರೆಯುವ ವಾತಾವರಣ ಸೃಷ್ಟಿಸಬೇಕು

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

ಕೆಂಪಾಪುರ ಅಗ್ರಹಾರ ಏಳನೇ ಅಡ್ಡರಸ್ತೆಯನ್ನು ಅಗೆದಿದ್ದಾರೆ

'ಅಗೆದಿರುವ ರಸ್ತೆ ಸರಿಪಡಿಸಿ'

ಗಾಂಧಿನಗರ ವಿಧಾನಸಭೆ ಕ್ಷೇತ್ರದ ವಾರ್ಡ್ ಸಂಖ್ಯೆ 121ರ ಕೆಂಪಾಪುರ ಅಗ್ರಹಾರ ಏಳನೇ ಅಡ್ಡರಸ್ತೆಯ ಸೇಂಟ್ ಮಾರ್ಟಿನ್ ಶಾಲೆಗೆ ಸಂಪರ್ಕಿಸುವ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ರಸ್ತೆ ಅಭಿವೃದ್ಧಿ ಮಾಡುವುದಾಗಿ ಬಹಳ ದಿನಗಳ ಹಿಂದೆ ಹೀಗೆ ರಸ್ತೆಯನ್ನು ಅಗೆಯಲಾಗಿದೆ. ಆದರೆ, ಈವರೆಗೂ ಕಾಮಗಾರಿ ನಡೆದಿಲ್ಲ. ಈ ಭಾಗದಲ್ಲಿ ಹಲವಾರು ಶಾಲಾ-ಕಾಲೇಜುಗಳಿದ್ದು, ರಸ್ತೆ ಅಧ್ವಾನವಾಗಿರುವುದರಿಂದ ಪ್ರತಿನಿತ್ಯ ವಿದ್ಯಾರ್ಥಿಗಳು ತರಗತಿಗಳಿಗೆ ತಡವಾಗಿ ಹೋಗುತ್ತಿದ್ದಾರೆ. ರಸ್ತೆಯನ್ನು ಅಗೆದಿರುವುದರಿಂದ ಪ್ರತಿನಿತ್ಯ ದೂಳಿನ ಮಜ್ಜನವಾಗುತ್ತಿದೆ. ಕೂಡಲೇ ಬಿಬಿಎಂಪಿ ಈ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಎಂ. ಉಮಾಶಂಕರಬಾಬು, ಕೆಂಪಾಪುರ ಅಗ್ರಹಾರ

ಚಾಮರಾಜಪೇಟೆಯ ಅಪ್ಪುರಾವ್ ರಸ್ತೆಯಲ್ಲಿ ಕಸದ ರಾಶಿ

'ಚಾಮರಾಜಪೇಟೆ ಕಸದ ರಾಶಿ ತೆರವುಗೊಳಿಸಿ'

ಚಾಮರಾಜಪೇಟೆಯ ಅಪ್ಪುರಾವ್ ರಸ್ತೆಯಲ್ಲಿ ಪ್ರತಿನಿತ್ಯ ರಾಶಿ ಕಸ ತಂದು ಹಾಕಲಾಗುತ್ತಿದೆ. ಇದರಿಂದ, ನಗರದ ಸೌಂದರ್ಯಕ್ಕೆ ಧಕ್ಕೆ ಆಗುತ್ತಿದೆ. ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸ್ಥಳೀಯ ನಾಗರಿಕರು ರಸ್ತೆ ಪಾದಚಾರಿ ಮಾರ್ಗಗಳಲ್ಲಿ ಕಸ ಸುರಿದು ಹೋಗುತ್ತಿದ್ದಾರೆ. ಇಂತಹವರ ವಿರುದ್ಧ ಬಿಬಿಎಂಪಿ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಕೂಡಲೇ ಇಲ್ಲಿ ಹಾಕಿರುವ ಕಸ ತೆರವುಗೊಳಿಸಬೇಕು.

ಸಂಜೀವಿನಿ, ಚಾಮರಾಜಪೇಟೆ

'ಪಾದಚಾರಿ ಮಾರ್ಗದಲ್ಲಿನ ಕಸ ತೆರವುಗೊಳಿಸಿ'

ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಕೆಂಪೇಗೌಡ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಹಾಗೂ ಮರದ ಕೊಂಬೆಗಳನ್ನು ಹಾಕಲಾಗಿದೆ. ಇದರಿಂದ, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಇತ್ತೀಚೆಗೆ ಸುರಿದ ಮಳೆ ಹಾಗೂ ಗಾಳಿಯಿಂದ ಮರದ ಕೊಂಬೆಗಳು ಮುರಿದು ಪಾದಚಾರಿ ಮಾರ್ಗದಲ್ಲಿ ಬಿದ್ದಿವೆ. ಇದರಿಂದ, ಓಡಾಟಕ್ಕೆ ಸಮಸ್ಯೆ ಆಗುತ್ತಿದೆ. ಜೊತೆಗೆ ಸಾರ್ವಜನಿಕರೂ ಇಲ್ಲಿಯೇ ಮನೆ ತ್ಯಾಜ್ಯ ತಂದು ಎಸೆದು ಹೋಗುತ್ತಿದ್ದಾರೆ. ಬಿಬಿಎಂಪಿ ಸಿಬ್ಬಂದಿ ಕೂಡಲೇ ಇಲ್ಲಿ ಹಾಕಿರುವ ಕಸವನ್ನು ತೆರವುಗೊಳಿಸುವ ಕೆಲಸ ಮಾಡಬೇಕು.

ಶಿವಪ್ರಸಾದ್, ಗಾಂಧಿನಗರ

ಕೆಂಪೇಗೌಡ ರಸ್ತೆಯ ಬದಿಯಲ್ಲಿ ಮರದ ಕೊಂಬೆಗಳು ಮುರಿದುಬಿದ್ದಿವೆ

'ರಸ್ತೆಯಲ್ಲಿನ ಗುಂಡಿ ಮುಚ್ಚಿ'

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ ನಾಲ್ಕನೇ ಬ್ಲಾಕ್‌ನ ರಸ್ತೆಯಲ್ಲಿ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಪ್ರತಿದಿನ ಇಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ಆದರೆ, ರಸ್ತೆಯಲ್ಲಿ ಗುಂಡಿ ಬಿದ್ದ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಈ ಗುಂಡಿಯು ಇಲಿ, ಹೆಗ್ಗಣ ಹಾಗೂ ಹಾವುಗಳ ವಾಸಸ್ಥಾನವಾಗಿ ಮಾರ್ಪಟ್ಟಿದ್ದು, ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ರಸ್ತೆಯಲ್ಲಿ ಓಡಾಡುವುದಕ್ಕೂ ಭಯಪಡುತ್ತಿದ್ದಾರೆ. ಆದ್ದರಿಂದ, ಬಿಬಿಎಂಪಿಯ ಸಂಬಂಧ ಪಟ್ಟ ಅಧಿಕಾರಿಗಳು ಕೂಡಲೇ ರಸ್ತೆ ಗುಂಡಿ ಮುಚ್ಚಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ನಂಜನಹಳ್ಳಿ, ನಾರಾಯಣ, ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ ರಸ್ತೆಯಲ್ಲಿನ ಗುಂಡಿ

ಐಷಾರಾಮಿ ಕಾರುಗಳನ್ನು ಗುರಿಯಾಗಿಸಿಕೊಂಡು ಕಳ್ಳತನ • ಒಬ್ಬನ ಬಂಧನ, ನಾಲ್ವರು ಆರೋಪಿಗಳು ನಾಪತ್ತೆ

ವಿಮಾನದಲ್ಲಿ ಬಂದು ಕಾರುಗಳ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಸ್ಥಾನದಿಂದ ವಿಮಾನದಲ್ಲಿ ಬಂದು ನಗರದಲ್ಲಿ ಕಾರುಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಉಳಿದ ನಾಲ್ವರಿಗೆ ಶೋಧ ಆರಂಭಿಸಿದ್ದಾರೆ.

ಮುಕೇಶ್ ಕುಮಾರ್ ಬಂಧಿತ ಆರೋಪಿ. ಆತನನ್ನು ರಾಜಸ್ಥಾನದಲ್ಲಿ ಬಂಧಿಸಲಾಗಿದ್ದು, ಅವನು ನೀಡಿದ ಮಾಹಿತಿಯಂತೆ ಮೂರು ಕಾರುಗಳನ್ನು ಪತ್ತೆ ಮಾಡಲಾಗಿದೆ.

ನಗರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಐಷಾರಾಮಿ ಕಾರುಗಳನ್ನು ಗುರಿಯಾಗಿಸಿಕೊಂಡು ಐದು ಜನರ ತಂಡ ಕಳ್ಳತನ ಮಾಡಿತ್ತು. ಬ್ಯಾಡರಹಳ್ಳಿ ಹಾಗೂ ಅನ್ನಪೂರ್ಣೇಶ್ವರಿನಗರ ಠಾಣಾ ವ್ಯಾಪ್ತಿಯಲ್ಲಿ ಐದು ಕಾರುಗಳು ಕಳ್ಳತನವಾಗಿತ್ತು. ಕಾರು ಮಾಲೀಕರ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ಹಲವು ಆಯಾಮಗಳಲ್ಲಿ ಪೊಲೀಸರು ತನಿಖೆ ಕೈಗೊಂಡಿದ್ದರು.

ಸಿ.ಸಿ.ಟಿ.ವಿ. ಕ್ಯಾಮೆರಾ ನೀಡಿದ ಸುಳಿವು ಆಧರಿಸಿ, ರಾಜಸ್ಥಾನಕ್ಕೆ ತೆರಳಿದ ಪೊಲೀಸರು, ಒಬ್ಬ ಆರೋಪಿಯನ್ನು ಬಂಧಿಸಿದ್ದಾರೆ. ಮುಕೇಶ್ ಕುಮಾರ್ ನಗರದ ಕಾಟನ್ ಪೇಟೆಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದಾನೆ ಎಂದು ಗೊತ್ತಾಗಿದೆ.'ಬಂಧಿತ ಮುಕೇಶ್‌ನನ್ನು ರಾಜಸ್ಥಾನದಿಂದ ಬೆಂಗಳೂರಿಗೆ ಕರೆತರಲಾಗುತ್ತಿದೆ. ಆರೋಪಿಗಳು ಐಷಾರಾಮಿ ಕಾರುಗಳನ್ನು ಕಳ್ಳತನ ಮಾಡುತ್ತಿದ್ದರು. ತಂತ್ರಜ್ಞಾನ ಬಳಸಿ ಕಾರಿನ ಲಾಕ್ ತೆಗೆದು ಕಳವು ಮಾಡಲಾಗಿತ್ತು ಎಂದು ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ. ಆದರೆ, ಯಾವ ರೀತಿ ಎಂಬುದು ಉಳಿದ ಆರೋಪಿಗಳು ಪತ್ತೆಯಾದ ಬಳಿಕವೇ ಗೊತ್ತಾಗಲಿದೆ. ನಕಲಿ ಕೀ ಬಳಸಿ ಕೆಲವು ಕಾರುಗಳನ್ನು ಕಳವು ಮಾಡಿರುವುದಾಗಿಯೂ ಒಪ್ಪಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಾಜಸ್ಥಾನದಿಂದ ವಿಮಾನದಲ್ಲಿ ಬರುತ್ತಿದ್ದ ಕಳ್ಳರ ತಂಡ, ನಗರದಲ್ಲಿ ಐದಾರು ದಿನ ಉಳಿದು ಐಷಾರಾಮಿ ಕಾರುಗಳು ಇರುವ ಸ್ಥಳವನ್ನು ಪತ್ತೆ ಮಾಡುತ್ತಿತ್ತು. ನಂತರ ಕೃತ್ಯಕ್ಕೆ ಸ್ಥಳೀಯರ ನೆರವು ಪಡೆದುಕೊಳ್ಳುತ್ತಿತ್ತು. ಪೊಲೀಸರಿಗೆ ಅನುಮಾನ ಬರಬಾರದೆಂಬ ಕಾರಣಕ್ಕೆ ಕದ್ದ ವಾಹನಗಳನ್ನು ಸಿ.ಸಿ.ಟಿ.ವಿ. ಕ್ಯಾಮೆರಾ ಇಲ್ಲದ ರಸ್ತೆಗಳ ಮೂಲಕ ಸಾಗಿಸುತ್ತಿದ್ದರು. ತನಿಖೆ ನಡೆಯುತ್ತಿದೆ' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿಗಳು

ಡ್ರಗ್ಸ್ ಮಾರಾಟ: ಇಬ್ಬರು ವಶಕ್ಕೆ

ತುಮಕೂರು: ನಗರದ ವಿದ್ಯಾರ್ಥಿಗಳಿಗೆ ಅಮಲು ಬರಿಸುವ ಮಾತ್ರೆ ಮಾರಾಟ ಮಾಡುತ್ತಿದ್ದ ಆರೋಪದ ಕಾರಣ ಮೆಡಿಕಲ್ ಸ್ಟೋರ್ ಮಾಲೀಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮೆಳೆಕೋಟೆ ಎ.ಎನ್.ಮೆಡಿಕಲ್ ಸ್ಟೋರ್ ಮಾಲೀಕ ಅಬ್ದುಲ್ ಖಾದರ್ ಮತ್ತು ಬೀರೇಶ್ ಅವರನ್ನು ವಶಕ್ಕೆ ಪಡೆಯಲಾಗಿದೆ. ಅಮಲು ಬರಿಸುವ ₹56 ಸಾವಿರ ಮೌಲ್ಯದ 1,700 ಮಾತ್ರೆ ಮತ್ತು ಬೈಕ್ ಜಪ್ತಿ ಮಾಡಲಾಗಿದೆ.

'ಈಚೆಗೆ ನಗರದ ವಿವಿಧ ಬಡಾವಣೆಗಳಲ್ಲಿ ಅಮಲು ಬರಿಸುವ ಮಾತ್ರೆ ಮಾರಾಟ ಮಾಡಲಾಗುತ್ತಿದೆ. ಯುವಕರು, ವಿದ್ಯಾರ್ಥಿಗಳು ಮಾದಕ ವಸ್ತುಗಳಿಗೆ ದಾಸರಾಗುತ್ತಿದ್ದಾರೆ. ಅನುಮತಿ ಪಡೆಯದೆ ಮೆಡಿಕಲ್ ಸ್ಟೋರ್‌ಗಳಲ್ಲಿ ಹೆಚ್ಚಿನ ಬೆಲೆಗೆ ಮಾತ್ರೆ ಮಾರಾಟ ಮಾಡುತ್ತಿದ್ದಾರೆ' ಎಂಬ ಮಾಹಿತಿ ಪೊಲೀಸರಿಗೆ ಲಭಿಸಿತ್ತು. ನಗರದ ಮರಳೂರು ಬಳಿ ಮಾತ್ರೆ ಮಾರಾಟ ಮಾಡುವಾಗ ದಾಳಿ ನಡೆಸಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಪೊಲೀಸರ ಮೇಲೆ ಪೆಪ್ಪರ್ ಸ್ಪ್ರೇ

ಬೆಂಗಳೂರು: ಜೂಜು ಅಡ್ಡೆ ಮೇಲೆ ದಾಳಿ ನಡೆಸಿದ ಪೊಲೀಸರ ಮೇಲೆ ಮಚ್ಚಿನಿಂದ ಹಲ್ಲೆಗೆ ಯತ್ನಿಸಿ, ಪೆಪ್ಪರ್ ಸ್ಪ್ರೇ ಮಾಡಿದ 13 ಆರೋಪಿಗಳನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ₹3.20 ಲಕ್ಷ ನಗದು, ಮಚ್ಚು, ಆಟೊ, ಎರಡು ಕಾರು, ಆರು ದ್ವಿಚಕ್ರ ವಾಹನ, ಪೆಪ್ಪೇರ್ ಸ್ಪ್ರೇ, 13 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಪರಾರಿಯಾಗಿರುವ ಆರೋಪಿಗಳ ಪತ್ತೆಗೆ ಶೋಧ ಆರಂಭಿಸಲಾಗಿದೆ.

ನವಿಲು ನಗರದ ಇಟ್ಟಿಗೆಗೂಡಿನಲ್ಲಿ ಕ್ಯಾಟ್ ರಾಜನ ಸಹಚರರು ಇಸ್ಪೀಟ್ ಅಡ್ಡೆ ನಡೆಸುತ್ತಿರುವ ಬಗ್ಗೆ ಮಾಹಿತಿ ಬಂದಿತ್ತು. ವಿಜಯನಗರ ಎಸಿಪಿ ಚಂದನ್ ನೇತೃತ್ವದಲ್ಲಿ ದಾಳಿ ನಡೆಸಿದ ವೇಳೆ 30ಕ್ಕೂ ಹೆಚ್ಚು ಜನರು ಇಸ್ಪೀಟ್ ಆಡುತ್ತಿದ್ದರು. ಪೊಲೀಸ್ ಸಿಬ್ಬಂದಿ ಮೇಲೆ ಮೊದಲು ಮಚ್ಚಿನಿಂದ ಹಲ್ಲೆ ನಡೆಸಲು ಯತ್ನಿಸಿದರು. ಬಳಿಕ ಪೆಪ್ಪರ್ ಸ್ಪ್ರೇ ಮಾಡುವ ಮೂಲಕ ತಪ್ಪಿಸಿಕೊಳ್ಳಲು ಯತ್ನಿಸಿದರು. ಕೆಲವರು ಹಣದ ಸಮೇತ ಪರಾರಿಯಾದರು ಎಂದು ಪೊಲೀಸರು ತಿಳಿಸಿದ್ದಾರೆ. ಬ್ಯಾಡರಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಅಪಘಾತ: ಇಬ್ಬರು ಯುವಕರ ಸಾವು

ಕುಣಿಗಲ್: ರಾಜ್ಯ ಹೆದ್ದಾರಿ 33 ಮಾದಪ್ಪನಹಳ್ಳಿ ಬಳಿ ಭಾನುವಾರ ರಾತ್ರಿ ಸರಕು ಸಾಗಣೆ ವಾಹನ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರರಿಬ್ಬರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಬೆನವಾರ ಗ್ರಾಮದ ಶ್ರೇಯಸ್ (24) ಮತ್ತು ಅಜೇಯ (21) ಮೃತರು. ಇಬ್ಬರೂ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, ದೀಪಾವಳಿ ಹಬ್ಬದ ಪ್ರಯುಕ್ತ ಗ್ರಾಮಕ್ಕೆ ಬಂದು ಹಬ್ಬ ಮುಗಿಸಿ ವಾಪಸ್ ಹೋಗುವಾಗ ಅಪಘಾತ ಸಂಭವಿಸಿದೆ. ಹುಲಿಯೂರುದುರ್ಗ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕರಾಳ ದಿನ ಆಚರಣೆ: ಎಂಇಎಸ್‌ನ 46 ಮಂದಿ ವಿರುದ್ಧ ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕರ್ನಾಟಕ ರಾಜ್ಯೋತ್ಸವದ ದಿನ ನಗರದಲ್ಲಿ ಕರಾಳ ದಿನ ಆಚರಿಸಿದ ಮಹಾರಾಷ್ಟ್ರ ಏಕೀಕರಣ ಸಮಿತಿಯ (ಎಂಇಎಸ್) 46 ನಾಯಕರು ಸೇರಿ ಹಲವರ ವಿರುದ್ಧ ಇಲ್ಲಿನ ಮಾರ್ಕೆಟ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಎಂಇಎಸ್‌ನವರು ಪ್ರತಿವರ್ಷ ನವೆಂಬರ್ 1ರಂದು ಕರಾಳ ದಿನ ಆಚರಿಸುತ್ತ ಬಂದಿದ್ದಾರೆ. ಈ ಬಾರಿ ಅದಕ್ಕೆ ಅನುಮತಿ ಕೋರಿ ಬಂದಿದ್ದ ಎಂಇಎಸ್ ನಿಯೋಗಕ್ಕೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, 'ಯಾವ ಕಾರಣಕ್ಕೂ ಕರಾಳ ದಿನಾಚರಣೆಗೆ ಅನುಮತಿ ಕೊಡುವುದಿಲ್ಲ' ಎಂದು ಸ್ಪಷ್ಟವಾಗಿ ತಿಳಿಸಿದ್ದರು. ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಅವರೂ ಎಂಇಎಸ್‌ಗೆ ಅನುಮತಿ ಕೊಡುವುದಿಲ್ಲ ಎಂದಿದ್ದರು. ಅನುಮತಿ ಸಿಗದಿದ್ದರೂ ಎಂಇಎಸ್‌ನವರು ಕರಾಳ ದಿನ ಆಚರಿಸಿ ಉದ್ಧಟತನ ತೋರಿದ್ದರು. ಹೀಗಾಗಿ ಎಂಇಎಸ್‌ನವರ ವಿರುದ್ಧ ಮಾರ್ಕೆಟ್ ಠಾಣೆ ಪೊಲೀಸರು ಸ್ವಯಂಪ್ರೇರಣೆಯಿಂದ ದೂರು ದಾಖಲಿಸಿದ್ದಾರೆ.

'ಎಂಇಎಸ್‌ನ 46 ನಾಯಕರು ಸೇರಿದಂತೆ ಹಲವರ ವಿರುದ್ಧ ದೂರು ದಾಖಲಾಗಿದೆ' ಎಂದು ನಗರ ಪೊಲೀಸ್ ಉಪ ಆಯುಕ್ತ (ಕಾನೂನು ಮತ್ತು ಸುವ್ಯವಸ್ಥೆ) ರೋಹನ್ ಜಗದೀಶ 'ಪ್ರಜಾವಾಣಿ'ಗೆ ತಿಳಿಸಿದರು.

ಹೋರಿ ತಿವಿದು ಯುವಕ ಸಾವು

ಮುಂಡಗೋಡ : ತಾಲ್ಲೂಕಿನ ಚಿಗಳ್ಳಿ ಗ್ರಾಮದಲ್ಲಿ ಕಲ್ಮೇಶ್ವರ ದೇವಸ್ಥಾನದ ಹತ್ತಿರ ದೀಪಾವಳಿ ಅಂಗವಾಗಿ ಶನಿವಾರ ಆಯೋಜಿಸಿದ್ದ ದನ ಬೆದರಿಸುವ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದ ಯುವಕ ಪರಮೇಶ್ವರ ಸಿದ್ಧಪ್ಪ ಹರಿಜನ (22) ಎಂಬುವವರಿಗೆ ಹೋರಿಯೊಂದು ಕೊಂಬಿನಿಂದ ತಿವಿದಿದೆ. ಅವರು ಮೃತಪಟ್ಟಿದ್ದಾರೆ.

ಪರಮೇಶ್ವರ ಹರಿಜನ

ತಕ್ಷಣ ಯುವಕನನ್ನು ಇಲ್ಲಿನ ತಾಲ್ಲೂಕು ಆಸ್ಪತ್ರೆಗೆ ಕರೆತಂದರೂ, ಮಾರ್ಗಮಧ್ಯೆದಲ್ಲಿಯೇ ಆತ ಮೃತಪಟ್ಟಿದ್ದಾಗಿ ವೈದ್ಯರು ತಿಳಿಸಿದ್ದಾರೆ.

ದನ ಬೆದರಿಸುವ ಕಾರ್ಯಕ್ರಮದಲ್ಲಿ ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ನಿರ್ಲಕ್ಷ್ಯ ತೋರಿದ ಆರೋಪದ ಮೇಲೆ ಆರು ಜನರ ಮೇಲೆ ಇಲ್ಲಿನ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಬಾಂಧವಗಢ ಆನೆಗಳ ಸಾವು: ಇಬ್ಬರು ಅಮಾನತು

ಭೋಪಾಲ್ (ಪಿಟಿಐ): ಬಾಂಧವಗಢ ಮೀಸಲು ಅರಣ್ಯ ಪ್ರದೇಶದಲ್ಲಿ 10 ಆನೆಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಹಿರಿಯ ಅಧಿಕಾರಿಗಳನ್ನು ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಅಮಾನತು ಮಾಡಿದ್ದಾರೆ.

ಪ್ರಕರಣದ ತನಿಖೆ ನಡೆಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿ ಸದಸ್ಯರ ಜೊತೆಗೆ ಸಭೆ ನಡೆಸಿದ ನಂತರ, ಮೀಸಲು ಅರಣ್ಯ ಪ್ರದೇಶದ ನಿರ್ದೇಶಕ ಗೌರವ್ ಚೌಧರಿ ಹಾಗೂ ಉಸ್ತುವಾರಿ ಎಸಿಎಫ್ ಫತೇ ಸಿಂಗ್ ನಿನಾಮ ಇಬ್ಬರನ್ನೂ ಅಮಾನತುಗೊಳಿಸಿರುವುದಾಗಿ ಪ್ರಕಟಿಸಿದ್ದಾರೆ.

'ತಾವು ಹಾಕಿದ್ದ ರಜೆಗಳು ಮುಗಿದ ನಂತರವೂ ಗೌರವ್ ಚೌಧರಿ ಅವರು ಕೆಲಸಕ್ಕೆ ಹಾಜರಾಗಿರಲಿಲ್ಲ. ಅಲ್ಲದೆ, ಅವರು ತಮ್ಮ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದರು. ಫತೇ ಸಿಂಗ್ ಅವರೂ ಕೆಲಸದಲ್ಲಿ ಲೋಪ ಎಸಗಿರುವುದು ಉನ್ನತ ಸಮಿತಿ ನೀಡಿರುವ ವರದಿಯಿಂದ ಗೊತ್ತಾಗಿದೆ' ಎಂದು ಮೋಹನ್ ಯಾದವ್ ತಿಳಿಸಿದ್ದಾರೆ.

ಆನೆಗಳು ಸೇವಿಸಿದ ಆಹಾರ ಪದಾರ್ಥದಲ್ಲಿ ಯಾವುದೇ ವಿಷಕಾರಿ ಅಂಶಗಳು ಇರುವುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿರಲಿಲ್ಲ. ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಎರಡು-ಮೂರು ದಿನಗಳಲ್ಲಿ ವರದಿ ಬರಲಿದ್ದು, ಆನಂತರ ಅವು ಸೇವಿಸಿದ್ದ ಸಿರಿಧಾನ್ಯ ಹಾರಕದಲ್ಲಿ ಯಾವುದಾದರೂ ವಿಷಕಾರಿ ಅಂಶ ಇತ್ತೇ ಎನ್ನುವುದು ಸ್ಪಷ್ಟವಾಗಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕೇವಲ 72 ಗಂಟೆಗಳ ಅವಧಿಯಲ್ಲಿ ಹತ್ತು ಆನೆಗಳು ಬಾಂಧವಗಢ ಅರಣ್ಯ ಪ್ರದೇಶದಲ್ಲಿ ಮೃತಪಟ್ಟಿದ್ದವು.

ಅಮೆಜಾನ್ ಸಂಸ್ಥೆಗೆ ₹11.45 ಲಕ್ಷ ವಂಚನೆ- ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ನಕಲಿ ಗುರುತು ತೋರಿಸಿ ಇ-ವಾಣಿಜ್ಯ ಸಂಸ್ಥೆ ಅಮೆಜಾನ್‌ನಿಂದ ₹11.45 ಲಕ್ಷ ಮೌಲ್ಯದ ಸಾಮಗ್ರಿ ತರಿಸಿಕೊಂಡು, ಅದನ್ನು ಬೇರೆಯವರಿಗೆ ಮಾರಾಟ ಮಾಡಿ ವಂಚಿಸಿದ ಸಂಬಂಧ ಇಲ್ಲಿನ ಉರ್ವ ಠಾಣೆಯ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

'ರಾಜಸ್ಥಾನದ ರಾಜ್‌ಕುಮಾರ್ ಮೀನ (23) ಹಾಗೂ ಸುಭಾಷ್ ಗುರ್ಜರ್ (27) ಬಂಧಿತರು. ಅವರನ್ನು ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ಆರೋಪಿಗಳು ವಂಚನೆ ಮೂಲಕ ಪಡೆದ ಸಾಮಗ್ರಿ ಮಾರಾಟದಿಂದ ಗಳಿಸಿದ್ದ ₹11.45 ಲಕ್ಷವನ್ನೂ ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಒಪ್ಪಿಸಿದ್ದೇವೆ' ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

'ಸುಳ್ಳು ವಿವರ ನೀಡಿದ ಆರೋಪಿಗಳು 'ಅಮಿತ್' ಎಂಬ ಹೆಸರಿನಲ್ಲಿ, ದುಬಾರಿ ದರದ ಎರಡು ಸೋನಿ ಕ್ಯಾಮೆರಾ ಹಾಗೂ ಇತರ 10 ಸಮಾಗ್ರಿಯನ್ನು ಇಲ್ಲಿನ ಬಿಜೈನ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಬಳಿಯ ವಿಳಾಸಕ್ಕೆ ಸೆ.21ರಂದು ತರಿಸಿಕೊಂಡಿದ್ದರು. ರಾಜ್ ಕುಮಾರ್ ಮೀನ ಆ ಸಾಮಗ್ರಿಗಳನ್ನು ಪಡೆದುಕೊಂಡು ವಿತರಕ ಸಿಬ್ಬಂದಿಗೆ ಒಟಿಪಿ ನೀಡಿದ್ದ. ಈ ವೇಳೆ ಸುಭಾಷ್ ಗುರ್ಜರ್ ಡೆಲಿವರಿ ಸಿಬ್ಬಂದಿಯ ಗಮನವನ್ನು ಬೇರೆಡೆ ಸೆಳೆದು ಸೋನಿ ಕ್ಯಾಮೆರಾವಿದ್ದ ಬಾಕ್ಸ್‌ನ ಸ್ಟಿಕ್ಕರ್‌ಗಳನ್ನು ತೆಗೆದು ಬೇರೆ ಸಾಮಗ್ರಿಗಳಿದ್ದ ಬಾಕ್ಸ್‌ಗೆ ಅಂಟಿಸಿದ್ದ. ರಾಜಕುಮಾರ್ ತಪ್ಪು ಒಟಿಪಿ ನೀಡಿ ಸಾಮಗ್ರಿ ವಿತರಣೆ ಪ್ರಕ್ರಿಯೆ ತಕ್ಷಣ ಪೂರ್ಣಗೊಳ್ಳದಂತೆ ಕಾಲಹರಣ ಮಾಡಿದ್ದ. ನಂತರ ಸಾಮಗ್ರಿಗಳನ್ನು ಮರುದಿನ ಸ್ವೀಕರಿಸುವುದಾಗಿ ಡೆಲಿವರಿ

ಆರೋಪಿ ರಾಜ್‌ಕುಮಾರ್ ಮೀನ ಹಾಗೂ ಸುಭಾಷ್ ಗುರ್ಜರ್ ಅವರಿಂದ ವಶಪಡಿಸಿಕೊಂಡ ನಗದು

ಸಿಬ್ಬಂದಿಗೆ ತಿಳಿಸಿದ್ದ. ನಂತರ ಸೋನಿ ಕ್ಯಾಮೆರಾದ ಆರ್ಡರ್ ರದ್ದುಪಡಿಸಿ ಬೇರೆ ಸಾಮಗ್ರಿ ಮಾತ್ರ ಪಡೆದುಕೊಂಡಿದ್ದ. ಅದರ ಮೂಲಕ ಸೋನಿ ಕ್ಯಾಮೆರಾ ಅವರ ಕೈಸೇರಿತ್ತು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಅಮೆಜಾನ್‌ನ ವಿತರಣಾ ಪಾಲುದಾರರಾದ ಮಹೀಂದ್ರ ಲಾಜಿಸ್ಟಿಕ್ಸ್‌ನವರು ಬಾಕ್ಸ್‌ಗಳನ್ನು ಪರಿಶೀಲಿಸಿದಾಗ ಸ್ಟಿಕ್ಕರ್‌ಗಳಲ್ಲಿ ವ್ಯತ್ಯಾಸ ಇರುವುದು ಗೊತ್ತಾಗಿತ್ತು. ಅಮೆಜಾನ್ ಸಂಸ್ಥೆಗೆ ಈ ವಿಚಾರ ತಿಳಿಸಿದ್ದರು' ಎಂದು ತಿಳಿಸಿದ್ದಾರೆ.

'ಆರೋಪಿಗಳು ಇದೇ ಮಾದರಿಯಲ್ಲಿ ಬೇರೆ ರಾಜ್ಯಗಳಲ್ಲೂ ವಂಚನೆ ಮಾಡಿರುವ ಸಾಧ್ಯತೆ ಇದೆ. ಅವರು ಅಮೆಜಾನ್‌ನಲ್ಲಿ ಸಾಮಗ್ರಿ ಖರೀದಿ ವಿಧಾನವನ್ನು ಆಧರಿಸಿ ಅವರ ಮೇಲೆ ಉರ್ವ ಠಾಣೆಯ ಪೊಲೀಸರು ನಿಗಾ ಇಟ್ಟಿದ್ದರು. ಆರೋಪಿಗಳು ರಾಜ್ಯವನ್ನು ತೊರೆಯಲು ಸಿದ್ಧತೆ ನಡೆಸಿದಾಗ ಬಂಧಿಸಿದ್ದಾರೆ' ಎಂದು ಅನುಪಮ್ ಅಗರ್ವಾಲ್ ತಿಳಿಸಿದರು.

ರಾಜ್‌ಕುಮಾರ್ ಮೀನಾನನ್ನು ತಮಿಳುನಾಡಿನ ಸೇಲಂ ಪೊಲೀಸರು ಬಂಧಿಸಿದ್ದರು. ಅವರಿಂದ ಆತನನ್ನು ವಶಕ್ಕೆ ಪಡೆಯಲಾಗಿದೆ. ಆತನು ವಿಚಾರಣೆ ವೇಳೆ ನೀಡಿದ ಮಾಹಿತಿ ಆಧಾರದಲ್ಲಿ ಸುಭಾಷ್‌ನನ್ನು ಉರ್ವ ಠಾಣೆಯ ಇನ್‌ಸ್ಪೆಕ್ಟರ್ ಭಾರತಿ ನೇತೃತ್ವದ ಪೊಲೀಸರ ತಂಡ ಬಂಧಿಸಿದೆ. ಆರೋಪಿಗಳು ಬೇರೆ ಬೇರೆ ರಾಜ್ಯಗಳಲ್ಲಿ ಈ ರೀತಿ ವಂಚನೆ ನಡೆಸಿದ್ದಾರೆ.

ಇದೇ ಮಾದರಿಯ ವಂಚನೆ ಪ್ರಕರಣ ಸಂಬಂಧ ಆರೋಪಿಗಳ ವಿರುದ್ಧ ಅಸ್ಸಾಂನ ಜಬಲ್‌ಪುರಿಯಲ್ಲಿ (₹ 20.09 ಲಕ್ಷ ಮೌಲ್ಯದ ಕ್ಯಾಮೆರಾ ಖರೀದಿ), ಒಡಿಶಾದ ಭರತಪುರದಲ್ಲಿ (₹ 20.28 ಲಕ್ಷ ಮೌಲ್ಯದ ಕ್ಯಾಮೆರಾ ಖರೀದಿ), ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ (₹10.96 ಲಕ್ಷ ಮೌಲ್ಯದ ಕ್ಯಾಮೆರಾ ಖರೀದಿ), ರಾಜಸ್ಥಾನದ ಮೌಂಟ್ ಅಬುವಿನಲ್ಲಿ (₹3.71 ಲಕ್ಷ ಮೌಲ್ಯ), ತೆಲಂಗಾಣದ ಮೈಲಾರದೇವಪಲ್ಲಿಯಲ್ಲಿ (₹14 ಲಕ್ಷ ಮೌಲ್ಯದ ವಂಚನೆ), ಉತ್ತರ ಪ್ರದೇಶದ ಸುಲ್ತಾನ್‌ಪುರದಲ್ಲಿ (₹ 10.35 ಲಕ್ಷ), ತಮಿಳುನಾಡಿನ ಸೇಲಂನ ಪಲ್ಲಪಟ್ಟಿಯಲ್ಲಿ (₹14.34 ಲಕ್ಷ ಮೌಲ್ಯ ಕ್ಯಾಮೆರಾ ಖರೀದಿ), ಕೇರಳದ ಮರಡ್‌ನಲ್ಲಿ (14.50 ಲಕ್ಷ ಮೌಲ್ಯ), ಲಖನೌನ ಹಜರತ್ ನಗರದಲ್ಲಿ (₹6.01 ಲಕ್ಷ ಮೌಲ್ಯದ ಐಫೋನ್ ಖರೀದಿಸಿ ವಂಚನೆ, ಇನ್ನೆರಡು ಸೆಟ್‌ಗಳನ್ನು ಇನ್ನಷ್ಟೇ ಪಡೆಯಬೇಕಿತ್ತು), ತಿರುಚಿಯ ವಿಮಾನನಿಲ್ದಾಣ ಠಾಣೆಯಲ್ಲಿ (₹15 ಲಕ್ಷ ಮೌಲ್ಯದ ವಂಚನೆ) ಎಫ್‌ಐಆರ್ ದಾಖಲಾಗಿದೆ. ಆರೋಪಿಗಳ ವಿರುದ್ಧ ವಿವಿಧ ಸೆಕ್ಷನ್‌ಗಳ ಅಡಿ ದೂರು ದಾಖಲಾಗಿದೆ.

ರಾಯಚೂರು ವಿಶ್ವವಿದ್ಯಾಲಯ ಬೋಧಕ ಸಿಬ್ಬಂದಿ ನೇಮಕಾತಿ

ಎಸ್‌ಟಿ, ಒಬಿಸಿಗಿಲ್ಲ ಮೀಸಲಾತಿ

• ಜಯಸಿಂಹ ಆರ್.

ಬೆಂಗಳೂರು: ವಿಶ್ವವಿದ್ಯಾಲಯಗಳ ಬೋಧಕ ಸಿಬ್ಬಂದಿ ನೇಮಕಾತಿಯಲ್ಲಿ 'ವಿಷಯವಾರು ಮೀಸಲಾತಿ' ಅನ್ವಯ ಮಾಡಬಾರದು ಎಂದು ಕೇಂದ್ರ ಸರ್ಕಾರ 2019ರಲ್ಲಿ ಆದೇಶಿಸಿ ಐದು ವರ್ಷಗಳಾಗುತ್ತಿದೆ. ಆದರೆ ರಾಜ್ಯ ಸರ್ಕಾರವು ತಾಂತ್ರಿಕ ಕಾರಣ ಮುಂದೊಡ್ಡಿ, ಇದನ್ನು ಪಾಲಿಸುತ್ತಿಲ್ಲ. ಇದರಿಂದಾಗಿ ವಿಶ್ವವಿದ್ಯಾಲಯಗಳ ನೇಮಕಾತಿಯಲ್ಲಿ ಹಲವು ಸಮುದಾಯಗಳು ಮೀಸಲಾತಿ ವಂಚಿತವಾಗುತ್ತಿವೆ.

ರಾಯಚೂರು ವಿಶ್ವವಿದ್ಯಾಲಯವು 24 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ ನಡೆಸುತ್ತಿದ್ದು, ಇಲ್ಲಿ 'ವಿಷಯವಾರು ಮೀಸಲಾತಿ' ಅನ್ವಯ ಮಾಡುವಂತೆ ಸಮಾಜ ಕಲ್ಯಾಣ ಇಲಾಖೆಯು ರೋಸ್ಟರ್ ಸಿದ್ದಪಡಿಸಿ ಕೊಟ್ಟಿದೆ. ಇದರಿಂದಾಗಿ ಪರಿಶಿಷ್ಟ ಪಂಗಡ ಮತ್ತು ಒಬಿಸಿ ಸಮುದಾಯಗಳಿಗೆ ಮೀಸಲಾತಿ ಸಿಕ್ಕಿಲ್ಲ.

ಇದನ್ನು ಆಕ್ಷೇಪಿಸಿ ರಾಯಚೂರು ವಿಶ್ವವಿದ್ಯಾಲಯದ ಕುಲಸಚಿವ, 'ವಿಷಯವಾರು ಮೀಸಲಾತಿ ಅನ್ವಯ ಮಾಡಿದರೆ, ಮೀಸಲಾತಿ ಸಿಗದೇ ಹೋಗುತ್ತದೆ ಅಥವಾ ಒಂದು ಸಮುದಾಯಕ್ಕಷ್ಟೇ ಮೀಸಲಾತಿ ದೊರೆತಂತಾಗುತ್ತದೆ. ಇತರ ಅರ್ಹ ಸಮುದಾಯಗಳಿಗೆ ಅನ್ಯಾಯವಾಗುತ್ತದೆ' ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತರಿಗೆ ಪತ್ರ ಬರೆದಿದ್ದರು.

ಆದರೂ ಇಲಾಖೆಯು 'ವಿಷಯವಾರು ಮೀಸಲಾತಿ' ಅನ್ವಯ ಮಾಡಿ, ರೋಸ್ಟರ್ ಅನ್ನು ಅಂತಿಮಗೊಳಿಸಿತು. ಪರಿಣಾಮವಾಗಿ 24 ಹುದ್ದೆಗಳಲ್ಲಿ 15 ಹುದ್ದೆಗಳು (ಶೇ 62ರಷ್ಟು) ಸಾಮಾನ್ಯ ವರ್ಗಕ್ಕೇ ಹೋಗಿದ್ದು, ಪರಿಶಿಷ್ಟ ಜಾತಿಗಳಿಗೆ 9 ಹುದ್ದೆಗಳು (ಶೇ 37ರಷ್ಟು) ಸಿಕ್ಕಿವೆ. ಹೀಗಾಗಿ ಈ ನೇಮಕಾತಿಯಲ್ಲಿ ಪರಿಶಿಷ್ಟ ಪಂಗಡಗಳಿಗೆ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಯಾವುದೇ ಹುದ್ದೆ ಉಳಿದಿಲ್ಲ. ಮಹಿಳಾ ಮೀಸಲಾತಿಯೂ ದೊರೆತಿಲ್ಲ.

ವಿಷಯವಾರು ಬದಲಿಗೆ ಎಲ್ಲ ಹುದ್ದೆಗಳಿಗೆ ಮೀಸಲಾತಿ ಅನ್ವಯ ಮಾಡಿದ್ದರೆ, ಸಾಮಾನ್ಯ ವರ್ಗಕ್ಕೆ 12 ಹುದ್ದೆಗಳು ಮಾತ್ರ ದೊರೆಯುತ್ತಿತ್ತು. ಪರಿಶಿಷ್ಟ ಜಾತಿಗಳಿಗೆ 4, ಪರಿಶಿಷ್ಟ ಪಂಗಡಗಳಿಗೆ 2 ಮತ್ತು ಇತರೆ ಹಿಂದುಳಿದ ವರ್ಗಗಳಿಗೆ 6 ಹುದ್ದೆಗಳು ದೊರೆಯುತ್ತಿತ್ತು. ಇದನ್ನು ಸರಿಪಡಿಸುವಂತೆ ಅಭ್ಯರ್ಥಿಗಳು ಹಲವು ಬಾರಿ ವಿಶ್ವವಿದ್ಯಾಲಯದ ಕುಲಪತಿ ಮತ್ತು ಕುಲಸಚಿವರಿಗೆ ಪತ್ರ ಬರೆದಿದ್ದಾರೆ. ಆದರೆ ಮೀಸಲಾತಿ ರೋಸ್ಟರ್‌ನಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಈ ಬಗ್ಗೆ ಪ್ರತಿಕ್ರಿಯೆ ಕೇಳಲು ಸಮಾಜ ಕಲ್ಯಾಣ ಇಲಾಖೆ ಆಯುಕ್ತರಿಗೆ ಹಲವು ಬಾರಿ ಕರೆ ಮಾಡಿದರೂ ಕರೆ ಸ್ವೀಕರಿಸಲಿಲ್ಲ. ವಾಟ್ಸ್‌ಆ್ಯಪ್ ಸಂದೇಶಕ್ಕೂ ಪ್ರತಿಕ್ರಿಯೆ ನೀಡಿಲ್ಲ. ಇಲಾಖೆ ಸಚಿವರಿಂದಲೂ ಪ್ರತಿಕ್ರಿಯೆ ದೊರೆತಿಲ್ಲ.

ತೊಡಕು ನಿವಾರಿಸದ ರಾಜ್ಯ ಸರ್ಕಾರ

ವಿಷಯವಾರು ಮೀಸಲಾತಿ ನೀಡುವುದನ್ನು ತಪ್ಪಿಸಲು ಕಾನೂನಾತ್ಮಕ ತೊಡಕು ಇದ್ದು, ಅದನ್ನು ನಿವಾರಿಸಲು ರಾಜ್ಯದ ಯಾವ ಸರ್ಕಾರಗಳು ಪ್ರಯತ್ನ ಮಾಡಿಲ್ಲ.

'ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಬೋಧಕ ಸಿಬ್ಬಂದಿ ನೇಮಕಾತಿಯಲ್ಲಿ ವಿಷಯವಾರು ಮೀಸಲಾತಿ ಅನ್ವಯ ಮಾಡಬೇಕು' ಎಂದು ಕೋರಿ 1981ರಲ್ಲಿ ರಾಜ್ಯ ಹೈಕೋರ್ಟ್‌ಗೆ ರಿಟ್ ಅರ್ಜಿ (13096/83) ಸಲ್ಲಿಕೆಯಾಗಿತ್ತು. ಅದನ್ನು ಹೈಕೋರ್ಟ್ ಮಾನ್ಯ ಮಾಡಿತ್ತು. ರಾಜ್ಯ ಸರ್ಕಾರ ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಸುಪ್ರೀಂ ಕೋರ್ಟ್, ಹೈಕೋರ್ಟ್ ಆದೇಶವನ್ನೇ ಎತ್ತಿಹಿಡಿದಿತ್ತು. ರಾಜ್ಯದಲ್ಲಿ ಈಗಲೂ ಅದನ್ನೇ ಪಾಲಿಸಲಾಗುತ್ತಿದೆ. ಬೋಧಕ ಸಿಬ್ಬಂದಿ ನೇಮಕಾತಿಯಲ್ಲಿ (ವರ್ಗಾವಣೆಗೆ ಅವಕಾಶವಿಲ್ಲದ ಹುದ್ದೆಗಳು) ವಿಷಯವಾರು ಮೀಸಲಾತಿ ಅನ್ವಯ ಮಾಡಬಾರದು ಎಂದು 2006ರಲ್ಲಿ ಯುಜಿಸಿ ನಿಯಮಾವಳಿ ರೂಪಿಸಿತ್ತು. ಇದರ ವಿರುದ್ಧವೂ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಸುಪ್ರೀಂ ಕೋರ್ಟ್ ಅರ್ಜಿಯನ್ನು 2019ರಲ್ಲಿ ಮಾನ್ಯ ಮಾಡಿತ್ತು.

'ವಿಷಯವಾರು ಮೀಸಲಾತಿ'ಯನ್ನು ನಿಷೇಧಿಸುವ ಸುಗ್ರೀವಾಜ್ಞೆಯನ್ನು ಕೇಂದ್ರ ಸರ್ಕಾರವು 2019ರಲ್ಲೇ ಜಾರಿಗೆ ತಂದಿತು. ಹಲವು ರಾಜ್ಯ ಸರ್ಕಾರಗಳು ಇದನ್ನು ಪಾಲಿಸಿರಲಿಲ್ಲ. ಹೀಗಾಗಿ 2024ರ ಏಪ್ರಿಲ್‌ನಲ್ಲಿ ಎಲ್ಲ ಕೇಂದ್ರೀಯ, ರಾಜ್ಯ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು, ನಿಯಮ ಪಾಲಿಸುವಂತೆ ಯುಜಿಸಿ ಸೂಚಿಸಿತು. ಆದರೆ 1981ರ ಹೈಕೋರ್ಟ್ ಆದೇಶ ಮತ್ತು ಅದನ್ನು ಎತ್ತಿಹಿಡಿದ ಸುಪ್ರೀಂ ಕೋರ್ಟ್ ಆದೇಶವನ್ನು ತೆರವು ಮಾಡಿಸಿಕೊಳ್ಳದೇ ಇರುವ ಕಾರಣಕ್ಕೆ ಯುಜಿಸಿ ನಿಯಮಗಳನ್ನು ಜಾರಿಗೆ ತರಲಾಗಿಲ್ಲ.

ಎಸ್‌ಟಿ ಮತ್ತು ಒಬಿಸಿ ಮೀಸಲಾತಿ ನೀಡದೇ ಇರುವುದರಿಂದ ಈ ಸಮುದಾಯಗಳ ಅಭ್ಯರ್ಥಿಗಳು ಸಾಮಾನ್ಯ ವರ್ಗದ ಅಭ್ಯರ್ಥಿಗಳ ಜತೆ ಸ್ಪರ್ಧಿಸುವಂತಾಗಿದೆ

ಶಿವಪ್ರಸಾದ್ ಕೆ.ಎನ್. ಅಭ್ಯರ್ಥಿ

ಮಹಿಳಾ ಮೀಸಲಾತಿ ನೀಡದೇ ಇರುವ ಕಾರಣಕ್ಕೆ ಹಲವು ವಿದ್ಯಾರ್ಥಿನಿಯರು ಎಲ್ಲರೊಂದಿಗೆ ಸ್ಪರ್ಧಿಸಬೇಕಾದ ಅನಿವಾರ್ಯ ಎದುರಾಗಿದೆ

ರಾಜಣ್ಣ ಎಂ., ಸಹಾಯಕ ಪ್ರಾಧ್ಯಾಪಕ, ನ್ಯಾಷನಲ್ ಕಾಲೇಜು, ಬೆಂಗಳೂರು

ಸಮಾಜ ಕಲ್ಯಾಣ ಇಲಾಖೆಗೆ ಪತ್ರ ಬರೆದರೂ ಪ್ರಯೋಜನ ಆಗಿಲ್ಲ. ನಿಯಮಗಳ ಅನ್ವಯವೇ ರೋಸ್ಟರ್ ಮಾಡಿದ್ದೇನೆ, ಬದಲಾವಣೆ ಸಾಧ್ಯವಿಲ್ಲ

ಪ್ರೊ.ಎಂ.ವಿಶ್ವನಾಥ್, ನಿಕಟಪೂರ್ವ ಕುಲಸಚಿವ, ರಾಯಚೂರು ವಿಶ್ವವಿದ್ಯಾಲಯ

ಬೆಂಜ್ ಕಾರು ಡಿಕ್ಕಿ: ಮಹಿಳಾ ಟೆಕಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಜ್ ಕಾರು ಡಿಕ್ಕಿ ಹೊಡೆದ ಪರಿಣಾಮ ಸಾಫ್ಟ್‌ವೇರ್ ಎಂಜಿನಿಯರ್ ಸಂಧ್ಯಾ (30) ಮೃತಪಟ್ಟಿದ್ದಾರೆ.

ಸಂಧ್ಯಾ ಅವರು ಬಸವೇಶ್ವರ ನಗರ ನಿವಾಸಿ. ಘಟನೆ ಸಂಬಂಧ ಬೆಂಜ್ ಕಾರು ಚಾಲಕ, ನಾಗರಬಾವಿ ನಿವಾಸಿ ಧನುಷ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರು-ಮೈಸೂರು ರಸ್ತೆಯ ಕೆಂಗೇರಿ ಬಿಎಂಟಿಸಿ ಬಸ್ ನಿಲ್ದಾಣ ಬಳಿ ಸಂಧ್ಯಾ ಅವರು ಶನಿವಾರ ರಾತ್ರಿ ರಸ್ತೆ ದಾಟುವ ವೇಳೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ.

ತೀವ್ರವಾಗಿ ಗಾಯಗೊಂಡಿದ್ದ ಸಂಧ್ಯಾ ಅವರನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದರು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಕೆಂಗೇರಿ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಬೆಂಜ್ ಕಾರನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

'ಧನುಷ್ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಆತ ಮದ್ಯ ಸೇವಿಸಿರುವುದು ಖಚಿತಪಟ್ಟಿದೆ. ಮದ್ಯದ ಅಮಲಿನಲ್ಲಿ ಅತಿ ವೇಗ ಹಾಗೂ ನಿರ್ಲಕ್ಷ್ಯದಿಂದ ಕಾರನ್ನು ಚಲಾಯಿಸಿದ್ದೇ ಅಪಘಾತಕ್ಕೆ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಸದ ರಾಶಿ

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮಾರಾಟ ಮಾಡಿ ಉಳಿದ ಬಾಳೆ ಕಂದು, ಹೂವುಗಳ ರಾಶಿ ಮತ್ತು ಕಸದ ಜೊತೆಗೆ ಸಿಎಫ್‌ಎಲ್ ಬಲ್ಬ್‌ಗಳ ರಾಶಿಯೂ ಬಸವನಗುಡಿಯ ಗಾಂಧಿ ಬಜಾರ್ ಮಾರುಕಟ್ಟೆಯಲ್ಲಿ ಭಾನುವಾರ ಕಂಡುಬಂತು

ಪ್ರಜಾವಾಣಿ ಚಿತ್ರ: ರಂಜು ಪಿ.

ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅವರೊಂದಿಗೆ ಅನುಚಿತ ವರ್ತನೆ

ಆರ್‌ಟಿಒ ಇನ್‌ಸ್ಪೆಕ್ಟರ್ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಿರಿಯ ಮೋಟಾರ್ ವಾಹನ ನಿರೀಕ್ಷಕ ಮಂಜುನಾಥ ಕೊರವಿ ಎತ್ತಂಗಡಿ
- ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರು ಆದೇಶ

ಬೀದರ್: ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅವರೊಂದಿಗೆ ಅನುಚಿತವಾಗಿ ವರ್ತಿಸಿದ ಘಟನೆ ನಡೆದ 24 ಗಂಟೆಯೊಳಗೆ ಇಲ್ಲಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯ ಹಿರಿಯ ಮೋಟಾರ್ ವಾಹನ ನಿರೀಕ್ಷಕ ಮಂಜುನಾಥ ಕೊರವಿ ಎಂಬುವರನ್ನು ವರ್ಗಾವಣೆ ಮಾಡಲಾಗಿದೆ.

ಮಂಜುನಾಥ ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಅ. 30ರಂದು ರಾಯಚೂರಿನ ಆರ್‌ಟಿಒ ಕಚೇರಿಗೆ ವರ್ಗಾವಣೆಗೊಳಿಸಿ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ನಡೆದದ್ದೇನು?: ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅವರು ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅ. 29ರ ರಾತ್ರಿ 10 ಗಂಟೆ ಸುಮಾರಿಗೆ ಭಾಲ್ಕಿ ರಸ್ತೆ ಮೂಲಕ ತೆರಳುತ್ತಿದ್ದರು. ನೌಬಾದ್-ಲಾಲ್‌ಬಾಗ್ ಸಮೀಪ ರಸ್ತೆಯ ಎರಡೂ ಬದಿ ವಾಹನಗಳನ್ನು ತಡೆದು ನಿಲ್ಲಿಸಲಾಗಿತ್ತು. ಜನ ಕೂಡ ನಿಂತಿದ್ದರು. ಇದನ್ನು ಗಮನಿಸಿದ ಬೆಲ್ದಾಳೆ ಅವರು ಮಂಜುನಾಥ ಕೊರವಿ ಬಳಿ ತೆರಳಿ, 'ರಾತ್ರಿ ಹೊತ್ತು ಇಷ್ಟೊಂದು ವಾಹನಗಳನ್ನೇಕೆ ತಡೆದು ನಿಲ್ಲಿಸಿದ್ದೀರಿ. ಮಹಿಳೆಯರು, ಮಕ್ಕಳು ರಸ್ತೆಬದಿ ನಿಂತಿದ್ದಾರೆ. ಬೇಗ ಪರಿಶೀಲಿಸಿ ಕಳಿಸಿಕೊಡಬೇಕು. ಹೆಲ್ಮೆಟ್ ಇದ್ದರೂ ಬೈಕ್ ಸವಾರರನ್ನೇಕೆ ತಡೆದಿದ್ದೀರಿ? ಜನರಿಗೆ ತೊಂದರೆ ಕೊಡಬೇಡಿ' ಎಂದು ಹೇಳಿದ್ದಾರೆ.

ಇದರಿಂದ ಕೆರಳಿದ ಮಂಜುನಾಥ, ನಿಮ್ಮಂಥ ಲೀಡರ್‌ಗಳನ್ನು ಎಲ್ಲೆಡೆ ನೋಡಿದ್ದೇನೆ. ನೀವು ಮಂತ್ರಿ, ಎಂಎಲ್‌ಎ ಇರಬಹುದು. ನೀವು ಎಂಎಲ್‌ಎ ಅಂತ ನನಗೆ ಗೊತ್ತಿಲ್ಲ. ನಿಮ್ಮನ್ನು ಫಸ್ಟ್ ಟೈಮ್ ನೋಡ್ತಾ ಇದ್ದೀನಿ' ಎಂದು ಶಾಸಕರು ಹಾಗೂ ಅವರ ಬೆಂಬಲಿಗರತ್ತ ಕೈಎತ್ತಿ ಚುಟುಕಿ ಹೊಡೆದು ಸವಾಲು ಹಾಕುವ ರೀತಿಯಲ್ಲಿ ಮಾತನಾಡಿದ್ದಾರೆ.

ಹಿರಿಯ ಮೋಟಾರ್ ವಾಹನ ನಿರೀಕ್ಷಕ ಮಂಜುನಾಥ ಕೊರವಿ ಅವರು ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅವರತ್ತ ಬೆರಳು ತೋರಿಸಿ ಮಾತನಾಡಿದರು

ಇದರಿಂದ ಕೆರಳಿದ ಬೆಲ್ದಾಳೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಹಾಗೂ ಪೌರಾಡಳಿತ ಸಚಿವ ರಹೀಂ ಖಾನ್ ಅವರಿಗೆ ವಿಷಯ ತಿಳಿಸಿದ್ದಾರೆ. ಘಟನೆ ನಡೆದ ಮರುದಿನವೇ (ಅ.30) ಮಂಜುನಾಥ ಅವರನ್ನು ಎತ್ತಂಗಡಿಗೊಳಿಸಲಾಗಿದೆ.

ಜಿಲ್ಲೆಯ ಕಮಲನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಮರಳು ಸಾಗಣೆ ಲಾರಿಗಳಿಂದ ಹಫ್ತಾ ವಸೂಲಿ ಆರೋಪದಡಿ ಮಂಜುನಾಥ ವಿರುದ್ಧ ಪ್ರಕರಣ ದಾಖಲಾಗಿತ್ತು.

ನಿಟ್ಟೆ: 1065 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 14ನೇ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸಿದ ಒಟ್ಟು 1065 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಅತ್ಯುತ್ತಮ ಶೈಕ್ಷಣಿಕ ಕ್ಷಮತೆಗಾಗಿ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ವಿಭಾಗದ ಸಿ.ಎನ್.ನಾಗಭೂಷಣ್ ಅವರಿಗೆ ನಿಟ್ಟೆ ಗುಲಾಬಿಶೆಟ್ಟಿ ಸ್ಮರಣಾರ್ಥ ಚಿನ್ನದ ಪದಕ ನೀಡಲಾಯಿತು.

ಅತ್ಯುತ್ತಮ ವಿದ್ಯಾರ್ಥಿನಿಗೆ ನೀಡಲಾಗುವ 'ನಿಟ್ಟೆ ಮೀನಾಕ್ಷಿ ಹೆಗ್ಡೆ ಸ್ಮರಣಾರ್ಥ ಚಿನ್ನದ ಪದಕವನ್ನು ಇದೇ ವಿಭಾಗದ ವಿದ್ಯಾರ್ಥಿನಿ ಸುದೀಕ್ಷಾ.ಕೆ ಅವರಿಗೆ, ಅತ್ಯುತ್ತಮ ವಿದ್ಯಾರ್ಥಿಗೆ ನೀಡಲಾಗುವ ಜಸ್ಟಿಸ್ ಕೆ.ಎಸ್.ಹೆಗ್ಡೆ ಸ್ಮರಣಾರ್ಥ ಚಿನ್ನದ ಪದಕವನ್ನು ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್ ವಿಭಾಗದ ಅಶ್ವಿನ್. ಆರ್.ಬಿ ಅವರಿಗೆ ನೀಡಲಾಯಿತು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ನಾತಕ ವಿಭಾಗದಲ್ಲಿ ಏಳು ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ ಏಳು ಚಿನ್ನದ ಪದಕಗಳನ್ನು ನೀಡಲಾಯಿತು.

'ಕೃಷ್ಣದೇವರಾಯ ಕಾದಂಬರಿಯಲ್ಲಿ 21ನೇ ಶತಮಾನದ ಸಂವೇದನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸು.ರುದ್ರಮೂರ್ತಿ ಶಾಸ್ತ್ರಿ ಅವರ ಶ್ರೀಕೃಷ್ಣದೇವರಾಯ ಕಾದಂಬರಿಯಲ್ಲಿ 21ನೇ ಶತಮಾನದ ಸಂವೇದನೆಯನ್ನು ಕಾಣಬಹುದು' ಎಂದು ಸಾಹಿತಿ ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಅಂಕಿತ ಪುಸ್ತಕ ಹಾಗೂ ಬುಕ್‌ಬ್ರಹ್ಮ ಸಹಯೋಗದಲ್ಲಿ ಭಾನುವಾರ ನಡೆದ ಆನ್‌ಲೈನ್ ಕಾರ್ಯಕ್ರಮದಲ್ಲಿ ಸು. ರುದ್ರಮೂರ್ತಿ ಶಾಸ್ತ್ರಿ ಅವರ 'ಶ್ರೀಕೃಷ್ಣದೇವರಾಯ, ವಿಕ್ರಮ ಬೇತಾಳ ಕಥೆಗಳು, ಪಂಚತಂತ್ರದ ಕಥೆಗಳು, ಪುಣ್ಯಕೋಟಿ ಹಾಗೂ ಎಂ.ವಿ. ನಾಗರಾಜರಾವ್ ಅವರ ನಾಗಾ ಸಾಧುಗಳ ರಹಸ್ಯ ಪ್ರಪಂಚ, ಮಹಾ ಯೋಗಿನಿ' ಪುಸ್ತಕಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.



ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್

'ರುದ್ರಮೂರ್ತಿ ಅವರು ಸಾಂಸ್ಕೃತಿಕವಾದ ಸಾಮಾಜಿಕ ಚಿತ್ರಣವನ್ನು ಶ್ರೀಕೃಷ್ಣದೇವರಾಯ ಕಾದಂಬರಿಯಲ್ಲಿ ಕಟ್ಟಿಕೊಟ್ಟಿರುವುದನ್ನು ಕಾಣಬಹುದು. ಇದು ಪರಿಪೂರ್ಣವಾದ ಕಾದಂಬರಿ ಆಗಿದ್ದು, ಸಂಯಮದ ನಿರೂಪಣೆ, ರೂಪಕ ಶಕ್ತಿಯನ್ನು ಒಳಗೊಂಡಿದೆ. ಕೆಲ ಪ್ರಸಂಗಗಳಲ್ಲಿ ಹಾಸ್ಯವನ್ನು ನೋಡಬಹುದು. ಇದರಲ್ಲಿ ಶ್ರೀಕೃಷ್ಣದೇವರಾಯನನ್ನು ಎಲ್ಲಿಯೂ ವಿಜೃಂಭಣೆ ಹಾಗೂ ಅತಿರಂಜನೆ ಮಾಡಿರುವುದು ಕಾಣಿಸುವುದಿಲ್ಲ. ಬದಲಿಗೆ ಶ್ರೀಕೃಷ್ಣದೇವರಾಯನ ಸಮಗ್ರ ಚಿತ್ರಣ ಕಟ್ಟಿಕೊಡುತ್ತದೆ' ಎಂದರು.

'ಎಂ.ವಿ. ನಾಗರಾಜರಾವ್ ಅವರು ತಮ್ಮ ಕಾದಂಬರಿಯಲ್ಲಿ ನಾಗಾ ಸಾಧುಗಳ ವಿಸ್ಮಯ ಲೋಕವನ್ನು ಅನಾವರಣಗೊಳಿಸಿದ್ದಾರೆ. ಇದು ಕುತೂಹಲ, ಬೆರುಗು ಉಂಟುಮಾಡುವುದರ ಜೊತೆಗೆ ರಹಸ್ಯ ಮತ್ತು ವೈಚಾರಿಕತೆಯಿಂದ ಕೂಡಿದೆ. ಈ ಕಾದಂಬರಿಗೆ ನರೋತ್ತಮ ಗಿರಿ ಎಂಬ ಶೀರ್ಷಿಕೆ ನೀಡಬೇಕಿತ್ತು. ಟ್ಯಾಗ್‌ಲೈನ್ ಆಗಿ ನಾಗಾ ಸಾಧುಗಳ ರಹಸ್ಯವೆಂದು ಬಳಸಬಹುದಿತ್ತು' ಎಂದು ಸಲಹೆ ನೀಡಿದರು.

ಸಂಶೋಧಕ ಆರ್. ಶೇಷಶಾಸ್ತ್ರಿ, ಲೇಖಕ ಎಚ್.ಎಸ್. ಸತ್ಯನಾರಾಯಣ ಉಪಸ್ಥಿತರಿದ್ದರು.

₹6 ಲಕ್ಷ ಮೌಲ್ಯದ 226 ಒಣಮೆಣಸಿನಕಾಯಿ ಚೀಲ ವಶ

ಗದಗ: ಎಪಿಎಂಸಿ ವರ್ತಕರಿಂದ ಒಣಮೆಣಸಿನಕಾಯಿ ಖರೀದಿಸಿ, ಹಣ ಕೊಡದೇ ಮೋಸ ಮಾಡಿ ಸೂರತ್‌ನಲ್ಲಿ ಸಂಗ್ರಹಿಸಿಟ್ಟಿದ್ದ ₹6 ಲಕ್ಷ ಮೌಲ್ಯದ 226 ಒಣಮೆಣಸಿನಕಾಯಿ ಚೀಲಗಳನ್ನು ಬೆಟಗೇರಿ ಬಡಾವಣೆ ಠಾಣೆ ಪೊಲೀಸರು ಪತ್ತೆ ಹಚ್ಚಿ, ವಶಪಡಿಸಿಕೊಂಡಿದ್ದಾರೆ. ಗದಗ ಎಪಿಎಂಸಿಯ ನಾಜೀರಾ ಸಾದಿಕ್ ಅಹ್ಮದ್ ಖಾಜಿ ಎಂಬ ವರ್ತಕರಿಂದ ಗುಜರಾತ್ ರಾಜ್ಯದ ಬಾಬರಿ ಆನಂದ ಜಯಂತಿಲಾಲ್ ಹಾಗೂ ಬಾವಿನ್ ರೂಪರೆಲ್ಲಾ ಎಂಬುವವರು 226 ಚೀಲಗಳ ಒಣಮೆಣಸಿಕಾಯಿ ಖರೀದಿಸಿ, ಹಣ ಕೊಡದೇ ನಾಪತ್ತೆಯಾಗಿದ್ದರು. ಈ ಸಂಬಂಧ ನಾಜೀರಾ ಬೆಟಗೇರಿ ಬಡಾವಣೆ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣ ಪತ್ತೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ವಿಶೇಷ ತಂಡ ರಚನೆ ಮಾಡಿದ್ದರು.

‘ಸಚಿವ ಜಮೀರ್ ಗಡೀಪಾರು ಮಾಡಿ’

ಪ್ರಜಾವಾಣಿ ವಾರ್ತೆ



ಚಿತ್ರದುರ್ಗ: ‘ವಕ್ಫ್ ಬೋರ್ಡ್ ಮೂಲಕ ರಾಜ್ಯದ ರೈತರ ಜಮೀನು, ಮಠ– ಮಾನ್ಯಗಳ ಆಸ್ತಿ ಕಬಳಿಕೆಗೆ ಮುಂದಾಗಿರುವ ಸಚಿವ ಜಮೀರ್ ಅಹ್ಮದ್ ಖಾನ್ ಅವರನ್ನು ಗಡೀಪಾರು ಮಾಡಿದರೆ ಒಳಿತು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅಭಿಪ್ರಾಯಪಟ್ಟರು.

‘ಸಂವಿಧಾನದ ಬಗ್ಗೆ ಮಾತನಾಡುವ ಜಮೀರ್, ರಾಜ್ಯದ ತುಂಬಾ ಸಂಚರಿಸಿ ಅಧಿಕಾರಿಗಳಿಗೆ ಬೆದರಿಕೆ ಹಾಕುವ ಕೆಲಸ ಮಾಡುತ್ತಿದ್ದಾರೆ. ರೈತರ ಜಮೀನುಗಳನ್ನು ವಕ್ಫ್ ಬೋರ್ಡ್ ಆಸ್ತಿ ಎಂದು ಹೇಳಿ ನೋಟಿಸ್ ಕೊಡಿಸಿ ಭೂಮಿ ಕಬಳಿಸುವ ಕೆಲಸಕ್ಕೆ ಮುಂದಾಗಿದ್ದಾರೆ’ ಎಂದು ಇಲ್ಲಿ ಭಾನುವಾರ ಸುದ್ದಿಗಾರರೆದುರು ದೂರಿದರು.

‘ಶಾಂತಿಪ್ರಿಯ ರಾಜ್ಯದಲ್ಲಿ ಜಮೀರ್ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಅಹಿಂದ ಹೆಸರು ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅಹಿಂದ ಸಮುದಾಯಕ್ಕೇ ಅನ್ಯಾಯ ಮಾಡುತ್ತಿದ್ದಾರೆ. ಅಭಿವೃದ್ಧಿ ಬಗ್ಗೆ ಆಡಳಿತ ಪಕ್ಷದ ಶಾಸಕರಿಂದಲೇ ಛೀಮಾರಿ ಹಾಕಿಸಿಕೊಳ್ಳುತ್ತಿದ್ದಾರೆ’ ಎಂದರು.

‘ವಕ್ಫ್ ವಿಚಾರದಲ್ಲಿ ಸಿದ್ದರಾಮಯ್ಯ ಮೊಸಳೆ ಕಣ್ಣೀರು ಹಾಕುತ್ತಿದ್ದಾರೆ. ತಾಕತ್ತಿದ್ದರೆ ಗೆಜೆಟ್ ನೋಟಿಫಿಕೇಷನ್ ಹಿಂಪಡೆಯಲಿ. ಈಗ ನೋಟಿಸ್ ಹಿಂಪಡೆದು ಉಪಚುನಾವಣೆ ಬಳಿಕ ನೋಟಿಸ್ ನೀಡುವುದು ಸರಿಯಲ್ಲ’ ಎಂದರು. ‘ಉಪ ಚುನಾವಣೆಯಲ್ಲಿ ಮೂರೂ ಕ್ಷೇತ್ರಗಳಲ್ಲಿ ಬಿಜೆಪಿಗೆ ಗೆಲ್ಲುವ ವಾತಾವರಣ ನಿರ್ಮಾಣವಾಗಿದೆ. ಭ್ರಷ್ಟಾಚಾರರಹಿತ ಆಡಳಿತ ನೀಡಿದ್ದಾಗಿ ಬೊಬ್ಬೆ ಹಾಕುತ್ತಿರುವ ಸಿದ್ದರಾಮಯ್ಯ ಕುಟುಂಬವೇ ಭ್ರಷ್ಟಾಚಾರದಲ್ಲಿ ಮುಳುಗಿದೆ. ಮುಡಾ ಹಗರಣದಿಂದ ಬಣ್ಣ ಬಯಲಾಗಿದೆ’ ಎಂದರು.

ಯತ್ನಾಳ್‌ಗೆ ಎಚ್ಚರಿಕೆ: ‘ಯತ್ನಾಳ್ ಯಾವಾಗ ಏನು ಮಾತಾಡುತ್ತಾರೆ ಎಂಬುದನ್ನು ಆ ಭಗವಂತನೇ ಬಲ್ಲ. ಬಿ.ಎಸ್. ಯಡಿಯೂರಪ್ಪ ನಾಲ್ಕು ದಶಕಗಳಿಂದ ರೈತರ ಪರ ಧ್ವನಿಯೆತ್ತಿದ ಧೀಮಂತ ನಾಯಕ. ಅವರ ಕೊಡುಗೆಯನ್ನು ಮರೆತಿರುವ ಯತ್ನಾಳ್ ಮೊದಲು ಮನಬಂದಂತೆ ಮಾತಾಡುವುದನ್ನು ಬಿಡಲಿ. ಹಗುರವಾಗಿ ಮಾತಾಡಿದರೆ ತಕ್ಕ ಉತ್ತರ ನೀಡಬೇಕಾಗುತ್ತದೆ’ ಎಂದು ಎಚ್ಚರಿಸಿದರು.

ಸಿ.ಎಂ – ಬಿವೈವಿ ಜಟಾಪಟಿ

ಬೆಂಗಳೂರು: ರಾಜ್ಯ ಸರ್ಕಾರದ ಗ್ಯಾರಂಟಿಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮಾಡಿದ್ದ ಎಕ್ಸ್–ಪೋಸ್ಟ್‌ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದು ದೇಶ ಮಾತ್ರವಲ್ಲ, ರಾಜ್ಯಮಟ್ಟದಲ್ಲೂ ರಾಜಕೀಯ ಜಟಾಪಟ ಸೃಷ್ಟಿಸಿದೆ. ಮುಖ್ಯಮಂತ್ರಿ ಪೋಸ್ಟ್‌ಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅಲ್ಲೇ ಉತ್ತರ ನೀಡಿದ್ದು, ಇಬ್ಬರ ನಡುವೆ ‘ಎಕ್ಸ್’ ಸಮರ ಸೃಷ್ಟಿಸಿದೆ. ಇಬ್ಬರೂ ತಲಾ 12ಕ್ಕೂ ಹೆಚ್ಚು ಪೋಸ್ಟ್‌ಗಳ ಮೂಲಕ ವಾಗ್ಯುದ್ಧ ನಡೆಸಿದ್ದಾರೆ.

‘ಬಹಿರಂಗ ಚರ್ಚೆಗೆ ಬನ್ನಿ’

ಪ್ರಧಾನಿ ಮೋದಿ ಅವರೇ, ಹಿಂದಿನ ಎರಡು ಲೋಕಸಭಾ ಚುನಾವಣೆಗಳಿಗೆ ಮುನ್ನ ನಿಮ್ಮ ಪಕ್ಷ ಬಿಡುಗಡೆ ಮಾಡಿದ್ದ ಪ್ರಣಾಳಿಕೆಗಳನ್ನು ಇರಿಸಿಕೊಂಡು ಒಂದು ಸಾರ್ವಜನಿಕ ಚರ್ಚೆಯನ್ನು ಹಮ್ಮಿಕೊಳ್ಳೋಣ. ನೀವು ಕೊಟ್ಟಿರುವ ಭರವಸೆಗಳಲ್ಲಿ ಎಷ್ಟು ಈಡೇರಿಸಿದ್ದೀರಿ? ಬಹಿರಂಗ ಚರ್ಚೆಗೆ ಬನ್ನಿ.

ವಿಜಯೇಂದ್ರ ಅವರೇ, ನೀವಿನ್ನೂ ಆಡಳಿತಕ್ಕೆ ಹೊಸಬರು. ತೆರಿಗೆ - ಅನುದಾನ - ಜಿಎಸ್‌ಟಿ ಇತ್ಯಾದಿ ವಿಚಾರಗಳೆಲ್ಲ ನಿಮ್ಮ ಪೂಜ್ಯ ತಂದೆಯವರಾದ ಬಿ.ಎಸ್.ಯಡಿಯೂರಪ್ಪನವರಿಗೇ ಅರ್ಥವಾಗಿಲ್ಲ, ನಿಮಗೆಷ್ಟು ಅರ್ಥವಾಗಬಹುದು? ಏಳು ಕೋಟಿ ಕನ್ನಡಿಗರಿಗೆ ಕೇಂದ್ರ ಸರ್ಕಾರ ಮಾಡುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತುವ ಧಮ್-ತಾಖತ್ ನಿಮಗಾಗಲಿ, ನಿಮ್ಮ ಹದಿನೇಳು ಎಂ.ಪಿಗಳಿಗಾಗಲಿ ಎಲ್ಲಿದೆ?

‘ಬೇಟಿ ಬಚಾವೋ, ಬೇಟಿ ಪಡಾವೋ’ ಎಂದು ಆಗಾಗ ಘೋಷಣೆ ಕೂಗುತ್ತಿರುವ ಪ್ರಧಾನಿ ಅವರು ಈ ಘೋಷಣೆಗೆ ಬದ್ಧರಾಗಿದ್ದರೆ ಪೋಕ್ಸೊ ಆರೋಪಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಪಕ್ಷದ ರಾಷ್ಟ್ರೀಯ ಸಂಸದೀಯ ಮಂಡಳಿಯ ಸದಸ್ಯ ಸ್ಥಾನದಿಂದ ಮತ್ತು ಅವರನ್ನು ರಕ್ಷಿಸುತ್ತಿರುವ ನಿಮ್ಮನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ಕಿತ್ತುಹಾಕಬೇಕು.

ನನ್ನ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸುವ ನೈತಿಕತೆ ನಿಮಗಿಲ್ಲ. ಸಿಬಿಐ ಮತ್ತು ಇ.ಡಿ ಸಂಸ್ಥೆಗಳು ರಾಜಕೀಯ ಒತ್ತಡಕ್ಕೆ ಮಣಿಯದೇ ನಿಷ್ಪಕ್ಷಪಾತವಾಗಿ ಕೆಲಸ ಮಾಡಿದರೆ, ಡಿನೋಟಿಫಿಕೇಷನ್, ಅಕ್ರಮ ಗಣಿಗಾರಿಕೆ... ಹೀಗೆ ಸಾಲು ಸಾಲು ಭ್ರಷ್ಟಾಚಾರದ ಹಗರಣಗಳ ಕಿಂಗ್‌ಪಿನ್ ಆಗಿರುವ ನಿಮ್ಮ ಜಾಗ ಎಲ್ಲಿರಬಹುದು ಎನ್ನುವುದನ್ನು ಒಮ್ಮೆ ಯೋಚಿಸಿ.

‘ನಮ್ಮ ಪ್ರಶ್ನೆಗಳಿಗೆ ಉತ್ತರಿಸಿ’

ಮೋದಿ ಸರ್ಕಾರದ ಕೊಡುಗೆಗಳು, ಹಿಂದಿನ ನಮ್ಮ ಬಿಜೆಪಿ ಸರ್ಕಾರದ ಯೋಜನೆಗಳ ಪಟ್ಟಿಯನ್ನು ಇಟ್ಟುಕೊಂಡು ನಿಮ್ಮ ಮುಂದೆ ಬರುತ್ತೇವೆ. ನಿಮ್ಮ ಆಡಳಿತಾವಧಿಯ ಮುಡಾ ಹಗರಣ, ಮಹರ್ಷಿ ವಾಲ್ಮೀಕಿ ನಿಗಮದ ಹಣ ದುರ್ಬಳಕೆ ಹಣ, ಕೈಗಾರಿಕಾ ನಿವೇಶನ ಹಂಚಿಕೆ ಹಗರಣ, ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿದ್ದರ ಬಗ್ಗೆ ಜನರಿಗೆ ಉತ್ತರ ನೀಡಿ.

ನೀವು 15 ಬಾರಿ ರಾಜ್ಯದ ಬಜೆಟ್ ಮಂಡಿಸಿರುವ ದಾಖಲೆಯ ವೀರ, ನಿಜ. ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೂ ಸಾಲ ಮಾಡುವ ದುಸ್ಥಿತಿಗೆ ಇಳಿಸಿ ವಿಫಲರಾಗಿದ್ದೀರಿ ಏಕೆ? ಕೆಲಸ ಮಾಡಿ ಬಿಲ್ ಪಾವತಿಯಾಗದೇ ಕಣ್ಣೀರು ಸುರಿಸುತ್ತಿರುವ ಗುತ್ತಿಗೆದಾರರು ನಿಮ್ಮ ಆರ್ಥಿಕ ಸ್ಥಿತಿಗತಿಯನ್ನು ತಿಳಿಸುವ ನಿಜವಾದ ಸಾಕ್ಷಿದಾರರಾಗಿದ್ದಾರೆ.

ಯಡಿಯೂರಪ್ಪ ವಿರುದ್ಧದ ಪಿತೂರಿಯ ಭಾಗವೇ, ‘ಪೋಕ್ಸೊ’ ಹೆಸರಿನ ಸುಳ್ಳು ಕೇಸು. ಇದಕ್ಕೂ ಇಷ್ಟರಲ್ಲೇ ನ್ಯಾಯಾಲಯದಿಂದ ನ್ಯಾಯದ ಉತ್ತರ ಸಿಗಲಿದೆ. ಆದರೆ ನಿಮಗೆ ಸುತ್ತಿಕೊಂಡಿರುವ ಮುಡಾ ಹಗರಣದ ಉರುಳಿನಿಂದ ಹಿಡಿದು, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಕಳಂಕಗಳನ್ನು ಹೊತ್ತ ನೀವು ರಾಜಕೀಯ ಜೀವನದಲ್ಲಿ ಮುಂದೆಂದೂ ಕಳಂಕ ರಹಿತರಾಗಿ ಹೊರಬರಲು ಸಾಧ್ಯವೇ ಇಲ್ಲ.

ನನ್ನ ಈ ಹಿಂದಿನ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ. ನಾನು ನಿಮ್ಮ ವೈಯಕ್ತಿಕ ಬದುಕಿನ ಚರಿತ್ರೆಯನ್ನು ಪ್ರಶ್ನಿಸಿಲ್ಲ, ಬದಲಾಗಿ ಈ ನಾಡು ಹಾಗೂ ಜನರ ಹಿತದೃಷ್ಟಿಯಿಂದ ಒಬ್ಬ ಮುಖ್ಯಮಂತ್ರಿಗೆ ಒಬ್ಬ ಪ್ರಜೆಯಾಗಿ ಕೇಳಬೇಕಾದ ಪ್ರಶ್ನೆಗಳನ್ನಷ್ಟೇ ಕೇಳಿದ್ದೇನೆ.

ಮೋದಿ, ವಿಜಯೇಂದ್ರ ಪೋಸ್ಟ್ ಡಿಲೀಟ್

ಕಾಂಗ್ರೆಸ್‌ನ ಗ್ಯಾರಂಟಿ ಮತ್ತು ಭರವಸೆಗಳನ್ನು ಕುರಿತು ನವೆಂಬರ್ 1ರಂದು ಮೋದಿ ಅವರು ‘ಎಕ್ಸ್’ನಲ್ಲಿ ಒಟ್ಟು ಐದು ಟ್ವೀಟ್‌ಗಳನ್ನು ಮಾಡಿದ್ದರು. ಇದಕ್ಕೆ ಕಾಂಗ್ರೆಸ್ ನಾಯಕರ ಪ್ರತಿಕ್ರಿಯೆ ಮತ್ತು ಟೀಕೆ ಬಂದ ಬೆನ್ನಲ್ಲೇ ಐದರಲ್ಲಿ ಒಂದು ಪೋಸ್ಟ್ ಅನ್ನು ಅಳಿಸಿಹಾಕಲಾಗಿದೆ. ಪೋಸ್ಟ್ ಅಳಿಸಿ ಹಾಕಿದ್ದರ ಕುರಿತು ಕಾಂಗ್ರೆಸ್ ನಾಯಕರು ಲೇವಡಿ ಮಾಡಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಮಾಡಿದ್ದ ಸರಣಿ ಪೋಸ್ಟ್‌ಗಳಲ್ಲಿ ಹಲವನ್ನು ಭಾನುವಾರ ಸಂಜೆಯ ವೇಳೆಗೆ ವಿಜಯೇಂದ್ರ ಅಳಿಸಿಹಾಕಿದ್ದಾರೆ.

ಸುದ್ದಿ 2 ನಿಮಿಷ

ದೇವೀರಮ್ಮ ಬೆಟ್ಟ ಏರಲು 2 ದಿನ ಅವಕಾಶ ನೀಡಲು ನಿರ್ಧಾರ

ಚಿಕ್ಕಮಗಳೂರು: ಬೆಟ್ಟ ಏರಿ ಬಿಂಡಿಗ ದೇವೀರಮ್ಮ ದೇವಿ ದರ್ಶನಕ್ಕೆ ವರ್ಷದಲ್ಲಿ ಒಂದು ದಿನ ಮಾತ್ರ ಇದ್ದ ಅವಕಾಶವನ್ನು ಮುಂದಿನ ವರ್ಷದಿಂದ ಎರಡು ದಿನಗಳಿಗೆ ವಿಸ್ತರಣೆ ಮಾಡಲು ದೇವಾಲಯ ವ್ಯವಸ್ಥಾಪನಾ ಮಂಡಳಿ ನಿರ್ಧರಿಸಿದೆ.

ಬೆಟ್ಟದ ತಳದಲ್ಲಿರುವ ದೇಗುಲದಲ್ಲಿ ಪ್ರತಿಷ್ಠಾಪನೆ ಮಾಡಿರುವ ದೇವಿಯ ವಿಗ್ರಹ ನರಕ ಚತುರ್ದಶಿಯ ದಿನ ಬೆಟ್ಟದ ತುದಿಗೆ ಒಯ್ದು ಪ್ರತಿಷ್ಠಾಪನೆ ಮಾಡಲಾಗುತ್ತಿತ್ತು. ಒಂದೇ ದಿನ ಹೆಚ್ಚಿನ ಭಕ್ತರು ಜಮಾಯಿಸಿದ್ದರಿಂದ ಹಲವರು ಬಿದ್ದು ಕೈಕಾಲು ಮುರಿದು ಕೊಂಡಿದ್ದರು. ಜನದಟ್ಟಣೆ ಕಡಿಮೆ ಮಾಡಲು ಬೆಟ್ಟ ಹತ್ತಲು 2 ದಿನ ಅವಕಾಶ ನೀಡಲು ಸಮಿತಿ ತೀರ್ಮಾನ ಕೈಗೊಂಡಿದೆ. ‘ನರಕ ಚತುದರ್ಶಿ ಹಿಂದಿನ ದಿನ ಬೆಳಿಗ್ಗೆ ದೇವಿಯ ವಿಗ್ರಹವನ್ನು ಬೆಟ್ಟದ ತುದಿಯಲ್ಲಿ ಪ್ರತಿಷ್ಠಾಪಿಸಲು ತೀರ್ಮಾನಿಸಲಾಗಿದೆ. ಮುಂದಿನ ವರ್ಷದಿಂದ ಭಕ್ತರಿಗೆ ಬೆಟ್ಟ ಹತ್ತಲು 2 ದಿನ ಅವಕಾಶ ದೊರೆಯಲಿದೆ’ ಎಂದು ದೇವಸ್ಥಾನ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕುಲಶೇಖರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಹಾಸನಾಂಬೆ ದರ್ಶನಕ್ಕೆ ತೆರೆ

ಹಾಸನ: ಇಲ್ಲಿನ ಶಕ್ತಿದೇವತೆ ಹಾಸನಾಂಬ ದರ್ಶನೋತ್ಸವಕ್ಕೆ ಭಾನುವಾರ ತೆರೆ ಬಿದ್ದಿತು. ಮಧ್ಯಾಹ್ನ 12.33ಕ್ಕೆ ಸಕಲ ವಿಧಿವಿಧಾನಗಳೊಂದಿಗೆ ಹಾಸನಾಂಬ ದೇಗುಲದ ಗರ್ಭಗುಡಿಯ ಬಾಗಿಲಿಗೆ ಬೀಗ ಹಾಕಲಾಯಿತು.

ಸಂಪ್ರದಾಯದಂತೆ ಪೂಜೆ, ನೈವೇದ್ಯ ಮಾಡಿ, ನಂದಾದೀಪ ಹಚ್ಚಿಟ್ಟ ಅರ್ಚಕರು, ಜಿಲ್ಲಾಡಳಿತದ ಅಧಿಕಾರಿಗಳ ಸಮ್ಮುಖದಲ್ಲಿ ಗರ್ಭಗುಡಿಯ ಬಾಗಿಲಿಗೆ ಬೀಗ ಹಾಕಿ, ಕೀಲಿಯನ್ನು ದೇವಾಲಯದ ಆಡಳಿತಾಧಿಕಾರಿಗೆ ಹಸ್ತಾಂತರಿಸಿದರು.

ಮುಂದಿನ ವರ್ಷ ಅ. 9ರಿಂದ ಅ.23ರವರೆಗೆ ಹಾಸನಾಂಬ ದೇಗುಲದ ಬಾಗಿಲು ತೆರೆಯಲಿದ್ದು, ಭಕ್ತರಿಗೆ ದರ್ಶನ ಲಭ್ಯವಾಗಲಿದೆ. ಈ ಬಾರಿ 20 ಲಕ್ಷ ಭಕ್ತರು ದರ್ಶನ ಪಡೆದಿದ್ದು, ಟಿಕೆಟ್, ಲಾಡು ಮಾರಾಟದಿಂದ ₹9 ಕೋಟಿ ಆದಾಯ ಸಂಗ್ರಹವಾಗಿದೆ ಎಂದು ಅಂದಾಜಿಸಲಾಗಿದೆ.

ಸಚಿವ ರಾಜಣ್ಣ ಗೈರು: ಹಾಸನಾಂಬ ಜಾತ್ರೆಯ ಆರಂಭವಾದ ಅ.24 ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಬಂದಿದ್ದ ಅ.28ರಂದು ಹಾಸನಾಂಬೆ ದೇಗುಲಕ್ಕೆ ಬಂದಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ, ಭಾನುವಾರ ಗೈರು ಹಾಜರಾಗಿದ್ದರು. ರಾಜ್ಯೋತ್ಸವದ ಧ್ವಜಾರೋಹಣಕ್ಕೆ ಸಚಿವರು ಬಂದಿರಲಿಲ್ಲ. ಹಾಸನಾಂಬ ದೇವಿ ದರ್ಶನದಲ್ಲಿ ಅವ್ಯವಸ್ಥೆ ಉಂಟಾದ ನಂತರ ಸಚಿವ ರಾಜಣ್ಣ ಜಿಲ್ಲೆಗೆ ಬಾರದೇ ಇರುವುದು ಸ್ಥಳೀಯರಲ್ಲಿ ಆಕ್ರೋಶ ಉಂಟು ಮಾಡಿದೆ.

ಇಂದಿನಿಂದ ಅಹೋರಾತ್ರಿ ಧರಣಿ: ಶಾಸಕ ಯತ್ನಾಳ

ವಿಜಯಪುರ: ‘ಕಾನೂನು ಬಾಹಿರವಾಗಿ ರೈತರ, ಸಂಘ-ಸಂಸ್ಥೆಗಳ, ಮಠ ಮಾನ್ಯಗಳ ಜಮೀನು ಹಾಗೂ ಸರ್ಕಾರಿ ಜಮೀನುಗಳ ಉತಾರೆಯಲ್ಲಿ ವಕ್ಫ್ ಆಸ್ತಿ ಎಂದು ನಮೂದು ಮಾಡಿರುವುದನ್ನು ತಕ್ಷಣ ತೆಗೆದು ಹಾಕುವುದು ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಒತ್ತಾಯಿಸಿ ನವೆಂಬರ್ 4 ರಿಂದ ಡಿಸಿ ಕಚೇರಿ ಹೊರಭಾಗದಲ್ಲಿ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಆರಂಭಿಸಲಾಗುವುದು’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ವಿಜಯಪುರ ನಗರದಲ್ಲಿ ನ.4ರಂದು ಬಿಜೆಪಿ ಆಯೋಜಿಸಿರುವ ಪ್ರತಿಭಟನೆಯಲ್ಲಿ ಕೊಲ್ಹಾಪುರ ಕನ್ನೇರಿ ಮಠದ ಅದೃಷ್ಟ ಕಾಡಸಿದ್ದೇಶ್ವರ ಸ್ವಾಮೀಜಿ ಭಾಗ ವಹಿಸುತ್ತಿರುವುದಕ್ಕೆ ಕಾಂಗ್ರೆಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

‘ಶ್ರೀಗಳು ರಾಜಕೀಯ ಪಕ್ಷವೊಂದರ ಪ್ರತಿಭಟನೆಯಲ್ಲಿ ಭಾಗವಹಿಸುತ್ತಿರುವುದು ಮಠದ ತತ್ವ, ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಸೌಹಾರ್ದ ಕಾಪಾಡಲು ಸಹಕರಿಸಬೇಕು, ಕೋಮು ಸಂಘರ್ಷಕ್ಕೆ ಶ್ರೀಗಳು ಅವಕಾಶ ನೀಡಬಾರದು’ ಎಂದು ಕೆಪಿಸಿಸಿ ವೈದ್ಯಕೀಯ ಘಟಕದ ಪ್ರಧಾನ ಕಾರ್ಯದರ್ಶಿ ಡಾ.ರವಿ ಬಿರಾದಾರ ಹೇಳಿದ್ದಾರೆ.

ವಕ್ಫ್ ಆಸ್ತಿ ಪರ ಬೊಮ್ಮಾಯಿ ಭಾಷಣ ಹಂಚಿಕೊಂಡ ಕಾಂಗ್ರೆಸ್: ಸಂಸದ ಬಸವರಾಜ ಬೊಮ್ಮಾಯಿ ಅವರು ಸಿಎಂ ಆಗಿದ್ದಾಗ ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ‘ರಾಜ್ಯದಲ್ಲಿ 2 ಸಾವಿರಾರು ಕೋಟಿ ಮೊತ್ತದ ವಕ್ಫ್ ಆಸ್ತಿಯನ್ನು ಪ್ರಭಾವಿಗಳು ಒತ್ತುವರಿ ಮಾಡಿ, ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ಇದು ದೇವರ ಆಸ್ತಿ. ಒತ್ತುವರಿಯಾಗಿರುವ ಒಂದೊಂದು ಇಂಚು ಭೂಮಿಯನ್ನು ಮರಳಿ ಪಡೆಯುವುದು ಸಮಾಜದವರ ಕರ್ತವ್ಯ. ಒತ್ತುವರಿಯಾಗಿರುವ ವಕ್ಫ್ ಆಸ್ತಿ ತೆರವುಗೊಳಿಸಿ, ರಕ್ಷಿಸಿಕೊಳ್ಳಲು ಸರ್ಕಾರ ಅಗತ್ಯ ನೆರವು ನೀಡಲಿದೆ’ ಎಂದಿರುವ ಭಾಷಣದ ತುಣುಕನ್ನು ಕೆಪಿಸಿಸಿ ಮಾಧ್ಯಮ ವಕ್ತಾರ ಎಸ್.ಎಂ.ಪಾಟೀಲ ಗಣಿಹಾರ ಸುದ್ದಿಗೋಷ್ಠಿಯಲ್ಲಿ ಪ್ರದರ್ಶಿಸಿದರು.

‘ಬೊಮ್ಮಾಯಿ ಸಿಎಂ ಆಗಿದ್ದಾಗ ಸತ್ಯ ಹೇಳಿದ್ದಾರೆ. ಆದರೆ, ಇದೀಗ ಬಿಜೆಪಿ ರಾಜಕೀಯ ಉದ್ದೇಶಕ್ಕೆ ವಕ್ಫ್ ವಿವಾದವನ್ನು ಸೃಷ್ಟಿಸಿರುವುದು ಖಂಡನೀಯ. ವಕ್ಫ್ ವಿಷಯವಾಗಿ ಬಿಜೆಪಿಯವರು ಸುಳ್ಳು ಸುದ್ದಿಗಳನ್ನು ಹರಡುತ್ತಿದ್ದಾರೆ. ವಕ್ಫ್‌ಗೆ ಆಸ್ತಿ ಎಲ್ಲಿಂದ ಬಂತು ಎಂದೆಲ್ಲ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಪ್ರಶ್ನಿಸಿರುವುದು ಖಂಡನೀಯ’ ಎಂದು ಹೇಳಿದರು.

‘ಕೈ’– ಕಮಲ ವಕ್ಫ್ ಕಾಳಗ

‘ದುರುದ್ದೇಶದಿಂದ ಪ್ರತಿಭಟನೆ’

ಒಂದನೇ ಪುಟದಿಂದ...

‘ಜಮೀನಿಗೆ ಸಂಬಂಧಿಸಿದ ವಿವಾದದಲ್ಲಿ ನೋಟಿಸ್ ನೀಡಿ ವಿವರ ಪಡೆಯುವುದು ಒಂದು ಸಾಮಾನ್ಯ ಆಡಳಿತಾತ್ಮಕ ಪ್ರಕ್ರಿಯೆ’ ಎಂದಿರುವ ಮುಖ್ಯಮಂತ್ರಿ, ‘ಬಿಜೆಪಿಯ ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದ ಗೌಡ, ಜಗದೀಶ ಶೆಟ್ಟರ್ ಹಾಗೂ ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ಅವರು ಸಿಎಂ ಆಗಿದ್ದಾಗ ನೂರಾರು ರೈತ ಕುಟುಂಬಗಳ ಆಸ್ತಿಗಳನ್ನು ವಕ್ಫ್ ಮಂಡಳಿಗೆ ಖಾತೆ ಬದಲಾಯಿಸಿದ ದಾಖಲೆಗಳನ್ನು ಶೀಘ್ರದಲ್ಲಿ ಬಿಡುಗಡೆ ಮಾಡುತ್ತೇವೆ’ ಎಂದು ಹೇಳಿದ್ದಾರೆ.

ಬಿಜೆಪಿಯ ನಾಯಕರಾಗಿರುವ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರು ಮುಸ್ಲಿಂ ಸಮುದಾಯವನ್ನು ಉದ್ದೇಶಿಸಿ ಮಾತನಾಡುತ್ತಾ ‘ವಕ್ಫ್ ಆಸ್ತಿ ಅಲ್ಲಾಹುಗೆ ಸೇರಿದ್ದು, ಆ ಆಸ್ತಿಯನ್ನು ಹಲವರು ಕಬಳಿಸಿದ್ದಾರೆ. ಅದನ್ನು ಒಂದೊಂದು ಇಂಚೂ ಬಿಡದೆ ವಾಪಸು ಪಡೆಯಬೇಕು. ಇಲ್ಲದೆ ಇದ್ದರೆ ಅಲ್ಲಾಹುವಿನ ದೃಷ್ಟಿಯಲ್ಲಿ ನೀವು ತಪ್ಪಿತಸ್ಥರಾಗುತ್ತಿರಿ’ ಎಂದು ಹೇಳಿರುವ ವೀಡಿಯೊ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದೆ, ಇದು ಬಿಜೆಪಿ ನಾಯಕರ ಅತ್ಮವಂಚನೆಯ ನಡವಳಿಕೆಯನ್ನು ಬಯಲು ಮಾಡಿದೆ’ ಎಂದೂ ಟೀಕಿಸಿದ್ದಾರೆ.

ಕಟ್ಟುನಿಟ್ಟಿನ ಎಚ್ಚರಿಕೆ: ಕಂದಾಯ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಕ್ಫ್ ಮಂಡಳಿಯ ಹಿರಿಯ ಅಧಿಕಾರಿಗಳ ಜೊತೆ ಶನಿವಾರ ಸುದೀರ್ಘ ಸಭೆ ನಡೆಸಿದ್ದ ಮುಖ್ಯಮಂತ್ರಿ, ‘ರೈತರ ಪಹಣಿ ಬದಲಾವಣೆ ಸಂಬಂಧ ಈಗಾಗಲೇ ನೀಡಿರುವ ನೋಟಿಸ್ ತಕ್ಷಣ ಹಿಂಪಡೆಯಬೇಕು, ರೈತರ ಸ್ವಾಧೀನದಲ್ಲಿರುವ ಜಮೀನುಗಳಿಗೆ ಯಾವುದೇ ರೀತಿಯ ತೊಂದರೆ ನೀಡಬಾರದು. ನೋಟಿಸ್ ನೀಡದೆ ಅಥವಾ ಕಾನೂನುಬಾಹಿರವಾಗಿ ಪಹಣಿಯಲ್ಲಿ ಯಾವುದೇ ತಿದ್ದುಪಡಿ ಮಾಡಿದ್ದರೆ ತಕ್ಷಣ ರದ್ದು ಮಾಡಬೇಕು’ ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದರು.

‘ಶಾಶ್ವತ ಪರಿಹಾರಕ್ಕೆ ಕಾನೂನು ತನ್ನಿ’

ಒಂದನೇ ಪುಟದಿಂದ...

‘ವಕ್ಫ್ ಮಂಡಳಿಯಿಂದ ರೈತರು, ಸಾಮಾನ್ಯ ಜನರ ಭೂಮಿಯ ಅತಿಕ್ರಮಣದ ವಿವರಗಳು ಪ್ರತಿನಿತ್ಯ ಬರುತ್ತಿವೆ. ವಿಜಯಪುರ, ಹಾವೇರಿ, ಬಾಗಲಕೋಟೆ, ಯಾದಗಿರಿ ಸೇರಿ ಹಲವು ಜಿಲ್ಲೆಗಳಲ್ಲಿ ಭೂಮಿ ಕಳೆದುಕೊಳ್ಳುವ ಆತಂಕದಲ್ಲಿ ರೈತರು, ಜನರು ಇದ್ದಾರೆ. ವಕ್ಫ್ ಸಚಿವರು ರೈತರಿಗೆ ನೋಟಿಸ್ ಜಾರಿ ಮಾಡುವಂತೆ ಅಧಿಕಾರಿಗಳಿಗೆ ಆದೇಶಿಸಿರುವುದು ಸಮಸ್ಯೆ ಉಲ್ಬಣಿಸಲು ಕಾರಣವಾಗಿದೆ’ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಈ ವಿಚಾರವಾಗಿ ಸಮಗ್ರ ತನಿಖೆ ನಡೆಸಬೇಕು. ಸಂಪುಟದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳುವುದರ ಮೂಲಕ ವಕ್ಫ್ ಆಕ್ರಮಣ ನೀತಿಗೆ ತಡೆ ನೀಡಬೇಕು. ಅಗತ್ಯ ಬಂದಲ್ಲಿ 1975ರ ಗೆಜೆಟ್ ಅಧಿಸೂಚನೆ ಹಿಂದಕ್ಕೆ ಪಡೆಯಬೇಕು’ ಎಂದು ಒತ್ತಾಯಿಸಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗ ನೋಟಿಸ್ ವಾಪಸ್ ಪಡೆಯಲು ಆದೇಶ ನೀಡಿರಬಹುದು. ಇದು ತಾತ್ಕಾಲಿಕ ಕ್ರಮವಾಗುತ್ತದೆ. ಮುಂದೆ ಬರುವ ಸರ್ಕಾರಗಳು ಇದೇ ನೀತಿ ಅನುಸರಿಸುತ್ತಾರೆ ಎಂಬುದಕ್ಕೆ ಯಾವುದೇ ಗ್ಯಾರಂಟಿ ಇಲ್ಲ. ಆದ್ದರಿಂದ, ಇದಕ್ಕೊಂದು ಶಾಶ್ವತ ಪರಿಹಾರ ಈಗಲೇ ಕಂಡುಕೊಳ್ಳಬೇಕು’ ಎಂದು ಹೇಳಿದ್ದಾರೆ.

ಮೊದಲು ತಿಳಿವಳಿಕೆ: ಬಳಿಕ ದಾವೆ

ಒಂದನೇ ಪುಟದಿಂದ...

ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ಸಹಕಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ಅ. 8 ಮತ್ತು 9ರಂದು ವಿಕಾಸಸೌಧದಲ್ಲಿ ನಡೆದಿತ್ತು. ಸುಸ್ತಿಯಾದ ಅಲ್ಪಾವಧಿ ಕೃಷಿ ಸಾಲಗಳ ಕುರಿತು ಈ ಸಭೆಯಲ್ಲಿ ಗಂಭೀರ ಚರ್ಚೆ ನಡೆದಿದೆ. ಈ ಸಭೆಯ ನಡಾವಳಿಯನ್ನು ಉಲ್ಲೇಖಿಸಿ ಟಿ.ಎಚ್.ಎಂ. ಕುಮಾರ್ ಅವರು ಈ ನಿರ್ದೇಶನ ನೀಡಿದ್ದಾರೆ.

ಸುಸ್ತಿಯಾದ ಸಾಲಗಳ ವಸೂಲಾತಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70–ಎ ಅಡಿ ದಾವೆ ದಾಖಲಿಸಲು ಗರಿಷ್ಠ ಆರು ವರ್ಷಗಳ ಮಿತಿ ಇರುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ. ಮಿತಿ ಮೀರಿದ ಪ್ರಕರಣಗಳಲ್ಲಿ ದಾವೆ ದಾಖಲಿಸಲೇಬೇಕಾದ ಅನಿವಾರ್ಯದ ಬಗ್ಗೆಯೂ ಸಮಾಲೋಚನೆ ನಡೆದಿದೆ. ಸಚಿವರು ಅಲ್ಪಾವಧಿ ಕೃಷಿ ಸಾಲ ಪಡೆದು ಸುಸ್ತಿಯಾದ ರೈತರಿಗೆ ನೋಟಿಸ್‌ಗಳನ್ನು ನೀಡದೆ, ಮೊದಲ ಹಂತದಲ್ಲಿ ತಿಳಿವಳಿಕೆ ಪತ್ರಗಳನ್ನು ಮಾತ್ರ ನೀಡುವಂತೆ ಸಭೆಯಲ್ಲಿ ಸೂಚನೆ ನೀಡಿದ್ದರು.

> ಸಭೆಯ ನಿರ್ಣಯದಂತೆ, ಸುಸ್ತಿಯಾದ ಸಾಲ ಮರುಪಾವತಿಸುವಂತೆ ರೈತರಿಗೆ ತಿಳಿವಳಿಕೆ ಪತ್ರ ನೀಡಲಾಗುತ್ತದೆ. ಅದೇನೂ ನೋಟಿಸ್ ಅಲ್ಲ
> **ಟಿ.ಎಚ್.ಎಂ. ಕುಮಾರ್,** ಸಹಕಾರ ಸಂಘಗಳ ನಿಬಂಧಕ

ತಿಳಿವಳಿಕೆ ಪತ್ರ ನೀಡಿದ ನಂತರವೂ ರೈತರು ಸಾಲ ಮರು ಪಾವತಿಸದೇ ಇದ್ದರೆ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿ ದಾವೆ ದಾಖಲಿಸಿ, ಅವಾರ್ಡ್ (ಕಾನೂನು ಪ್ರಕಾರ ಕ್ರಮ) ಪಡೆಯಲು, ನಂತರ ಅಮಲ್ಜಾರಿ (ವಸೂಲಾತಿಗೆ ಕ್ರಮ) ಅರ್ಜಿ ದಾಖಲಿಸಬೇಕು. ಆದರೆ, ರೈತರ ಆಸ್ತಿ ಹರಾಜು ಪ್ರಕ್ರಿಯೆಯನ್ನು ಕೈಗೊಳ್ಳಬಾರದು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದೂ ಸಚಿವರು ತಿಳಿಸಿದ್ದರು.

ಸಚಿವರು ಸಭೆಯಲ್ಲಿ ನೀಡಿರುವ ಸೂಚನೆಯಂತೆ ಸಹಕಾರ ಸಂಘಗಳು, ಬ್ಯಾಂಕುಗಳು ಮತ್ತು ಇಲಾಖೆಯ ಅಧಿಕಾರಿಗಳಿಗೆ ಈ ಸೂಚನೆ ನೀಡಲಾಗಿದೆ ಎಂದೂ ಪತ್ರದಲ್ಲಿ ಕುಮಾರ್ ಅವರು ಉಲ್ಲೇಖಿಸಿದ್ದಾರೆ.

ಜಂಟಿ ನಿಬಂಧಕರ ಕಚೇರಿಯಲ್ಲಿ ದಾವೆ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿ ಸಂಘಗಳು ಅಥವಾ ಸಂಘದ ಸದಸ್ಯರು ಬಾಧಿತರಾಗಿದ್ದರೆ ದಾವೆ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಕಲಂ 70ರಡಿ ದಾಖಲಾಗುವ ದಾವೆ ಪ್ರಕರಣಗಳ ವಿಚಾರಣೆಯನ್ನು ವಾರದಲ್ಲಿ ಎರಡು ದಿನ ಜಂಟಿ ನಿಬಂಧಕರ ಕಚೇರಿಯಲ್ಲಿ ನಡೆಸಲಾಗುತ್ತದೆ. ಸಹಕಾರ ಸಂಘಗಳ ಜಂಟಿ ನಿಬಂಧಕರು ಅರೆನ್ಯಾಯಿಕ ಪ್ರಾಧಿಕಾರ ಆಗಿರುತ್ತಾರೆ. ಈ ರೀತಿ ದಾಖಲಾದ ದಾವೆಗಳನ್ನು ಕಾಯ್ದೆ ಕಲಂ 71ರಡಿ ಇತ್ಯರ್ಥಪಡಿಸಲು ಕೂಡಾ ಅವಕಾಶ ಕಲ್ಪಿಸಲಾಗಿದೆ.

ಅದರಂತೆ, ತಮ್ಮ ವ್ಯಾಪ್ತಿಯ ನಿಬಂಧಕರು, ತಾವೇ ವಿಚಾರಣೆ ನಡೆಸಬಹುದು ಅಥವಾ ಗೌರವ ಮಧ್ಯಸ್ಥದಾರರಿಗೆ ಅಥವಾ ಇಲಾಖೆಯ ಮಧ್ಯಸ್ಥದಾರರಿಗೆ ವಹಿಸಿಕೊಡಬಹುದು. ಪ್ರಾದೇಶಿಕ ಜಂಟಿ ನಿಬಂಧಕರ ವ್ಯಾಪ್ತಿಯು 6–7 ಜಿಲ್ಲೆಗಳಿಗೆ ವ್ಯಾಪಿಸಿದ್ದು, ಅವರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಸಭೆಗಳಲ್ಲಿ ಭಾಗವಹಿಸುವ ಜೊತೆಗೆ, ಪ್ರತಿ ತಿಂಗಳು ನಡೆಯುವ ಇಲಾಖಾ ಸಭೆಗಳಲ್ಲಿ ಹಾಜರಾಗಬೇಕು ಎಂದು ಸಹಕಾರ ಇಲಾಖೆಯ ಮೂಲಗಳು ತಿಳಿಸಿವೆ.

‘ಕಾಯ್ದೆ ತಿದ್ದುಪಡಿಗೆ ಇಷ್ಟೆಲ್ಲ ಮಾಡುತ್ತಿದ್ದಾರೆ’

ಪ್ರಜಾವಾಣಿ ವಾರ್ತೆ

ಜಮೀರ್ ಅಹಮದ್ ಖಾನ್

ಕಲಬುರಗಿ: ‘ಕೇಂದ್ರ ಸರ್ಕಾರವು ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿದ್ದರ ಹಿನ್ನೆಲೆಯಲ್ಲಿ ಇಷ್ಟೆಲ್ಲ ಮಾಡುತ್ತಿದ್ದಾರೆ. ಕಾಯ್ದೆ ಜಾರಿಯಾದ ಬಳಿಕ ಏನು ಮಾಡಲು ಆಗುತ್ತದೆ? ಅದಕ್ಕೆ ಬೇರೆ ದಾರಿಯನ್ನು ಹುಡುಕಿಕೊಳ್ಳುತ್ತೇವೆ’ ಎಂದು ವಕ್ಫ್ ಮತ್ತು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಇಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ದೇಶಕ್ಕೆ ಸ್ವಾತಂತ್ರ್ಯ ಬರುವ ಮುಂಚೆಯಿಂದಲೂ ವಕ್ಫ್ ಇದೆ. 1.12 ಲಕ್ಷ ಎಕರೆ ಜಮೀನು ದಾನಿಗಳು ಕೊಟ್ಟಿದ್ದೇ ಹೊರತು ಸರ್ಕಾರದ್ದಲ್ಲ. ಜನಸಾಮಾನ್ಯರ ಆಸ್ತಿಯನ್ನು ಪಡೆದುಕೊಳ್ಳಲು ಆಗುವುದಿಲ್ಲ. ಇನ್ನು ರೈತರ ಜಮೀನು ಪಡೆಯುವ ಪ್ರಶ್ನೆಯೇ ಇಲ್ಲ’ ಎಂದರು.

ಪಹಣಿಯಲ್ಲಿ ವಕ್ಫ್ ಮಂಡಳಿ ಹೆಸರು ನಮೂದು ಆಗುತ್ತಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ‘ಮುಂಚೆ ಯಿಂದಲೂ ವಕ್ಫ್ ಇತ್ತು. ಸುಪ್ರೀಂಕೋರ್ಟ್‌ನ ಆದೇಶ ಆಗಿದ್ದು, ಈ ಹಿನ್ನೆಲೆಯಲ್ಲಿ ಆ ರೀತಿ ಆಗಿದೆ’ ಎಂದು ಹೇಳಿದರು.

‘ಬಿಜೆಪಿ ಯವರು ಉಪಚುನಾವಣೆ ಮತ್ತು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಕಾರಣಕ್ಕೂ ವಕ್ಫ್ ವಿವಾದವನ್ನು ತಂದಿದ್ದಾರೆ. ಇದೆಲ್ಲ ಜನರಿಗೆ ಅರ್ಥವಾಗುತ್ತಿದ್ದು, ಬಿಜೆಪಿಗರಿಗೆ ಇದರಿಂದ ಏನೂ ಲಾಭವಾಗುವುದಿಲ್ಲ’ ಎಂದರು.

ಶಂಕರ್‌ನಾಗ್ ರಥ... ನಟ ಶಂಕರ್‌ನಾಗ್ ಅವರ ಜನ್ಮದಿನದ ಅಂಗವಾಗಿ ಕರ್ನಾಟಕ ಆಟೊ, ಟ್ಯಾಕ್ಸಿ, ಗೂಡ್ಸ್, ಶಾಲಾ ವಾಹನ ಸಂಘಟನೆಗಳಿಂದ 11ನೇ ವರ್ಷದ ಚಾಲಕರ ದಿನಾಚರಣೆ ಮತ್ತು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ನ.9ರಂದು ನಡೆಯಲಿದ್ದು, ಆಟೊವನ್ನೇ ‘ರಥ’ವನ್ನಾಗಿ ರೂಪಿಸಿ ನಗರದಲ್ಲಿ ಈ ಬಗ್ಗೆ ಪ್ರಚಾರ ನಡೆಸುತಿದ್ದ ದೃಶ್ಯ ಬಸವನಗುಡಿಯಲ್ಲಿ ಕಂಡುಬಂತು

ಪ್ರಜಾವಾಣಿ ಚಿತ್ರ: ರಂಜು ಪಿ.

‘ನೋಟಿಫಿಕೇಶನ್ ರದ್ದುಪಡಿಸಲಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ವಕ್ಫ್ ಆಸ್ತಿ ಹೆಸರಲ್ಲಿ ರೈತರಿಗೆ ಕೊಟ್ಟಿರುವ ನೋಟಿಸ್ ವಾಪಸ್ ಪಡೆಯುವಂತೆ ಸಿಎಂ ಸಿದ್ದರಾಮಯ್ಯ ಹೇಳಿರುವುದು ಕಣ್ಣೊರೆಸುವ ತಂತ್ರವಷ್ಟೇ. ಉಪ ಚುನಾವಣೆ ಬಳಿಕ ರೈತರಿಗೆ ಮತ್ತೆ ನೋಟಿಸ್ ಕೊಡುವುದಿಲ್ಲ ಎನ್ನುವುದಕ್ಕೆ ಏನು ಗ್ಯಾರಂಟಿ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಸಿದ್ದರಾಮಯ್ಯ ಅವರಿಗೆ ರೈತರ ಮೇಲೆ ನಿಜಕ್ಕೂ ಕಾಳಜಿ ಇದ್ದರೆ, ರೈತರ ಆಸ್ತಿ ಉಳಿಸಬೇಕೆಂದಿದ್ದರೆ ಕೂಡಲೇ ವಕ್ಫ್ ಗೆಜೆಟ್ ನೋಟಿಫಿಕೇಷನ್ ರದ್ದು ಮಾಡಬೇಕು. ಯಾವುದೇ ಕಾರಣಕ್ಕೂ ರೈತರಿಗೆ ನೋಟಿಸ್ ನೀಡಬಾರದು’ ಎಂದರು.

‘ನಾನು ವಕ್ಫ್ ಬೋರ್ಡ್‌ನ ಯಾವುದೇ ಸಭೆ ಮಾಡಿಲ್ಲ. ಈ ಹಿಂದೆ ವಕ್ಫ್ ಸಮಾರಂಭದಲ್ಲಿ ಮಾತನಾಡಿದ ವಿಡಿಯೊವನ್ನು ಸಚಿವ ಜಮೀರ್ ಅಹ್ಮದ್ ಖಾನ್ ಈಗ ಬಿಡುಗಡೆ ಮಾಡಿ, ರೈತರ ಜಮೀನು ವಶಪಡಿಸಿಕೊಳ್ಳಲು ವಕ್ಫ್‌ಗೆ ಹೇಳಿದ್ದೆ ಎಂದು ಸುಳ್ಳು ಸುದ್ದಿ ಪ್ರಚಾರ ಮಾಡುತ್ತಿದ್ದಾರೆ’ ಎಂದು ದೂರಿದರು.

ಸಿನಿಮಾಕ್ಕೆ ಸಂಬಂಧಿಸಿದ 2 ಕೃತಿಗಳ ರಚನೆ

‘ಮಠ’ ನಿರ್ದೇಶಕನ ನಿರ್ಗಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುಪ್ರಸಾದ್ ಅವರ ಮೊದಲ ಹೆಸರು ರಾಮಚಂದ್ರ ಶರ್ಮಾ. ಮೂಲತಃ ಕನಕಪುರದ ಕೋಟೆಯವರಾದ ಗುರುಪ್ರಸಾದ್, ವಿಜ್ಞಾನ ಪದವಿ ಮುಗಿಸಿ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಬಳಿಕ ಟಿ.ಎನ್.ಸೀತಾರಾಮ್ ಅವರ ಬಳಿ ‘ಮನ್ವಂತರ’ ಧಾರಾವಾಹಿಗೆ ಸಂಭಾಷಣೆಕಾರರಾಗಿ ಸೇರಿಕೊಂಡರು. ಅಲ್ಲಿಯೇ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿ, ನಂತರ ನಿರ್ದೇಶಕ ಸುನಿಲ್ ಕುಮಾರ್ ದೇಸಾಯಿ ಅವರ ನಿರ್ದೇಶನ ತಂಡ ಸೇರಿದರು.

2006ರಲ್ಲಿ ತೆರೆಕಂಡ ಜಗ್ಗೇಶ್ ಮುಖ್ಯಭೂಮಿಕೆಯಲ್ಲಿರುವ ‘ಮಠ’ ಚಿತ್ರದ ಮೂಲಕ ನಿರ್ದೇಶಕರಾಗಿ ಸ್ಯಾಂಡಲ್‌ವುಡ್ ಪ್ರವೇಶಿಸಿದ್ದರು ಗುರುಪ್ರಸಾದ್. ವಿಭಿನ್ನ ಕಥಾ ಹಂದರ ಹೊಂದಿರುವ ಈ ಚಿತ್ರ ಜನಪ್ರಿಯವಾಯಿತು. ಆ ಬಳಿಕ ಅವರು ಮಠ ಗುರುಪ್ರಸಾದ್ ಎಂದೇ ಜನಪ್ರಿಯಗೊಂಡಿದ್ದರು.

‘ನಾನು ನಿರ್ದೇಶಕನಲ್ಲ, ಹತಾಶ ಪ್ರೇಕ್ಷಕ’ ಎಂದು ಹೇಳಿಕೊಳ್ಳುತ್ತಲೇ ಸಿನಿಮಾ ನಿರ್ದೇಶನಕ್ಕಿಳಿದಿದ್ದ ಗುರುಪ್ರಸಾದ್ ಈವರೆಗೆ ಐದು ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ಇವರ ನಿರ್ದೇಶನದ ‘ಎದ್ದೇಳು ಮಂಜುನಾಥ’ ಸೂಪರ್ ಹಿಟ್ ಚಿತ್ರ. ಈ ಸಿನಿಮಾದ ಚಿತ್ರಕಥೆಗಾಗಿ ರಾಜ್ಯ ಪ್ರಶಸ್ತಿ ಕೂಡ ಗುರುಪ್ರಸಾದ್‌ಗೆ ಲಭಿಸಿತ್ತು.

2013ರಲ್ಲಿ ಇವರ ನಿರ್ದೇಶನದ ‘ಡೈರೆಕ್ಟರ್ ಸ್ಪೆಷಲ್’, 2017ರಲ್ಲಿ ‘ಎರಡನೇ ಸಲ’ ಚಿತ್ರಗಳು ತೆರೆ ಕಂಡವು. ‘ಎರಡನೇ ಸಲ’ ಚಿತ್ರಕ್ಕೆ ಪ್ರಶಂಸೆ ವ್ಯಕ್ತವಾದರೂ ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡಲಿಲ್ಲ.

2024ರಲ್ಲಿ ತೆರೆಕಂಡ ಇವರ ‘ರಂಗನಾಯಕ’ ಚಿತ್ರದ ಕಥೆಯ ಕುರಿತು ಅನೇಕರು ಬೇಸರ ವ್ಯಕ್ತಪಡಿಸಿದ್ದರು. ಕನ್ನಡ ಚಿತ್ರರಂಗದ ಇತಿಹಾಸ ಹೇಳುವ ವಿಚಿತ್ರ ಕಥೆ ಹೊಂದಿರುವ ಚಿತ್ರದಲ್ಲಿ ಜಗ್ಗೇಶ್ ನಾಯಕನಾಗಿದ್ದರು. ಬಾಕ್ಸ್ ಆಫೀಸ್‌ನಲ್ಲಿ ಹೀನಾಯ ಸೋಲನ್ನು ಅನುಭವಿಸಿತು. ‘ಎದ್ದೇಳು ಮಂಜುನಾಥ್–2’ ಸಿನಿಮಾವನ್ನು ಚಿತ್ರೀಕರಿಸುವ ಯತ್ನ ಮಾಡಿದ್ದರು. ಇದರಲ್ಲಿ ತಾವೇ ನಾಯಕನಾಗಿ ಅಭಿನಯಿಸಲು ಹೊರಟಿದ್ದರು.

ನಿರ್ದೇಶಕನಾಗಿ ಮಾತ್ರವಲ್ಲದೇ ನಟನಾಗಿಯೂ ಗುರುತಿಸಿಕೊಂಡಿದ್ದರು. ‘ಮೈಲಾರಿ’, ‘ಹುಡುಗರು’, ‘ಕುಷ್ಕ’, ‘ಮಠ’ ಮುಂತಾದ ಸಿನಿಮಾಗಳಲ್ಲಿ ನಟಿಸಿದ್ದರು. ರಿಯಾಲಿಟಿ ಶೋಗಳ ಸ್ಪರ್ಧಿಯಾಗಿ, ತೀರ್ಪುಗಾರನಾಗಿ ಕಾಣಿಸಿಕೊಂಡಿದ್ದರು.

ಕೊರೊನಾ ಸಂದರ್ಭದಲ್ಲಿ ಇವರು ಬದುಕಿನ ಹತಾಶೆ ಕುರಿತು ವಿಡಿಯೊ ಮಾಡಿ ಹಾಕಿದ್ದು ಚರ್ಚೆಗೆ ಗ್ರಾಸವಾಗಿತ್ತು. ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಎರಡು ಕೃತಿಗಳನ್ನು ರಚಿಸಿದ್ದಾರೆ. ಅರ್ಥಕ್ಕೆ ನಿಂತ ಇವರ ಸಿನಿಮಾಗಳು ಕೆಲವು ಇವೆ.

ಮೂರು ಮನೆ ಬದಲು

ಸಾಲಗಾರರ ಕಾಟಕ್ಕೆ ಬೇಸತ್ತು ಗುರುಪ್ರಸಾದ್ ವರ್ಷದಲ್ಲಿ ಮೂರು ಮನೆಯನ್ನು ಬದಲಾಯಿಸಿದ್ದರು. ಸಾಲದ ಹಣ ಮರುಪಾವತಿಸದ ಕಾರಣ ಅವರ ವಿರುದ್ಧ ಹಲವರು ಪೊಲೀಸರಿಗೂ ದೂರು ನೀಡಿದ್ದರು.

‘ಬಸವೇಶ್ವರನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಗುರುಪ್ರಸಾದ್, ನಂತರ ಜಯನಗರ ಕನಕನಪಾಳ್ಯದ ಅಶೋಕ ಪಿಲ್ಲರ್ ಬಳಿ ನೆಲಸಿದ್ದರು. ಕೆಲದಿನ ಒಬ್ಬಂಟಿಯಾಗಿ ಹೋಟೆಲ್‌ನಲ್ಲಿ ರೂಮ್ ಮಾಡಿಕೊಂಡಿದ್ದರು. ಕೆಲ ತಿಂಗಳುಗಳಿಂದ ಮಾದನಾಯಕನಹಳ್ಳಿ ಬಳಿಯ ನ್ಯೂ ಹೆವೆನ್ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದರು.

ಇದರ ಬಗ್ಗೆ ಯಾರಿಗೂ ತಿಳಿಸಿರಲಿಲ್ಲ. ಚೆಕ್ ಬೌನ್ಸ್ ಪ್ರಕರಣದಲ್ಲಿ ಗುರುಪ್ರಸಾದ್ ಕೋರ್ಟ್, ಕಚೇರಿ ಅಲೆಯುತ್ತಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಿರ್ದೇಶಕ ಗುರುಪ್ರಸಾದ್ ಮೃತದೇಹ ಪತ್ತೆ, ಆತ್ಮಹತ್ಯೆ ಶಂಕೆ

ಒಂದನೇ ಪುಟದಿಂದ...

ಪತ್ನಿ ಸುಮಿತ್ರಾ ಅವರ ಸಹೋದರ ಅಂತಿಮ ವಿದಿವಿಧಾನ ನೆರವೇರಿಸಿದರು. ಈ ಸಂದರ್ಭದಲ್ಲಿ ಚಿತ್ರರಂಗದ ಗಣ್ಯರು ಪಾಲ್ಗೊಂಡಿದ್ದರು.

‘ಸ್ಥಳೀಯರ ಪ್ರಕಾರ ಐದಾರು ದಿನಗಳ ಹಿಂದೆ ಗುರುಪ್ರಸಾದ್ ಅಪಾರ್ಟ್‌ಮೆಂಟ್‌ಗೆ ಬಂದಿದ್ದರು. ಆಗಿನಿಂದ ಅವರು ಹೊರಗೆ ಬಂದಿರಲಿಲ್ಲ. ಈ ನಡುವೆ ಅವರ ಮನೆಗೆ ಕುಟುಂಬದ ಸದಸ್ಯರು ಬಂದು ಹೋಗಿದ್ದರು. ಯಾವಾಗ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬುದು ಗೊತ್ತಿಲ್ಲ. ಆರ್ಥಿಕ ಸಂಕಷ್ಟದಲ್ಲಿದ್ದರು ಎಂಬುದು ಗೊತ್ತಾಗಿದೆ. ಹಣ ಕಾಸು ವಿಚಾರವಾಗಿ ಅವರು ಬೇಸರಗೊಂಡಿದ್ದರು. ಹಲವು ಆಯಾಮಗಳಿಂದ ತನಿಖೆ ನಡೆಯುತ್ತಿದೆ’ ಎಂದು ಗ್ರಾಮಾಂತರ ಎಸ್‌ಪಿ ಸಿ.ಕೆ.ಬಾಬಾ ತಿಳಿಸಿದ್ದಾರೆ.

ಗುರುಪ್ರಸಾದ್ ಅವರಿಗೆ ತಾಯಿ ಹಾಗೂ ಒಬ್ಬ ಸಹೋದರರಿದ್ದಾರೆ.

ದೂರು ದಾಖಲು: ಪುಸ್ತಕ ಹಾಗೂ ಸಿ.ಡಿಗಳನ್ನು ಖರೀದಿಸಿ ಹಣ ನೀಡದಿರುವ ಬಗ್ಗೆ ಗುರುಪ್ರಸಾದ್ ವಿರುದ್ಧ ಜಯನಗರದ ಟೋಟಲ್ ಕನ್ನಡ ಪುಸ್ತಕ ಮಳಿಗೆ ಮಾಲೀಕ ಲಕ್ಷ್ಮೀಕಾಂತ್ ಅವರು ಜಯನಗರ ಠಾಣೆಯಲ್ಲಿ ಇತ್ತೀಚೆಗೆ ದೂರು ದಾಖಲಿಸಿದ್ದರು.

‘2019ರಲ್ಲಿ ಟೋಟಲ್ ಕನ್ನಡ ಮಳಿಗೆಯಲ್ಲಿ ಕನ್ನಡ ಸಾಹಿತ್ಯ ಮತ್ತು ಸಿನಿಮಾ ಸಂಬಂಧಿತ ಪುಸ್ತಕಗಳನ್ನು ಖರೀದಿಸಿದ್ದರು. 75 ಪುಸ್ತಕಗಳ ಐದು ಸೆಟ್ ಖರೀದಿಸಿದ್ದರು. ಒಂದು ಸೆಟ್‌ಗೆ ₹13 ಸಾವಿರದಂತೆ ಐದು ಸೆಟ್ ಪುಸ್ತಕಗಳಿಗೆ ₹65 ಸಾವಿರ ನೀಡಬೇಕಿತ್ತು. ಹಣ ನೀಡದೆ ಸತಾಯಿಸುತ್ತಿದ್ದಾರೆ. ಕರೆ ಮಾಡಿದರೂ ಸ್ವೀಕರಿಸುತ್ತಿಲ್ಲ. ತಮ್ಮ ಮನೆಯ ವಿಳಾಸ ಬದಲಾಯಿಸಿದ್ದಾರೆ’ ಎಂದು ದೂರಿನಲ್ಲಿ ಹೇಳಲಾಗಿತ್ತು.

ಕೊನೆಯ ಸಂದೇಶ: ಗುರುಪ್ರಸಾದ್ ಅವರು ‘ಫ್ರೆಂಡ್ಸ್ ಫೋರಮ್’ ಎಂಬ ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಅ.26ರಂದು ಸಂದೇಶ ಕಳುಹಿಸಿದ್ದರು. ‘ಆರೋಗ್ಯದ ಸಮಸ್ಯೆಯಿಂದ ಬಳಲುತ್ತಿರುವ ಕಾರಣ ವಿಶ್ರಾಂತಿ ಪಡೆದುಕೊಳ್ಳುತ್ತಿದ್ದೇನೆ. ದೀಪಾವಳಿ ಹಬ್ಬದ ನಂತರ ಸಿನಿಮಾ ಚಟುವಟಿಕೆ ಮುಂದುವರಿಸೋಣ. ಅ.31ರಂದು ಮತ್ತೆ ಸಿನಿಮಾ ಕುರಿತು ಅಪ್‌ಡೇಟ್ ಕೊಡುವುದಾಗಿ ತಿಳಿಸಿದ್ದರು’ ಎಂದು ಸಂಬಂಧಿ ರವಿ ದೀಕ್ಷಿತ್ ಹೇಳಿದ್ದಾರೆ.

‘ಖಿನ್ನತೆಗೆ ಒಳಗಾಗಿದ್ದ ಪತಿ...’

ಒಂದನೇ ಪುಟದಿಂದ...

ಬಸವೇಶ್ವರನಗರದ ಮನೆ ಖಾಲಿ ಮಾಡಿಕೊಂಡು ಆರು ತಿಂಗಳಿನಿಂದ ನ್ಯೂ ಹೆವನ್ ಅಪಾರ್ಟ್‌ಮೆಂಟ್‌ನಲ್ಲಿ ಬಾಡಿಗೆಗೆ ವಾಸವಾಗಿದ್ದೆವು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಸಿನಿಮಾ ನಿರ್ಮಾಣಕ್ಕಾಗಿ ಪತಿ ಸಾಲ ಮಾಡಿಕೊಂಡಿದ್ದರು. ಸಾಲ ತೀರಿಸೋಣವೆಂದು ಧೈರ್ಯ ಹೇಳಿದ್ದೆ. ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನನಗೆ ಆರೋಗ್ಯ ಸರಿಯಿಲ್ಲದ ಕಾರಣ ನನ್ನನ್ನು ತಾಯಿಯ ಮನೆಗೆ ಕಳುಹಿಸಿದ್ದರು. ಲೋಕಸಭಾ ಚುನಾವಣಾ ವೇಳೆ ಕೊನೆ ಬಾರಿ ಇಬ್ಬರು ಭೇಟಿಯಾಗಿದ್ದೆವು. ಕೊನೆಯದಾಗಿ ಅಕ್ಟೋಬರ್ 25ರಂದು ಮೊಬೈಲ್‌ಗೆ ಕರೆ ಮಾಡಿದ್ದೆ. ಆದರೆ ಅವರು ಸ್ವೀಕರಿಸಿರಲಿಲ್ಲ. ಸಿನಿಮಾದಲ್ಲಿ ಬ್ಯುಸಿ ಇರಬೇಕೆಂದು ಸುಮ್ಮನಾಗಿದ್ದೆ’ ಎಂದು ತಿಳಿಸಿದ್ದಾರೆ.

ಮುಗ್ಧ ಮನಸ್ಸಿನ ಮಾಣಿಕ್ಯ...
ಸೋದರತೆಯ ಸಹೃದಯಿ, ಮಮತೆಯ
ಪ್ರತಿರೂಪ, ನಗು ಮುಖದ ಮನಸ್ಸಿನ ಆರಾಧಕ....
ಶಿಕಾರಿಪುರ ಕ್ಷೇತ್ರದ ಜನಪ್ರಿಯ ಶಾಸಕರು ಹಾಗೂ
ಬಿಜೆಪಿ ರಾಜ್ಯಾಧ್ಯಕ್ಷರಾದ
ಸನ್ಮಾನ್ಯ ಶ್ರೀ
ಬಿ.ವೈ. ವಿಜಯೇಂದ್ರ
ರವರಿಗೆ
Nov 5th
ಜನುಮದಿನದ ಶುಭಾಶಯಗಳು
ಶುಭ ಕೋರುವವರು
ಶ್ರೀ ಜಿ. ಮರಿಸ್ವಾಮಿ
ನಿಕಟಪೂರ್ವ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಬೆಂಗಳೂರು ನಗರ
ಶ್ರೀ ಎಂ. ರುದ್ರೇಶ್
ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷರು
ಶ್ರೀ ಅಭಿಲಾಷ್ ಮರಿಸ್ವಾಮಿ
ಯುವ ಮುಖಂಡರು

ಪ್ರಚಾರದ ಅಬ್ಬರ: ವಾಕ್ಸಮರ ತೀವ್ರ

‘ಗ್ಯಾರಂಟಿ ಕಣ್ಣೊರೆಸುವ ತಂತ್ರ’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ರಾಜ್ಯದ ಅಭಿವೃದ್ಧಿ ಕುಸಿದಿದೆ. ಗ್ಯಾರಂಟಿಗಳು ಕಣ್ಣೊರೆಸುವ ತಂತ್ರಗಳಂತಾಗಿವೆ. ಇಂಥ ಸರ್ಕಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಶಹಭಾಸ್‌ಗಿರಿ ಹೇಳಬೇಕಿತ್ತಂತೆ. ಮೋದಿ ಅವರ ಪಾದ ದೂಳಿಗೂ ಸಿದ್ದರಾಮಯ್ಯ ಸಮವಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದರು.

ಸಂಡೂರಿನಲ್ಲಿ ಭಾನುವಾರ ಯುವ ಸಮಾವೇಶದಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರೇ ಗ್ಯಾರಂಟಿಗಳ ಬಗ್ಗೆ ಛೀಮಾರಿ ಹಾಕಿದ್ದಾರೆ. ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಸರ್ಕಾರದ ಬಳಿ ದುಡ್ಡಿಲ್ಲ. ಸರ್ಕಾರ ನಡೆಸುವ ಈ ಚೆಂದಕ್ಕೆ ಮೋದಿ ಶಹಬ್ಬಾಸ್‌ಗಿರಿ ಕೊಡಬೇಕೆ?’ ಎಂದು ವಿಜಯೇಂದ್ರ ವಾಗ್ದಾಳಿ ನಡೆಸಿದರು.

‘ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಸಿ.ಎಂಗೆ ನೈತಿಕತೆಯೇ ಇಲ್ಲ. ಅವರ ಇಡೀ ಕುಟುಂಬ ಭ್ರಷ್ಟಾಚಾರದಲ್ಲಿ ಮುಳುಗಿದೆ. ಭ್ರಷ್ಟಾಚಾರದಲ್ಲಿ ಅವರೇ ಆರೋಪಿ ನಂಬರ್ ಒನ್’ ಎಂದು ಟೀಕಿಸಿದರು.

ಜಮೀರ್ ಅಯೋಗ್ಯ ಮಂತ್ರಿ: ‘ಅವನೊಬ್ಬ ಅಯೋಗ್ಯ ಮಂತ್ರಿ ಜಮೀರ್ ರಾಜ್ಯದ ತುಂಬಾ ಓಡಾಡುತ್ತಿದ್ದಾನೆ. ಜಮೀನುಗಳಿಗೆ ವಕ್ಫ್ ಎಂದು ಹೇಳಿ ರೈತರಿಗೆ ನೋಟಿಸ್ ಕೊಡಿಸುತ್ತಿರುವ ಆತ ಪುಡಾರಿ’ ಎಂದು ಏಕವಚನದಲ್ಲಿ ಟೀಕಿಸಿದರು.

‘ದೇವಸ್ಥಾನ, ಮಠ ಮಾನ್ಯಗಳಿಗೂ ನೋಟಿಸ್ ಕೊಡಲು ಹೇಳುತ್ತಿದ್ದಾನೆ. ಇಲ್ಲವಾದರೆ ಕ್ರಮ ಕೈಗೊಳ್ಳುತ್ತೇನೆ ಎಂದು ಅಧಿಕಾರಿಗಳಿಗೆ ಬೆದರಿಸುತ್ತಿದ್ದಾನೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯುವ ಸಮಾವೇಶದಲ್ಲಿ ಮಾಜಿ ಸಚಿವ ಬಿ. ಶ್ರೀರಾಮುಲು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ, ಶಾಸಕ ಅರವಿಂದ ಬೆಲ್ಲದ ಚರ್ಚೆ ನಡೆಸಿದ ಕ್ಷಣ

ಸಂತೋಷ್ ಲಾಡ್‌ಗೆ ಮತದಾರನ ಪ್ರಶ್ನೆ

‘ಬಿಜೆಪಿಯವರು ಐದು ವರ್ಷಗಳಿಗೊಮ್ಮೆ ಸಂಡೂರಿಗೆ ಬರುತ್ತಾರೆ. ಇದೇ ಗಣಿಗಳಲ್ಲಿ ಪಡೆದ ಹಣ ತಂದು ನಿಮಗೆ ಕೊಡುತ್ತಾರೆ’ ಎಂಬ ಸಚಿವ ಸಂತೋಷ್ ಲಾಡ್ ಮಾತಿಗೆ ಆಕ್ಷೇಪವೆತ್ತಿದ ವ್ಯಕ್ತಿಯೊಬ್ಬರು ‘ನೀವು ಬರುವುದೂ ಐದು ವರ್ಷಕ್ಕೊಮ್ಮೆಯೇ’ ಎಂದು ತರಾಟೆಗೆ ತೆಗೆದುಕೊಂಡರು.

ಸಂಡೂರು ಪಟ್ಟಣದಲ್ಲಿ ಭಾನುವಾರ ನಡೆದ ಪ್ರಚಾರದ ವೇಳೆ ಈ ಘಟನೆ ನಡೆಯಿತು. ವ್ಯಕ್ತಿಯ ಪ್ರಶ್ನೆಗೆ ಆಕ್ರೋಶಗೊಂಡ ಸಂತೋಷ್ ಲಾಡ್, ‘ಕುಡಿದಿದ್ದೀಯಾ...ನೀನು ಬರುವುದೂ ಐದು ವರ್ಷಕ್ಕೊಮ್ಮೆ ಮಾತ್ರ’ ಎಂದರು. ಅಷ್ಟರೊಳಗೆ ಪೊಲೀಸರು ವ್ಯಕ್ತಿಯನ್ನು ಸ್ಥಳದಿಂದ ಕರೆದೊಯ್ದರು.

‘ಕೈ’ ರಣತಂತ್ರ, ‘ಕಮಲ’ ಸಮಾವೇಶ: ಉಪ ಚುನಾವಣೆಯಲ್ಲಿ ಮುಂದಿನ ಕಾರ್ಯತಂತ್ರವನ್ನು ಚರ್ಚಿಸಲು ಕಾಂಗ್ರೆಸ್ ಭಾನುವಾರ ತನ್ನ ಕ್ಯಾಂಪ್ ಕಚೇರಿಯಲ್ಲಿ ಮುಖಂಡರ ಸಭೆ ನಡೆಸಿತು.

ಸೋಮವಾರದಿಂದ ಯಾವೆಲ್ಲ ನಾಯಕರು ಬರುತ್ತಾರೆ, ಅವರಿಗೆ ಏನು ವ್ಯವಸ್ಥೆ ಆಗಬೇಕು, ಯಾರನ್ನು ಎಲ್ಲಿಗೆ ನಿಯೋಜಿಸಬೇಕು, ಯಾವ ಜವಾಬ್ದಾರಿ ನೀಡಬೇಕು ಎಂಬುದರ ಬಗ್ಗೆ ಕಾಂಗ್ರೆಸ್ ಗಹನ ಚರ್ಚೆ ನಡೆಸಿದೆ. ಇದರ ಮಧ್ಯೆಯೂ ಸಚಿವ ಸಂತೋಷ್ ಲಾಡ್ ಮತ್ತು ಅಭ್ಯರ್ಥಿ ಅನ್ನಪೂರ್ಣ ಪ್ರಚಾರ ಕೈಗೊಂಡರು. ಬಿಜೆಪಿಯು ಚೋರನೂರಿನಲ್ಲಿ ಯುವ ಸಮಾವೇಶ, ಪಟ್ಟಣದಲ್ಲಿ ‘ಪ್ರಬುದ್ಧ’ ಸಮಾವೇಶ ನಡೆಸಿತು. ಅಭ್ಯರ್ಥಿ ಬಂಗಾರು ಹನುಮಂತು ಅವರು ಜನಾರ್ದನ ರೆಡ್ಡಿ ಜತೆ ಪ್ರಚಾರ, ರೋಡ್‌ಶೋಗಳಲ್ಲಿ ಪಾಲ್ಗೊಂಡರು.

> **ಶ್ರೀರಾಮುಲು, ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ ಸಚಿವರಾಗಿ ಸಂಡೂರಿಗೆ ಅವರ ಕೊಡುಗೆ ಏನು? ಈಗ ಬಂದು ನಮ್ಮನ್ನು ಬೈಯುತ್ತಿದ್ದಾರೆ**
> **ಸಂತೋಷ್ ಲಾಡ್**, ಸಚಿವ

‘ಗ್ಯಾರಂಟಿಗಳು ಜನಮನ ಗೆದ್ದಿವೆ’

ಶಿಗ್ಗಾವಿ (ಹಾವೇರಿ ಜಿಲ್ಲೆ): ಶಿಗ್ಗಾವಿ ವಿಧಾನಸಭಾ ಕ್ಷೇತ್ರವನ್ನು ತೆಕ್ಕೆಗೆ ತೆಗೆದುಕೊಳ್ಳಲು ಕಸರತ್ತು ನಡೆಸುತ್ತಿರುವ ಕಾಂಗ್ರೆಸ್ ಮುಖಂಡರು, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಯಗಳನ್ನು ಮುಂದಿಟ್ಟುಕೊಂಡು ಮತಯಾಚನೆ ಮಾಡುತ್ತಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹ್ಮದ್ ಖಾನ್ ಪಠಾಣ ಪರ ಪ್ರಚಾರ ನಡೆಸುತ್ತಿರುವ ಮುಖಂಡರು, ‘ಜನಪರವಾದ ಐದು ಗ್ಯಾರಂಟಿ ಯೋಜನೆ ನೋಡಿ ಕಾಂಗ್ರೆಸ್‌ಗೆ ಮತ ನೀಡಿ’ ಎಂದು ಕೋರುತ್ತಿದ್ದಾರೆ.

ಶಿಗ್ಗಾವಿ ಕ್ಷೇತ್ರದ ಚಾಕಾಪುರದಲ್ಲಿ ಭಾನುವಾರ ಪ್ರಚಾರ ನಡೆಸಿದ ಸಚಿವ ಸತೀಶ ಜಾರಕಿಹೊಳಿ, ‘ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ, ಜನರ ಪರವಿದೆ. ಐದು ಗ್ಯಾರಂಟಿ ಯೋಜನೆಗಳು ಜನರ ಮನ ಗೆದ್ದಿವೆ. ಇಂಥ ಯೋಜನೆ ನೀಡಿರುವ ‘ಕೈ’ಗೆ ಈ ಬಾರಿ ಆಶೀರ್ವಾದ ಮಾಡಿ’ ಎಂದರು. ಧಾರವಾಡ ಗ್ರಾಮೀಣ ಕ್ಷೇತ್ರದ ಶಾಸಕ ವಿನಯ ಕುಲಕರ್ಣಿ, ‘ಐದು ಗ್ಯಾರಂಟಿ ಯೋಜನೆಗಳು ಎಲ್ಲ ಧರ್ಮ ಹಾಗೂ ಜಾತಿಯವರಿಗೂ ತಲುಪಿವೆ. ಸರ್ವ ಜನಾಂಗದ ಏಳಿಗೆಗಾಗಿ ಐದು ಗ್ಯಾರಂಟಿ ಜಾರಿಗೊಳಿಸಲಾಗಿದೆ. ಬಿಜೆಪಿಯವರು ಸಹ ಗ್ಯಾರಂಟಿ ಯೋಜನೆ ಲಾಭ ಪಡೆಯುತ್ತಿದ್ದಾರೆ. ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ’ ಎಂದು ಹೇಳಿದರು.

ಯಾಸೀರ ಅಹ್ಮದ್ ಖಾನ್ ಪಠಾಣ, ‘ಇಲ್ಲಿ ಹೆಸರಿಗಷ್ಟೇ ನಾನು ಅಭ್ಯರ್ಥಿ. ನೈಜ ಅಭ್ಯರ್ಥಿ ಸಿದ್ದರಾಮಯ್ಯ. ಅವರ ಗ್ಯಾರಂಟಿ ಯೋಜನೆಗಳನ್ನು ನೋಡಿ ಮತ ಹಾಕಿ ಕಾಂಗ್ರೆಸ್ ಗೆಲ್ಲಿಸಿ’ ಎಂದು ಕೋರಿದರು.

ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ್ ಖಾನ್ ಪಠಾಣ ಪರ ಸಚಿವ ಸತೀಶ ಜಾರಕಿಹೊಳಿ ಭಾನುವಾರ ಪ್ರಚಾರ ನಡೆಸಿದರು

‘ಅಪ್ಪ ಮಾಡಿಸಿದ್ದ ರಸ್ತೆಯಲ್ಲೇ ಕಾಂಗ್ರೆಸ್‌ನವರ ಪ್ರಚಾರ’

ಶಿಗ್ಗಾವಿ (ಹಾವೇರಿ ಜಿಲ್ಲೆ): ಶಿಗ್ಗಾವಿ ಕ್ಷೇತ್ರದ ಉಪಚುನಾವಣೆ ಕಾವು ದೀಪಾವಳಿ ಹಬ್ಬದ ನಂತರ ಮತ್ತಷ್ಟು ತೀವ್ರಗೊಂಡಿದೆ. ಅಭ್ಯರ್ಥಿಗಳು ಗ್ರಾಮದಿಂದ ಗ್ರಾಮಕ್ಕೆ ಸುತ್ತಾಡಿ ಭರ್ಜರಿ ಪ್ರಚಾರ ಮಾಡುತ್ತಿದ್ದಾರೆ.

ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ, ಕ್ಷೇತ್ರದ ತವರುಮೆಳ್ಳಳ್ಳಿ, ಕುಣಿಮೆಳ್ಳಳ್ಳಿ, ಹಳೇ ಹಲಸೂರು, ಹೊಸ ಹಲಸೂರುನಲ್ಲಿ ಪ್ರಚಾರ ನಡೆಸಿದರು.

ಪ್ರಚಾರದ ವೇಳೆ ಮಾತನಾಡಿದ ಭರತ್, ‘ನಮ್ಮ ಅಪ್ಪ ಬಸವರಾಜ ಬೊಮ್ಮಾಯಿ ಅವರು ಕ್ಷೇತ್ರದಲ್ಲಿ ಬಹಳ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಅವರು ಮಾಡಿಸಿದ್ದ ಉತ್ತಮ ಗುಣಮಟ್ಟದ ಸಿ.ಸಿ. ರಸ್ತೆಯಲ್ಲಿಯೇ ಈಗ ಕಾಂಗ್ರೆಸ್‌ನವರು ಸಹ ಪ್ರಚಾರಕ್ಕಾಗಿ ಓಡಾಡುತ್ತಿದ್ದಾರೆ’ ಎಂದು ಭರತ್ ಬೊಮ್ಮಾಯಿ ಹೇಳಿದರು.

‘ತಂದೆ ಮಾಡಿರುವ ಅಭಿವೃದ್ಧಿ ಕೆಲಸಗಳು ಕಣ್ಮುಂದಿವೆ. ನಾಲ್ಕು ಅವಧಿಯಲ್ಲಿ ನಡೆದಿರುವ ಕೆಲಸಗಳನ್ನು ಜನರು ನೆನಪಿನಲ್ಲಿಟ್ಟುಕೊಂಡಿದ್ದಾರೆ. ಮತದಾರರು, ಮತಗಳ ಮೂಲಕ ಬಿಜೆಪಿಗೆ ಆಶೀರ್ವಾದ ಮಾಡಲಿದ್ದಾರೆ. ಪ್ರಚಾರಕ್ಕೆ ಹೋದ ಕಡೆಯಲ್ಲೆಲ್ಲ ಉತ್ತಮ ಸ್ಪಂದನೆ ಸಿಗುತ್ತಿದೆ’ ಎಂದರು.

ಚುನಾವಣೆಯನ್ನು ಕ್ರಿಕೆಟ್‌ಗೆ ಹೋಲಿಸಿ ಮಾತನಾಡಿದ ಭರತ್, ‘ನಾವು ಟಿ–20 ಹಾಗೂ ಏಕದಿನ ಪಂದ್ಯ ಆಡುವುದಿಲ್ಲ. ಟೆಸ್ಟ್ ಪಂದ್ಯ ಆಡುತ್ತೇವೆ. ನಮ್ಮದೇನಿದ್ದರೂ ಲಾಂಗ್ ಇನ್ನಿಂಗ್ಸ್. ನಾನು ಬ್ಯಾಟ್ಸ್‌ಮನ್. ಶತಕ ಹೊಡೆದೇ ಹೊಡೆಯುತ್ತೇನೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಸಂಡೂರು: ದಾಖಲೆ ಇಲ್ಲದ ₹27.50 ಲಕ್ಷ ಜಪ್ತಿ

ಬಳ್ಳಾರಿ: ದಾಖಲೆ ಇಲ್ಲದೇ ಸಾಗಿಸಲಾಗುತ್ತಿದ್ದ ₹27.50 ಲಕ್ಷವನ್ನು ಚುನಾವಣಾ ಅಧಿಕಾರಿಗಳು ಭಾನುವಾರ ವಶಕ್ಕೆ ಪಡೆದಿದ್ದು, ಆದಾಯ ತೆರಿಗೆ ಇಲಾಖೆಗೆ ಹಸ್ತಾಂತರಿಸಿದ್ದಾರೆ.

‘ಹರಪನಹಳ್ಳಿ ಕಡೆಯಿಂದ ಬರುತ್ತಿದ್ದ ಕಾರೊಂದನ್ನು ಕರ್ನಾಟಕ–ಆಂಧ್ರ ಪ್ರದೇಶದ ಗಡಿಯಲ್ಲಿ ಬರುವ ಜಿ.ಬಸಾಪುರ ಚೆಕ್ ಪೋಸ್ಟ್‌ನಲ್ಲಿ ಬೆಳಗ್ಗೆ 11.30ರ ಸುಮಾರಿಗೆ ತಡೆಯಲಾಗಿತ್ತು. ಕಾರಿನಲ್ಲಿ ನಾಲ್ವರು ಇದ್ದರು. ಅವರ ಬಳಿ ಹಣ ಪತ್ತೆಯಾಗಿದೆ’ ಎಂದು ಕ್ಷೇತ್ರ ಚುನಾವಣಾಧಿಕಾರಿ ರಾಜೇಶ್ ಎಚ್.ಡಿ ತಿಳಿಸಿದರು.

‘₹10 ಲಕ್ಷದ ವರೆಗಿನ ಹಣವನ್ನು ಮಾತ್ರ ನಾವು ಜಪ್ತಿ ಮಾಡಲು ಅವಕಾಶವಿರುತ್ತದೆ. ಅದಕ್ಕೂ ಹೆಚ್ಚಿನ ಹಣವನ್ನು ಆದಾಯ ತೆರಿಗೆ ಇಲಾಖೆಯೇ ಜಪ್ತಿ ಮಾಡಬೇಕು. ಹೀಗಾಗಿ ಪ್ರಕರಣ ಅವರಿಗೆ ನೀಡಿದ್ದೇವೆ’ ಎಂದು ರಾಜೇಶ್ ಹೇಳಿದರು.

ಶಿಗ್ಗಾವಿ: ‘ಕೈ’ ನಾಯಕರ ಸಭೆ

ಹುಬ್ಬಳ್ಳಿ: ಶಿಗ್ಗಾವಿ ಉಪ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಲು ಕೈಗೊಳ್ಳಬೇಕಾದ ಯೋಜನೆಗಳ ಕುರಿತು ಚರ್ಚಿಸಲು ಹುಬ್ಬಳ್ಳಿಯ ಖಾಸಗಿ ಹೋಟೆಲ್‌ನಲ್ಲಿ ಸಚಿವ ಈಶ್ವರ ಖಂಡ್ರೆ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರ ಸಭೆ ಭಾನುವಾರ ನಡೆಯಿತು.

ಉಪ ಚುನಾವಣೆ ಉಸ್ತುವಾರಿ, ಎಐಸಿಸಿ ಕಾರ್ಯದರ್ಶಿ ಮಯೂರ ಜಯಕುಮಾರ, ಸಚಿವರಾದ ಸತೀಶ ಜಾರಕಿಹೊಳಿ, ಎಚ್.ಕೆ.ಪಾಟೀಲ, ಶಿವಾನಂದ ಪಾಟೀಲ, ಕೆಪಿಸಿಸಿ ಕಾರ್ಯದರ್ಶಿ ಸಲೀಂ ಅಹ್ಮದ್ ಹಾಗೂ ಹತ್ತಕ್ಕೂ ಹೆಚ್ಚು ಶಾಸಕರು ಸಭೆಯಲ್ಲಿ ಭಾಗಿಯಾಗಿದ್ದರು.

‘ಶಿಗ್ಗಾವಿ ಉಪಚುನಾವಣೆ ಹಿನ್ನೆಲೆ ಮೂರು ಪುರಸಭೆ, ಆರು ಜಿಲ್ಲಾ ಪಂಚಾಯಿತಿ, 23 ತಾಲ್ಲೂಕು ಪಂಚಾಯಿತಿ ಕಾಂಗ್ರೆಸ್ ಮುಖಂಡರ ಸಭೆ ನಡೆಸಲಾಗಿದೆ. ಚುನಾವಣೆ ಉಸ್ತುವಾರಿಯಾಗಿ ಆರು ಜಿಲ್ಲಾ ಪಂಚಾಯಿತಿಗಳಿಗೆ ಹಾಗೂ ಮೂರು ಪುರಸಭೆಗಳಿಗೆ ಸಚಿವರನ್ನು ನೇಮಿಸಲಾಗಿದೆ’ ಎಂದು ಸಚಿವ ಈಶ್ವರ ಖಂಡ್ರೆ ಅವರು ಬಳಿಕ ಸುದ್ದಿಗಾರರಿಗೆ ತಿಳಿಸಿದರು.

‘ಈ ಚುನಾವಣೆಯು ಅಭಿವೃದ್ಧಿ ಮತ್ತು ಅಭಿವೃದ್ಧಿ ಶೂನ್ಯದ ನಡುವೆ ನಡೆಯುತ್ತಿದೆ. ಬಿಜೆಪಿ ಸೋಲಿಸಬೇಕು, ಕಾಂಗ್ರೆಸ್ ಗೆಲ್ಲಲೇಬೇಕು ಎಂಬ ಸಂಕಲ್ಪದಿಂದ ಒಗ್ಗಟ್ಟಾಗಿದ್ದೇವೆ’ ಎಂದರು.

ಸಿ.ಎಂ, ಡಿಸಿಎಂ ಪ್ರಚಾರ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಚುನಾವಣೆ ನಡೆಯಲಿರುವ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರದಿಂದ ಪ್ರಚಾರ ನಡೆಸಲಿದ್ದಾರೆ.

ಮುಖ್ಯಮಂತ್ರಿ ಅವರು ಸೋಮವಾರ (ನ.4) ಮತ್ತು ಮಂಗಳವಾರ (ನ. 5) ಶಿಗ್ಗಾವಿ ಕ್ಷೇತ್ರದಲ್ಲಿ ಪ್ರಚಾರ ನಡೆಸಲಿದ್ದಾರೆ. ಸೋಮವಾರ ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನಿಂದ ಹೊರಟು ಹುಬ್ಬಳ್ಳಿ ಮೂಲಕ 10.50ಕ್ಕೆ ಶಿಗ್ಗಾವಿ ತಲುಪಲಿರುವ ಮುಖ್ಯಮಂತ್ರಿ, ಹುಲಗೂರಿನಲ್ಲಿ ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಹುರಳಿಕುಪ್ಪಿ ಗ್ರಾಮ, ಸಂಜೆ 6 ಗಂಟೆಗೆ ಬಂಕಾಪುರ ಪಟ್ಟಣದಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

ರಾತ್ರಿ ಹುಬ್ಬಳ್ಳಿಯಲ್ಲಿ ವಾಸ್ತವ್ಯ ಹೂಡಲಿರುವ ಮುಖ್ಯಮಂತ್ರಿ, ಮಂಗಳವಾರ ಬೆಳಿಗ್ಗೆ 10.45ಕ್ಕೆ ಶಿಗ್ಗಾವಿ ಕ್ಷೇತ್ರದ ಚಂದಾಪುರದಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಹಿರೇಬೆಂಡಿಗೇರಿ, ಸಂಜೆ 6ಕ್ಕೆ ಚಿಲ್ಲೂರಬಡ್ನಿಯಲ್ಲಿ ಪ್ರಚಾರ ನಡೆಸಲಿದ್ದು, ಬಳಿಕ ಹುಬ್ಬಳಿಯಿಂದ ವಿಮಾನ ಮೂಲಕ ಬೆಂಗಳೂರಿಗೆ ವಾಪಸಾಗಲಿದ್ದಾರೆ.

ಚನ್ನಪಟ್ಟಣದಲ್ಲಿ ಡಿಕೆಶಿ ಪ್ರಚಾರ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರ ದಿನವಿಡೀ ಚನ್ನಪಟ್ಟಣ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಪರ ಮತ ಯಾಚನೆ ಮಾಡಲಿದ್ದಾರೆ. ಹೊಂಗನೂರು, ಬಳಿಕ ವಿರೂಪಾಕ್ಷಿಪುರ, ಕೋಡಂಬಳ್ಳಿ, ಅಕ್ಕೂರು, ಚನ್ನಪಟ್ಟಣ ಟೌನ್ ಮತ್ತು ಮಂಗಳವಾರ ಪೇಟೆ, ಕೋಟೆ ಮತ್ತು ಚನ್ನಪಟ್ಟಣ ಟೌನ್‌ಗಳಲ್ಲಿ ಅವರು ಪ್ರಚಾರ ಸಭೆಗಳಲ್ಲಿ ಭಾಗವಹಿಸಲಿದ್ದಾರೆ.

ನೀಲೇಶ್ವರ ಪಟಾಕಿ ಸ್ಫೋಟ: ಸಾವು

ನೀಲೇಶ್ವರ (ಕಾಸರಗೋಡು): ಇಲ್ಲಿನ ಅಂಞುಟ್ಟಂಬಲಂ ವೀರರ್‌ಕಾವ್ ದೈವಸ್ಥಾನದಲ್ಲಿ ಕಳೆದ ಸೋಮವಾರ ರಾತ್ರಿ ಸಂಭವಿಸಿದ ಪಟಾಕಿ ಸ್ಫೋಟದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಶನಿವಾರ ಮೃತಪಟ್ಟಿದ್ದಾರೆ.

ಸಂದೀಪ್

ಚೊಯ್ಯಂಕೋಟ ಕಿಣಾವೂರ್ ನಿವಾಸಿ ಕುಂಞಿರಾಮ ಮತ್ತು ಎಂ.ಕೆ. ಸಾವಿತ್ರಿ ಅವರ ಪುತ್ರ, ಆಟೊ ಚಾಲಕ ಸಿ. ಸಂದೀಪ್ (38) ಸಾವಿಗೀಡಾದವರು.

ಗಾಯಗೊಂಡ 158 ಮಂದಿಯನ್ನು ಮಂಗಳೂರಿನ ಮೂರು ಆಸ್ಪತ್ರೆ ಮತ್ತು ಕಣ್ಣೂರಿನ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತು. ದೇಹದ ಶೇಕಡಾ 50 ಭಾಗ ಸುಟ್ಟಿದ್ದ ಸಂದೀಪ್ ಅವರಿಗೆ ಕಣ್ಣೂರಿನ ಬೇಬಿ ಸ್ಮಾರಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು.

ಪಟಾಕಿ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲಾದ ದೈವಸ್ಥಾನದ ಅಧ್ಯಕ್ಷ ಸೇರಿ ಮೂವರಿಗೆ ಸ್ಥಳೀಯ ನ್ಯಾಯಾಲಯ ಜಾಮೀನು ಲಭಿಸಿತ್ತು. ಅದನ್ನು ಜಿಲ್ಲಾ ನ್ಯಾಯಾಲಯ ರದ್ದುಪಡಿಸಿದೆ. ನಾಲ್ವರು ತಲೆಮರೆಸಿಕೊಂಡಿದ್ದಾರೆ.

6ನೇ ಗ್ಯಾರಂಟಿಯಾಗಿ ಏತ ನೀರಾವರಿ ಯೋಜನೆ ಜಾರಿ ಆಗಲಿ: ಸಿರಿಗೆರೆ ಶ್ರೀ

ಪ್ರಜಾವಾಣಿ ವಾರ್ತೆ

ಅರಸೀಕೆರೆ (ವಿಜಯನಗರ): ‘ರಾಜ್ಯ ಸರ್ಕಾರ ಆರನೇ ಗ್ಯಾರಂಟಿಯಾಗಿ ಶಾಶ್ವತ ನೀರಾವರಿ ಯೋಜನೆ ಜಾರಿಗೊಳಿಸಲು ಮುಂದಾಗಬೇಕು’ ಎಂದು ಸಿರಿಗೆರೆ ತರಳಬಾಳು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಹೋಬಳಿ ವ್ಯಾಪ್ತಿಯಲ್ಲಿ ಶನಿವಾರ ಜಗಳೂರು ಏತ ನೀರಾವರಿ ಯೋಜನೆಯಡಿ ಭರ್ತಿಯಾದ ಚಟ್ನಿಹಳ್ಳಿ ಕೆರೆಗೆ ಬಾಗಿನ ಅರ್ಪಿಸಿ ಮಾತನಾಡಿದ ಅವರು,‘ಸರ್ಕಾರ ಈಗಾಗಲೇ ಕೈಗೊಂಡಿರುವ ಪಂಚ ಯೋಜನೆಗಳ ಜೊತೆಗೆ ಆರನೇ ಗ್ಯಾರಂಟಿಯಾಗಿ ಪ್ರತಿ ವರ್ಷದ ಬಜೆಟ್ ನಲ್ಲಿ ₹50-60 ಸಾವಿರ ಕೋಟಿಯನ್ನು ನೀರಾವರಿ ಯೋಜನೆಗೆ ಮೀಸಲಿಡಲಿ’ ಎಂದು ಸಲಹೆ ನೀಡಿದರು.

‘₹1,500 ಕೋಟಿ ರೂಪಾಯಿ ವೆಚ್ಚದ ಯೋಜನೆಯಿಂದ ಬರಪೀಡಿತ ತಾಲ್ಲೂಕು ಹಣೆಪಟ್ಟಿಯಿಂದ ಜಗಳೂರು ಹೊರ ಉಳಿಯಲಿದೆ ಎಂದಾದರೆ, ಐದು ವರ್ಷದ ಬಜೆಟ್ ಅವಧಿಯಲ್ಲಿ ನೀರಾವರಿ ಯೋಜನೆಗೆ ಮೀಸಲಿಡುವ ದೊಡ್ಡ ಮೊತ್ತದಿಂದ ರಾಜ್ಯದಲ್ಲಿ ಏತ ನೀರಾವರಿ ಯೋಜನೆ ಜಾರಿಗೊಳಿಸಿದರೆ ಇಡೀ ಕರ್ನಾಟಕ ಜಲಮಯ ಆಗಲಿದೆ’ ಎಂದು ಹೇಳಿದರು.

‘ಕೈ’ ಅಭ್ಯರ್ಥಿ ತವರೂರಲ್ಲಿ ರಂಗೇರಿದ ಪ್ರಚಾರ

ಚನ್ನಪಟ್ಟಣ: ಅಭ್ಯರ್ಥಿ ಪರ ಕಾಂಗ್ರೆಸ್– ಜೆಡಿಎಸ್ ಪಕ್ಷದ ಸಚಿವರು, ನಾಯಕರ ಮತಯಾಚನೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಅವರ ಸ್ವಗ್ರಾಮ ಚಕ್ಕೆರೆಯಲ್ಲಿ ಭಾನುವಾರ ಉಪಚುನಾವಣೆಯ ಪ್ರಚಾರ ರಂಗೇರಿತ್ತು.

ಗ್ರಾಮಕ್ಕೆ ಒಂದೇ ದಿನ ದೌಡಾಯಿಸಿದ ಜೆಡಿಎಸ್ ಮತ್ತು ಕಾಂಗ್ರೆಸ್ ನಾಯಕರು ಗ್ರಾಮದಲ್ಲಿ ಮತಬೇಟೆ ನಡೆಸಿದರು. ಬೀದಿಗಳಲ್ಲಿ ರೋಡ್ ಶೋ ನಡೆಸಿ ಶಕ್ತಿ ಪ್ರದರ್ಶಿಸಿದರು.

ನಿಖಿಲ್ ಕುಮಾರಸ್ವಾಮಿ ಪರ ಬೆಳಿಗ್ಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮತಯಾಚಿಸಿದರು. ಅವರಿಗೆ ಬಿಜೆಪಿಯ ಆರ್.ಅಶೋಕ, ಸಂಸದ ಡಾ.ಸಿ.ಎನ್.ಮಂಜುನಾಥ್, ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಪರಿಷತ್ ಸದಸ್ಯ ಸಿ.ಟಿ.ರವಿ ಸಾಥ್ ನೀಡಿದರು.

ಮತ್ತೊಂದು ಭಾಗದಲ್ಲಿ ಪ್ರಚಾರ ನಡೆಸುತ್ತಿದ್ದ ನಿಖಿಲ್‌ಗೆ ಕೇಂದ್ರ ಸಚಿವ ವಿ.ಸೋಮಣ್ಣ, ಶಾಸಕ ವಿಶ್ವನಾಥ್, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ನೆ.ಲ.ನರೇಂದ್ರಬಾಬು, ಡಾ.ಅನ್ನದಾನಿ ಸೇರಿದಂತೆ ಸ್ಥಳೀಯ ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ಜೊತೆಯಾದರು.

ಸಿಪಿವೈ ದೌಡು: ತಮ್ಮ ಗ್ರಾಮದಲ್ಲಿ ಕುಮಾರಸ್ವಾಮಿ ಪ್ರಚಾರ ನಡೆಸಿ ಹೋದ ಬೆನ್ನಲ್ಲೇ ಪಕ್ಷದ ನಾಯಕರೊಂದಿಗೆ ಮಧ್ಯಾಹ್ನ ಗ್ರಾಮಕ್ಕೆ ಬಂದ ಯೋಗೇಶ್ವರ್ ಮತಯಾಚಿಸಿ ಶಕ್ತಿ ಪ್ರದರ್ಶಿಸಿದರು.

ಸಚಿವ ವೆಂಕಟೇಶ್, ಶಾಸಕ ಎಚ್.ಸಿ.ಬಾಲಕೃಷ್ಣ, ಮಾಜಿ ಸಂಸದರಾದ ಡಿ.ಕೆ.ಸುರೇಶ್, ಶಿವರಾಮೇಗೌಡ ಸೇರಿದಂತೆ ಹಲವರು ಸಿಪಿವೈ ಜತೆಗಿದ್ದರು. ಮತ್ತೊಂದೆಡೆ ಸಚಿವ ದಿನೇಶ್ ಗುಂಡೂರಾವ್, ಕಾಂಗ್ರೆಸ್ ಶಾಸಕರು ಹಾಗೂ ಸ್ಥಳೀಯ ಮುಖಂಡರು ಪ್ರಚಾರ ನಡೆಸಿದರು.

ಚಕ್ಕೆರೆಯಲ್ಲಿ ಭಾನುವಾರ ಪುತ್ರ ನಿಖಿಲ್ ಕುಮಾರಸ್ವಾಮಿ ಪರ ಪ್ರಚಾರ ನಡೆಸಿದ ಕೇಂದ್ರ ಸಚಿವ ಎಚ್‌ಡಿ. ಕುಮಾರಸ್ವಾಮಿ ಅವರಿಗೆ, ಬಿಜೆಪಿಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಶಾಸಕ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಕಮಲದ ಹೂಗಳನ್ನು ನೀಡಿದರು. ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಇದ್ದರು

> **ಪ್ರಧಾನಿ ಮೋದಿ ಅವರನ್ನು ರಾಜಕೀಯ ಪುಡಾರಿ ಎಂದು ಮುಖ್ಯಮಂತ್ರಿ ಕರೆದಿದ್ದಾರೆ. ಅವರನ್ನು ಪುಡಾರಿ ಎನ್ನುವುದಾದರೆ, ಸಿ.ಎಂ ಕೂಡಾ ಅದೇ ರೀತಿ ಮಾತನಾಡುತ್ತಿದ್ದಾರಲ್ಲವೇ?**
> **ಎಚ್.ಡಿ. ಕುಮಾರಸ್ವಾಮಿ** ಕೇಂದ್ರ ಸಚಿವ

> **ನನ್ನ ಬಗ್ಗೆ ಯಾರೆಷ್ಟೇ ಕೀಳಾಗಿ ಮಾತನಾಡಿದರೂ ಪ್ರತಿಕ್ರಿಯಿಸಲಾರೆ. ಅದು ಅವರ ಸಂಸ್ಕೃತಿ ತೋರಿಸುತ್ತದೆ. ನನ್ನ ಗೆಲುವೇ ಅವರಿಗೆ ಉತ್ತರ**
> **ನಿಖಿಲ್ ಕುಮಾರಸ್ವಾಮಿ**
> ಜೆಡಿಎಸ್ ಅಭ್ಯರ್ಥಿ

‘ಹೋದಲ್ಲೆಲ್ಲಾ ಕರ್ಮಭೂಮಿ ಅಂತಾರೆ’

‘ಅಲೋ ಗಂಡಸನ್ನು ನಂಬಬಾರದು ಅನ್ನೋ ಗಾದೆ ಇದೆ. ಅವರು ಎಲ್ಲ ಕಡೆ ಓಡಾಡ್ತಾರೆ. ಮಂಡ್ಯ, ಹಾಸನ, ರಾಮನಗರಕ್ಕೆ ಓಡಾಡುತ್ತಾ ಇದೇ ನನ್ನ ಕರ್ಮಭೂಮಿ ಅನ್ನುತ್ತಾರೆ. ಈಗ ಚನ್ನಪಟ್ಟಣ ಸಹ ನನ್ನ ಕರ್ಮಭೂಮಿ’ ಎಂದು ಸಿ.ಪಿ.ಯೋಗೇಶ್ವರ್ ಅವರು ಎಚ್‌ಡಿಕೆ ವಿರುದ್ಧ ಟೀಕಿಸಿದರು.

‘ಇಷ್ಟಕ್ಕೂ ಅವರು ಈ ತಾಲ್ಲೂಕಿಗೆ ಏಕೆ ಬಂದರು? ಮಾಡಿದ ಅಭಿವೃದ್ಧಿ ಕೆಲಸಗಳೇನು? ಸ್ವಾರ್ಥ ರಾಜಕಾರಣ ಮಾಡಿ ಈಗ ಮಗನನ್ನು ನಿಲ್ಲಿಸಿದ್ದಾರೆ’ ಎಂದು ಹರಿಹಾಯ್ದರು.

‘ಹುಟ್ಟೂರನ್ನೇ ಅಭಿವೃದ್ಧಿ ಮಾಡಿಲ್ಲ’: ‘ಹುಟ್ಟೂರು ಚಕ್ಕೆರೆಯನ್ನೇ ಅಭಿವೃದ್ಧಿ ಮಾಡದವರು, ಇಡೀ ಕ್ಷೇತ್ರವನ್ನು ಹೇಗೆ ಅಭಿವೃದ್ಧಿ ಮಾಡುತ್ತಾರೆ? ನಾನೇನು ಅಭಿವೃದ್ಧಿ ಮಾಡಿದ್ದೇನೆ ಎಂಬುದು ಜನರಿಗೆ ಗೊತ್ತಿದೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಭಾವುಕರಾದರು.

‘ಉಪಚುನಾವಣೆ ನಡೆವ ರೀತಿಯೇ ಬೇರೆ’

ಮೈಸೂರು: ‘ರಾಜ್ಯ ಸರ್ಕಾರದ ಸ್ಥಿತಿ ದೀಪಕ್ಕೆ ಸಿಲುಕಿದ ಚಿಟ್ಟೆಯಂತಾಗಿದೆ. ಒಂದು ತಪ್ಪು ಮುಚ್ಚಲು ಮತ್ತೊಂದು ಮಾಡುತ್ತಿದೆ. ಮುಡಾ ಪ್ರಕರಣ, ವಕ್ಫ್ ಸೇರಿದಂತೆ ಎಲ್ಲದರಲ್ಲೂ ತಪ್ಪಿನ ಮೇಲೆ ತಪ್ಪು ನಡೆಯುತ್ತಿದೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಶನಿವಾರ ಇಲ್ಲಿ ಹೇಳಿದರು.

‘ಈ ವಿಚಾರಗಳು ಉಪ ಚುನಾವಣೆ ಮೇಲೆ ಪರಿಣಾಮ ಬೀರುತ್ತವೆ ಎನ್ನುವುದಿಲ್ಲ. ಉಪ ಚುನಾವಣೆ ನಡೆಯುವ ರೀತಿಯೇ ಬೇರೆ. ಇಲ್ಲಿ ಹಣ ಬಲ, ವೈಯುಕ್ತಿಕ ಬಲ, ಅಧಿಕಾರ ದುರುಪಯೋಗ ಎಲ್ಲವೂ ಇರುತ್ತದೆ. ಹೀಗಿದ್ದರೂ ಮೂರು ಕ್ಷೇತ್ರಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳೇ ಗೆಲ್ಲುತ್ತಾರೆ’ ಎಂದು ಹೇಳಿದರು.

ಚನ್ನಪಟ್ಟಣದಲ್ಲಿ ಮಗನ ಗೆಲುವಿಗಾಗಿ ಪ್ರಾರ್ಥಿಸಿ ಇದಕ್ಕೂ ಮೊದಲು ಅವರು ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಮಗನ ಹೆಸರಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಚನ್ನಪಟ್ಟಣದಲ್ಲಿ ನಿಖಿಲ್ ಕಣ್ಣೀರು ಹಾಕಿದ್ದನ್ನು ಟೀಕಿಸುತ್ತಿರುವ ಕಾಂಗ್ರೆಸ್ ನಾಯಕರಿಗೆ ‘ಕಟುಕರಿಗೆ ಕಣ್ಣೀರು ಬರುವುದಿಲ್ಲ’ ಎಂದು ತಿರುಗೇಟು ನೀಡಿದರು.

ಈ ಚುನಾವಣೆಯಲ್ಲಿ ನನ್ನ ಬೆಂಬಲಿಸಿ –ಅಜಿತ್

ಬಾರಾಮತಿ (ಪಿಟಿಐ): ‘ಲೋಕಸಭೆ ಚುನಾವಣೆಯಲ್ಲಿ ‘ಸಾಹೇಬ’ರನ್ನು (ಶರದ್ ಪವಾರ್) ಖುಷಿಪಡಿಸಿದ್ದೀರಿ. ಈ ಚುನಾವಣೆಯಲ್ಲಿ ನನ್ನನ್ನು ಖುಷಿಪಡಿಸಿ’ ಎಂದು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಬಾರಾಮತಿ ಕ್ಷೇತ್ರದ ಮತದಾರರಿಗೆ ಮನವಿ ಮಾಡಿದ್ದಾರೆ.

ಎನ್‌ಸಿಪಿ (ಅಜಿತ್ ಬಣ) ಮುಖ್ಯಸ್ಥರು ಆದ ಅಜಿತ್ ಪವಾರ್ ಅವರು, ‘ನಿಯಮಗಳನ್ನು ಮೀರಿ ಬಾರಾಮತಿ ಕ್ಷೇತ್ರದ ಜನರಿಗೆ ಕುಡಿಯುವ ನೀರು ಸೌಲಭ್ಯ ಕಲ್ಪಿಸಲು ನಾನು ಒತ್ತು ನೀಡಿದ್ದೇನೆ’ ಎಂದು ಅವರು ಹೇಳಿದರು.

ಅಜಿತ್ ಪವಾರ್

ಲೋಕಸಭಾ ಚುನಾವಣೆಯಲ್ಲಿ ಬಾರಾಮತಿ ಕ್ಷೇತ್ರದಲ್ಲಿ ಎನ್‌ಸಿಪಿ ನಾಯಕ ಶರದ್ ಪವಾರ್ ಅವರ ಪುತ್ರಿ ಸುಪ್ರಿಯಾ ಸುಳೆ ಜಯಗಳಿಸಿದ್ದರು. ಆ ಚುನಾವಣೆಯಲ್ಲಿ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಪರಾಭವ ಗೊಂಡಿದ್ದರು.

ಎನ್‌ಸಿಪಿ ವಿಭಜನೆಗೆ ಕಾರಣರಾಗಿದ್ದ ಅಜಿತ್ ಪವಾರ್ ಕಳೆದ ವರ್ಷ ಜುಲೈ ತಿಂಗಳಲ್ಲಿ ಏಕನಾಥ ಶಿಂದೆ ನೇತೃತ್ವದ ಮೈತ್ರಿ ಸರ್ಕಾರವನ್ನು ಸೇರಿದ್ದರು. ಬಾರಾಮತಿ ಲೋಕಸಭೆ ಕ್ಷೇತ್ರ ವ್ಯಾಪ್ತಿ ಅದೇ ಹೆಸರಿನ ವಿಧಾನಸಭೆ ಕ್ಷೇತ್ರದಲ್ಲಿ ಈಗ ಅಜಿತ್ ಪವಾರ್ ಸ್ಪರ್ಧಿಸುತ್ತಿದ್ದಾರೆ.

ನವೆಂಬರ್ 20ರಂದು ಚುನಾವಣೆಯ ನಡೆಯಲಿದ್ದು, ಪ್ರಮುಖ ಕ್ಷೇತ್ರ ಎಂದೇ ಗುರುತಿಸಲಾಗಿರುವ ಇಲ್ಲಿ ಅವರ ವಿರುದ್ಧ ಅವರ ಸಂಬಂಧಿಯೇ ಆಗಿರುವ ಯುಗೇಂದ್ರ ಪವಾರ್ ಕಣದಲ್ಲಿದ್ದಾರೆ. ಯುಗೇಂದ್ರ ನಾಮಪತ್ರ ಸಲ್ಲಿಸುವಾಗ ಶರದ್ ಪವಾರ್, ಸುಪ್ರಿಯಾ ಸುಳೆ ಸಾಥ್ ನೀಡಿದ್ದರು.

‘ಜಾರ್ಖಂಡ್‌ನಲ್ಲಿ ಯುಸಿಸಿ ನಿಶ್ಚಿತ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಜಾರ್ಖಂಡ್‌ನಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಅನುಷ್ಠಾನ ನಿಶ್ಚಿತ. ಆದರೆ, ಯುಸಿಸಿ ವ್ಯಾಪ್ತಿಯಿಂದ ಸ್ಥಳೀಯ ಬುಡಕಟ್ಟು ಜನರನ್ನು ಹೊರಗಿಡಲಿದ್ದು, ಈ ಸಮುದಾಯದ ಅಸ್ಮಿತೆ ಮತ್ತು ಪರಂಪರೆಯನ್ನು ರಕ್ಷಿಸಲಾಗುವುದು’ ಎಂದು ಬಿಜೆಪಿ ಪ್ರಕಟಿಸಿದೆ.



ವಿಧಾನಸಭೆ ಚುನಾವಣೆಗೆ ಭಾನುವಾರ ರಾಂಚಿಯಲ್ಲಿ ಬಿಡುಗಡೆ ಮಾಡಿದ ಪ್ರಣಾಳಿಕೆಯಲ್ಲಿ ಈ ಅಂಶ ಸ್ಪಷ್ಟಪಡಿಸಿದೆ. ಪ್ರಣಾಳಿಕೆ ಬಿಡುಗಡೆ ಮಾಡಿದ ಗೃಹಸಚಿವ ಅಮಿತ್ ಶಾ, ‘ರಾಜ್ಯದಲ್ಲಿ ಸ್ಥಳೀಯ ಬುಡಕಟ್ಟು ಸಮುದಾಯದವರ ಜನಸಂಖ್ಯೆ ಗಣನೀಯವಾಗಿ ಕ್ಷೀಣಿಸುತ್ತಿದೆ’ ಎಂದರು.

ರಾಜ್ಯದ ಸಂತಾಲ್ ಪರಗಣ ವಲಯದಲ್ಲಿ ನುಸುಳುಕೋರರು ಹೆಚ್ಚುತ್ತಿದ್ದಾರೆ. ಅವರು ನಮ್ಮ ಹೆಣ್ಣು ಮಕ್ಕಳನ್ನು ಸೆಳೆದು ಮದುವೆಯಾಗುತ್ತಿದ್ದಾರೆ. ಸ್ಥಳೀಯರ ನೆಲವನ್ನು ಅತಿಕ್ರಮಿಸಿಕೊಳ್ಳುತ್ತಿದ್ದಾರೆ. ಈ ಪ್ರವೃತ್ತಿಯನ್ನು ತಡೆಯದೇ ಇದ್ದರೆ ರಾಜ್ಯದ ಸಂಸ್ಕೃತಿಯು ಉಳಿಯುವುದಿಲ್ಲ. ಭೂಮಿಯೂ ಸಿಗುವುದಿಲ್ಲ. ಅಲ್ಲದೆ, ನಮ್ಮ ಹೆಣ್ಣು ಮಕ್ಕಳೂ ಸುರಕ್ಷಿತವಾಗಿರುವುದಿಲ್ಲ’ ಎಂದು ಶಾ ಎಚ್ಚರಿಸಿದರು.

ಇದೇ ಕಾರಣದಿಂದ ಬಿಜೆಪಿಯು ‘ರೋಟಿ, ಬೇಟಿ, ಮಾಟಿ..’ ಸುರಕ್ಷಣೆಯ ಘೋಷಣೆಯೊಂದಿಗೆ ಬಿಜೆಪಿಯು ಮುನ್ನಡೆಯುತ್ತಿದೆ ಎಂದು ಹೇಳಿದರು. ರಾಜ್ಯದ ‘ಹೇಮಂತ್ ಸೊರೇನ್ ಸರ್ಕಾರ ತುಷ್ಟಿಕರಣ ರಾಜಕಾರಣದಲ್ಲಿ ತೊಡಗಿದೆ’ ಎಂದು ಅವರು ವಾಗ್ದಾಳಿ ನಡೆಸಿದರು.

ಬಿಜೆಪಿಯು ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ರಾಜ್ಯದ ಬುಡಕಟ್ಟು ಮಹಿಳೆಯರನ್ನು ಹೊರಗಿನವರು ಮದುವೆಯಾದಲ್ಲಿ ಈ ದಂಪತಿಯ ಮಕ್ಕಳಿಗೆ ಬುಡಕಟ್ಟು ಜನರ ಮಾನ್ಯತೆಯನ್ನು ನೀಡುವುದಿಲ್ಲ ಎಂದು ಅವರು ಭರವಸೆ ನೀಡಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರುವ ಭರವಸೆ ಮೂಡಿದೆ. ಬಿಜೆಪಿ ಈ ನುಸುಳುಕೋರರನ್ನು ವಾಪಸು ಕಳುಹಿಸಲಿದೆ. ಸ್ಥಳೀಯ ಮಹಿಳೆಯರಿಂದ ಕಸಿದುಕೊಂಡಿರುವ ಭೂಮಿಯನ್ನು ಮರಳಿಕೊಡಿಸಲು ಕಾಯ್ದೆಯನ್ನು ರೂಪಿಸಲಿದೆ ಎಂದು ಹೇಳಿದರು.

ಬಿಜೆಪಿ ಇದರ ಹೊರತಾಗಿ ತನ್ನ ಪ್ರಣಾಳಿಕೆಯಲ್ಲಿ ‘ಗೊಗೊ ದೀದಿ ಯೋಜನೆ’ ಯಡಿ ಮಹಿಳೆಯರಿಗೆ ಮಾಸಿಕ ₹2,100 ಆರ್ಥಿಕ ನೆರವು ನೀಡುವುದು, ₹500ಕ್ಕೆ ಅಡುಗೆ ಅನಿಲ ಸಿಲಿಂಡರ್ ಹಾಗೂ ಪ್ರತಿ ದೀಪಾವಳಿ ಮತ್ತು ರಕ್ಷಾಬಂಧನಕ್ಕೆ ಉಚಿತ ಸಿಲಿಂಡರ್ ನೀಡುವ ಭರವಸೆಯನ್ನೂ ನೀಡಿದೆ

ಯುವಜನರಿಗೆ ತಮ್ಮ ವೃತ್ತಿ ಜೀವನದಲ್ಲಿ ನೆರವಾಗಲು ಎರಡು ವರ್ಷ ಅವಧಿಗೆ ಮಾಸಿಕ ₹2000 ಸ್ಟೈಪೆಂಡ್ ನೀಡಲಿದೆ. ಜೊತೆಗೆ 2.87 ಲಕ್ಷ ಸರ್ಕಾರಿ ಉದ್ಯೋಗ ಹಾಗೂ ಖಾಸಗಿ ವಲಯದಲ್ಲಿ 5 ಲಕ್ಷ ಉದ್ಯೋಗ ಸೃಷ್ಟಿಸುವುದಾಗಿಯೂ ಬಿಜೆಪಿ ಭರವಸೆ ನೀಡಿದೆ.

ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಮತ್ತು ಕೇಂದ್ರ ಸಚಿವ ಶಿವರಾಜ್ ಚೌಹಾಣ್ ಅವರೂ ಭಾಗವಹಿಸಿದ್ದರು.

ಅವಕಾಶ ನೀಡುವುದಿಲ್ಲ: ಸೊರೇನ್

ರಾಂಚಿ (ಪಿಟಿಐ): ‘ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಹಾಗೂ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿಗೆ ಅವಕಾಶ ನೀಡುವುದಿಲ್ಲ’ ಎಂದು ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದಾರೆ.

‘ಸ್ಥಳೀಯ ಬುಡಕಟ್ಟು ಜನರ ಸಂಸ್ಕೃತಿ, ಭೂಮಿ ಮತ್ತು ಹಕ್ಕುಗಳ ರಕ್ಷಣೆಗಾಗಿ ರೂಪಿಸಿರುವ ಸಿಎನ್‌ಟಿ ಕಾಯ್ದೆ ಮತ್ತು ಸಂತಾಲ್ ಪರಗಣ ಹಿಡುವಳಿ (ಎಸ್‌ಪಿಟಿ) ಕಾಯ್ದೆಗಳಿಗೆ ಮಾತ್ರವೇ ಜಾರ್ಖಂಡ್ ಬದ್ಧವಾಗಿರಲಿದೆ’ ಎಂದರು.

ಅಮಿತ್ ಶಾ ಅವರು ಯುಸಿಸಿ ಜಾರಿಗೆ ಬದ್ಧ ಎಂದು ಘೋಷಿಸಿದ ಹಿಂದೆಯೇ ತಿರುಗೇಟು ನೀಡಿರುವ ಸೊರೇನ್, ‘ಬಿಜೆಪಿಯುವರು ವಿಷ ಕಾರುವವರು. ಅವರು ಸ್ಥಳೀಯರ ಹಿತ ರಕ್ಷಿಸುವುದಿಲ್ಲ’ ಎಂದು ಕಿಡಿಕಾರಿದರು.



> **ಜಾತಿ ಜನಗಣತಿ, ರಾಜ್ಯದ ಅಭಿವೃದ್ಧಿಯಲ್ಲಿ ಕೇಂದ್ರದ ಜವಾಬ್ದಾರಿ ಕುರಿತು ಬಿಜೆಪಿ ಮೌನವಾಗಿದೆ. ಧರ್ಮದ ಹೆಸರಲ್ಲಿ ಧ್ರುವೀಕರಣ ಮತ್ತು ಕೋಮು ಸೋಂಕು ಹಬ್ಬಿಸುವುದಷ್ಟೇ ಬಿಜೆಪಿಯ ಕೆಲಸ**
> **ಜೈರಾಮ್ ರಮೇಶ್**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಸಹೋದರಿಯ ಗುಣಗಳ ಬಗ್ಗೆ ಮಾತನಾಡಿದ ಸಹೋದರ ರಾಹುಲ್ ಗಾಂಧಿ

‘ಮೋದಿ ಬಗ್ಗೆ ಎಷ್ಟು ಮಾತನಾಡುವುದು?’

ವಯನಾಡ್ (ಪಿಟಿಐ): ‘ಎಷ್ಟು ಬಾರಿ ಮೋದಿ ಅವರ ಬಗ್ಗೆಯೇ ಮಾತನಾಡುವುದು. ಪ್ರಿಯಾಂಕಾ ಈಗಾಗಲೇ ಮೋದಿ ಬಗ್ಗೆ ಪ್ರಸ್ತಾಪಿಸಿದ್ದಾಳೆ. ಮೋದಿ ಅವರ ಬಗ್ಗೆ ಮಾತನಾಡಿ ಮಾತನಾಡಿ ಬೇಸರ ಬಂದುಬಿಟ್ಟಿದೆ. ಮತ್ತೆ ಯಾಕೆ ಮತ್ತೆ ಅವರ ಹೆಸರು ಪ್ರಸ್ತಾಪಿಸುವುದು’...

ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣೆಯ ಪ್ರಚಾರದ ವೇಳೆ ಯುಡಿಎಫ್ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಪರ ಪ್ರಚಾರ ನಡೆಸಿದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಹೇಳಿದ ಮಾತಿದು. ರಾಹುಲ್ ಅವರು ಪ್ರಿಯಾಂಕಾ ಪರ ಮಾನಂದವಾಡಿ ಹಾಗೂ ಅರೀಕೋಡ್‌ನಲ್ಲಿ ಭಾನುವಾರ ಪ್ರಚಾರ ಸಭೆಗಳನ್ನು ನಡೆಸಿದರು.

ಈ ಪ್ರಚಾರ ಸಭೆಗಳಲ್ಲಿನ ತಮ್ಮ ಭಾಷಣದಲ್ಲಿ ರಾಹುಲ್ ಅವರು ಪ್ರಧಾನಿ ಮೋದಿ ಅವರನ್ನು ಟೀಕಿಸಲಿಲ್ಲ. ಆದರೆ, ಪ್ರಿಯಾಂಕಾ ಹಾಗೂ ತಮ್ಮ ಮಧ್ಯೆದ ಸಂಬಂಧ, ಇಬ್ಬರ ಬಾಲ್ಯದ ನೆನಪುಗಳನ್ನು ಸಹೋದರ ರಾಹುಲ್ ತಮ್ಮ ಭಾಷಣಗಳಲ್ಲಿ ಮೆಲುಕು ಹಾಕಿದರು.

‘ನನ್ನ ಮುಂದೆ ಎರಡು ಆಯ್ಕೆಗಳಿವೆ. ಒಂದೋ ನಾನು ರಾಜಕೀಯ ಭಾಷಣ ಮಾಡುವುದು. ಇಲ್ಲವೇ ನಾನು ನನ್ನ ಕುಟುಂಬದ ಬಗ್ಗೆ ಮಾತನಾಡುವುದು. ನಾನು ನನ್ನ ಕುಟುಂಬದ ಬಗ್ಗೆ ಮಾತನಾಡುವುದಕ್ಕೇ ಇಷ್ಟ ಪಡುತ್ತೇನೆ. ಅದರಲ್ಲಿಯೂ ನಿಮ್ಮ ಅಭ್ಯರ್ಥಿಯ ಬಗ್ಗೆಯೇ ಹೆಚ್ಚು ಮಾತನಾಡಲು ಬಯಸುತ್ತೇನೆ’ ಎಂದರು.

‘ನನ್ನ ಸಹೋದರಿ ಯಾವಾಗಲೂ ನನಗಾಗಿ, ನಮ್ಮ ತಾಯಿಗಾಗಿ ಪ್ರಚಾರ ನಡೆಸಿದ್ದಾಳೆ. ಆದರೆ, ಚುನಾವಣೆಗಳಲ್ಲಿ ಎಂದಿಗೂ ಸ್ಪರ್ಧಿಸಿರಲಿಲ್ಲ. ಇದೇ ಆಕೆಯ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಪ್ರಿಯಾಂಕಾ ನನಗಿಂತ ಹೆಚ್ಚಿನ ಕೆಲಸಗಳನ್ನು ಮಾಡಬಲ್ಲಳು’ ಎಂದರು.

ಸಂವಿಧಾನವನ್ನು ರಕ್ಷಿಸಬೇಕು ಎನ್ನುವ ಕುರಿತು ಮಾತನಾಡಿದ ರಾಹುಲ್, ‘ಸಂವಿಧಾನವನ್ನು ಸಿಟ್ಟಿನಿಂದ ಅಥವಾ ದ್ವೇಷದಿಂದ ಬರೆದಿದ್ದಲ್ಲ. ಬ್ರಿಟಿಷರ ವಿರುದ್ಧ ಹೋರಾಡಿದವರು ಸಂವಿಧಾನವನ್ನು ಬರೆದಿದ್ದು. ಯಾರು ಶೋಷಣೆಗೆ ಒಳಗಾಗಿದ್ದರೋ ಅವರು ಬರೆದಿದ್ದು. ವರ್ಷಗಟ್ಟಲೇ ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದವರು ಬರೆದಿದ್ದು. ಇವರೆಲ್ಲರೂ ಸಂವಿಧಾನವನ್ನು ಮಾನವೀಯತೆ, ಪ್ರೀತಿ ಹಾಗೂ ವಾತ್ಸಲ್ಯದಿಂದ ಬರೆದಿದ್ದಾರೆ’ ಎಂದು ಅಭಿಪ್ರಾಯಪಟ್ಟರು.

ಕೇರಳದ ಮಾನಂದವಾಡಿಯಲ್ಲಿ ಯುಡಿಎಫ್ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ವಾದ್ರಾ ಪರ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾನುವಾರ ಪ್ರಚಾರ ನಡೆಸಿದರು —ಪಿಟಿಐ ಚಿತ್ರ

ಪ್ರಿಯಾಂಕಾ ಬಗೆಗಿನ ರಾಹುಲ್ ನೆನಪು...

- ‘ನಮ್ಮ ತಂದೆ (ರಾಜೀವ್ ಗಾಂಧಿ) ಇಬ್ಬರಿಗೂ ಕ್ಯಾಮೆರಾವನ್ನು ಉಡುಗೊರೆಯಾಗಿ ನೀಡಿದ್ದರು. ಯಾರು ಉತ್ತಮ ಫೋಟೊ ತೆಗೆಯುತ್ತಾರೆ ಎಂದು ನಮ್ಮಿಬ್ಬರ ಮಧ್ಯೆ ಸ್ಪರ್ಧೆ ಏರ್ಪಟ್ಟಿತ್ತು. ಸ್ಪರ್ಧೆಯಲ್ಲಿ ಯಾರು ಗೆದ್ದರು ಎಂದು ನನಗೆ ನೆನಪಿಲ್ಲ’ ಎಂದು ರಾಹುಲ್ ಹೇಳುತ್ತಿದ್ದಂತೆಯೇ ವೇದಿಕೆಯಲ್ಲಿದ್ದ ಪ್ರಿಯಾಂಕಾ ‘ನೀನೆ ಗೆದ್ದಿದ್ದು’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ರಾಹುಲ್, ‘ಹೌದಾ. ಪ್ರಿಯಾಂಕಾ ಹೇಳುತ್ತಿದ್ದಾಳೆ, ನಾನೇ ಸ್ಪರ್ಧೆಯಲ್ಲಿ ಗೆದ್ದಿದ್ದೆನಂತೆ’ ಎನ್ನುತ್ತಾ ರಾಹುಲ್ ಭಾಷಣ ಮುಂದುವರಿಸಿದರು
- ‘ನಮ್ಮ ತಂದೆಯ ಹತ್ಯೆ ಪ್ರಕರಣದ ಅಪರಾಧಿಗಳಲ್ಲಿ ಒಬ್ಬರಾಗಿದ್ದ ನಳಿನಿ ಅವರನ್ನು ಪ್ರಿಯಾಂಕಾ ಒಮ್ಮೆ ಭೇಟಿಯಾಗಿದ್ದಳು. ನಳಿನಿಯನ್ನು ಪ್ರಿಯಾಂಕಾ ತಬ್ಬಿಕೊಂಡಿದ್ದಳು. ಭೇಟಿ ಬಳಿಕ ನನ್ನ ಬಳಿ ಬಂದಿದ್ದ ಪ್ರಿಯಾಂಕಾ ಬಹಳ ಭಾವುಕಳಾಗಿದ್ದಳು. ನಳಿನಿ ಬಗ್ಗೆ ಪ್ರಿಯಾಂಕಾ ಮರುಕ ಪಟ್ಟುಕೊಂಡಿದ್ದಳು. ಆಕೆ ಬೆಳೆದು ಬಂದ ರೀತಿ ಇದು. ಭಾರತದಲ್ಲಿ ಇದೇ ರೀತಿಯ ರಾಜಕೀಯದ ಅಗತ್ಯ ಇದೆ‘ ಎಂದು ರಾಹುಲ್ ಹೇಳಿದರು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

25) 1919 ಭಾರತೀಯ ಪರಿಷತ್ ಕಾಯ್ದೆ ಕುರಿತು ಬರೆಯಿರಿ

ಉತ್ತರ:– (.....ಹಿಂದಿನ ಸಂಚಿಕೆಯಿಂದ)

ಈ ಕಾಯ್ದೆ ರೂಪುಗೊಂಡಿತು. ಭಾರತದ ವೈಸರಾಯ್ ಆಗಿದ್ದ ಚೆಮ್ಸ್‌ಫರ್ಡ್ ಅವರೂ ರಾಜಕೀಯ ಸುಧಾರಣೆಗಳಿಗೆ ಧ್ವನಿಗೂಡಿಸಿದರು. ಪರಿಣಾಮವಾಗಿ 1919ರಲ್ಲಿ ಭಾರತೀಯ ಪರಿಷತ್ ಕಾಯ್ದೆ ಜಾರಿಗೆ ಬಂದಿತು.

ಈ ಕಾಯ್ದೆಯ ಪ್ರಮುಖ ಅಂಶಗಳು 1. ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ (Bi-Cameral) ರಚನೆಗೆ ಅವಕಾಶ ನೀಡಲಾಯಿತು. ಅವುಗಳೆಂದರೆ, ಶಾಸಕಾಂಗ ಸಭೆ (ಕೆಳಮನೆ) ಮತ್ತು ರಾಜ್ಯಗಳ ಪರಿಷತ್ತು (ಮೇಲ್ಮನೆ) ರಚಿಸಲಾಯಿತು.

2. ಪ್ರಾಂತ್ಯಗಳಲ್ಲಿ "ದ್ವಿಸರಕಾರ" (Dyarchy) ಪದ್ಧತಿಗೆ ಅವಕಾಶ ನೀಡಲಾಯಿತು.
3. ಭಾರತಕ್ಕೆ ಒಬ್ಬ ಹೈಕಮಿಷನರ್‌ರನ್ನು ನೇಮಕ ಮಾಡಲಾಯಿತು.
4. ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ ನೀಡಲಾಯಿತು.
5. ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟ್‌ನ್ನು ಬೇರ್ಪಡಿಸಲಾಯಿತು.
6. "ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ಮುಸ್ಲಿಂ, ಸಿಖ್, ಆಂಗ್ಲೋ ಭಾರತೀಯರು ಮತ್ತು ಯುರೋಪಿಯನ್‌ರಿಗೆ ವಿಸ್ತರಿಸಲಾಯಿತು.

26) 1935ರ ಭಾರತ ಸರ್ಕಾರದ ಕಾಯ್ದೆ ಕುರಿತು ಬರೆಯಿರಿ

ಉತ್ತರ:– 1935ರ ಭಾರತ ಸರ್ಕಾರದ ಕಾಯ್ದೆ ಭಾರತದ ಸಂವಿಧಾನ ರಚನೆಗೆ ಈ ಕಾಯ್ದೆಯು ಬುನಾದಿಯಾಗಿದೆ. ಈ ಕಾಯ್ದೆಯು ರೂಪುಗೊಳ್ಳಲು ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ತಯಾರಾದ 1928ರ ವರದಿಯು ಮುಖ್ಯವಾಗಿದೆ. ಸ್ವತಂತ್ರ ಭಾರತದ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ. ಈ ಕಾಯ್ದೆಯು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು. ಇದು ಬ್ರಿಟಿಷ್ ಭಾರತ ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗದೇ ದೇಶಿಯ ಸಂಸ್ಥಾನಗಳಿಗೂ ಅನ್ವಯವಾಗುವ ಅಂಶಗಳನ್ನು ಒಳಗೊಂಡಿದ್ದಿತು.

ಈ ಕಾಯ್ದೆಯ ಪ್ರಮುಖ ಅಂಶಗಳು 1. ಬ್ರಿಟಿಷ್ ಪ್ರಾಂತ್ಯಗಳ, ದೇಶಿಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.

2. ಕೇಂದ್ರದಲ್ಲಿ "ದ್ವಿ ಸರಕಾರ"ವನ್ನು (Dyarchy) ಸ್ಥಾಪಿಸಲಾಯಿತು.
3. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
4. ಪ್ರಾಂತ್ಯಗಳಲ್ಲಿ "ದ್ವಿ ಸರಕಾರ" ಪದ್ಧತಿಯನ್ನು ರದ್ದುಗೊಳಿಸಿ, ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
5. ಭಾರತದಲ್ಲಿ "ಫೆಡರಲ್ ಕೋರ್ಟ್" ಸ್ಥಾಪನೆಗೆ ಅವಕಾಶ ನೀಡಲಾಯಿತು.

ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.

1. ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯವನ್ನು ಸ್ಥಾಪಿಸಿದವನು ________ .
ಉತ್ತರ:– ವಾರನ್ ಹೇಸ್ಟಿಂಗ್
2. ಸೂಪರಿಡೆಂಟೆಂಟ್ ಆಫ್ ಪೊಲೀಸ್ ಹುದ್ದೆಯನ್ನು ಸೃಷ್ಟಿಸಿದವನು ________ .
ಉತ್ತರ:– ಲಾರ್ಡ್ ಕಾರ್ನ್ ವಾಲೀಸ್
3. ಖಾಯಂ ಜಮೀನ್ದಾರಿ ಪದ್ಧತಿಯನ್ನು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ________ ರಲ್ಲಿ ಜಾರಿಗೆ ತರಲಾಯಿತು.
ಉತ್ತರ:– 1789
4. ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ ________ .
ಉತ್ತರ:– ರೈತವಾರಿ ಪದ್ಧತಿ
5. ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ ________ .
ಉತ್ತರ:– ವಿಲಿಯಂ ಬೆಂಟಿಂಕ್
6. ರೆಗ್ಯುಲೇಟಿಂಗ್ ಕಾಯ್ದೆ ________ ರಲ್ಲಿ ಜಾರಿಗೆ ಬಂದಿತು.
ಉತ್ತರ:– 1773
7. ಭಾರತದಲ್ಲಿ ಮೊದಲ ವೈಸರಾಯ್ ಆಗಿ ನೇಮಕವಾದವರು ....
ಉತ್ತರ:– ಲಾರ್ಡ್ ಕ್ಯಾನಿಂಗ್
10. ಭಾರತದ ಸಂವಿಧಾನ ರಚನೆ ಪ್ರಮುಖ ಕಾಯ್ದೆ ....
ಉತ್ತರ;– 1935ರ ಭಾರತ ಸರ್ಕಾರದ ಕಾಯ್ದೆ
11. ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು ....
ಉತ್ತರ:– ಲಾರ್ಡ್ ಕಾರ್ನ್‌ವಾಲೀಸ್
12.................ಕಾಯ್ದೆ ಪ್ರಕಾರ 'ನಿರ್ದೇಶನ' ಮಂಡಳಿಯ (Court of Directors) ಜಾಗದಲ್ಲಿ ನಿಯಂತ್ರಣ ಮಂಡಳಿ (Board of Control) ಹುಟ್ಟಿಕೊಂಡಿತು.
ಉತ್ತರ:– 1784ರ ಪಿಟ್ಸ್ ಇಂಡಿಯಾ
13. ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಾರ್ನ್ ವಾಲೀಸನು ಕಲ್ಕತ್ತಾದಲ್ಲಿ ....ಕಾಲೇಜನ್ನು ಸ್ಥಾಪಿಸಿದನು.
ಉತ್ತರ:– ಫೋರ್ಟ್ ವಿಲಿಯಂ
14...................ಕಾಯ್ದೆಯ ಪ್ರಕಾರ ಚರ್ಚ್‌ಗಳಿಗೆ ಭಾರತಕ್ಕೆ ಪ್ರವೇಶಿಸುವ ಅಧಿಕೃತ ಅವಕಾಶವನ್ನು ನೀಡಲಾಯಿತು.
ಉತ್ತರ:– 1813ರ ಚಾರ್ಟರ್
15 ....ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು
ಉತ್ತರ:– 1764ರ ಬಕ್ಸಾರ್
16. ಇಂಗ್ಲೆಂಡಿನ ....ಸದಸ್ಯನಾದ ಎಡ್ಮಂಡ್ ಬರ್ಕ್‌ನು ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದನು.
ಉತ್ತರ:– ಶಾಸನ ಸಭೆಯ
17................ ವರ್ಷದ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು
ಉತ್ತರ:– 1853ರ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರ ರಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - MATHS

APPLICATIONS OF DERIVATIVES
MAXIMA AND MINIMA

19. The product of 2 natural numbers is 36. Find the numbers if their sum is minimum.

Soln :– Let the two natural numbers be x and $\frac{36}{x}$ but $x \neq 0$

Consider, $y = x + \frac{36}{x}$

y is minimum, when $\frac{dy}{dx} = 0$

$\therefore \frac{dy}{dx} = 1 - \frac{36}{x^2} \Rightarrow 1 - \frac{36}{x^2} = 0;$

$\Rightarrow x^2 = 36 \Rightarrow x = 6 \quad (\text{as } x \neq 0)$

Now consider, $\frac{d^2y}{dx^2} = \frac{72}{x^3} \Rightarrow \left(\frac{d^2y}{dx^2}\right)_{x=6} = \frac{72}{216} > 0$

$\Rightarrow$ y attains minimum at x=6.

Thus, the numbers are 6 and 6.

20. Determine the values of x for which the function $f(x) = \sin x - \cos x;\ 0 \leq x \leq 2\pi$ is increasing and for which it is decreasing.

Soln :– Consider the given function,

$f(x) = \sin x - \cos x$

Differentiating we get, $f'(x) = \cos x + \sin x$

$f'(x) = \sqrt{2}\left(\frac{1}{\sqrt{2}}\cos x + \frac{1}{\sqrt{2}}\sin x\right)$

$f'(x) = \sqrt{2}\left(\cos x.\cos\frac{\pi}{4} + \sin x.\sin\frac{\pi}{4}\right)$

$f'(x) = \sqrt{2}\cos\left(x - \frac{\pi}{4}\right)$

Now consider, for an increasing function

$f'(x) > 0 \Rightarrow \sqrt{2}\cos\left(x - \frac{\pi}{4}\right) > 0$

$\Rightarrow 0 < \left(x - \frac{\pi}{4}\right) < \frac{\pi}{2} \text{ (or) } \frac{3\pi}{2} < x - \frac{\pi}{4} < 2\pi$

[$\because \cos\theta$ will be +ve if θ lies in 1^{st} (or) 4^{th} quadrant]

$\Rightarrow \frac{\pi}{4} < x < \frac{3\pi}{4} \text{ (or) } \frac{7\pi}{4} < x < \frac{9\pi}{4}$

$\Rightarrow 0 < x < \frac{3\pi}{4} \text{ (or) } \frac{7\pi}{4} < x < 2\pi$

$\left(\because 0 < \frac{\pi}{4} \text{ and } \frac{9\pi}{4} > 2\pi\right)$

$\therefore f(x)$ is increasing for $0 < x < \frac{3\pi}{4}$

(or) $\frac{7\pi}{4} < x < 2\pi$

Now consider, for a decreasing function

$f'(x) < 0 \Rightarrow \sqrt{2}\cos\left(x - \frac{\pi}{4}\right) < 0$

$\Rightarrow \frac{\pi}{2} < \left(x - \frac{\pi}{4}\right) < \frac{3\pi}{2}$

[$\because \cos\theta$ will be –ve if θ lies in 2^{nd} and 3^{rd} quadrant]

$\Rightarrow \frac{3\pi}{4} < x < \frac{7\pi}{4}$

Thus, f(x) is decreasing for $\frac{3\pi}{4} < x < \frac{7\pi}{4}$

21. Prove that $\frac{1}{2}\sin x \tan x - \log\sec x$ is +ve & increasing function of x in $\left(0, \frac{\pi}{2}\right)$.

Soln :– Let $f(x) = \frac{1}{2}\sin x \tan x - \log\sec x$

differentiating we get,

$f'(x) = \frac{1}{2}\sin x\sec^2 x + \frac{1}{2}\tan x\cos x - \frac{\sec x \tan x}{\sec x}$

$= \frac{1}{2}\frac{\sin x}{\cos^2 x} + \frac{1}{2}\sin x - \frac{\sin x}{\cos x}$

$= \frac{\sin x\left(1 - 2\cos x + \cos^2 x\right)}{2\cos^2 x}$

$= \frac{\sin x(1 - \cos x)^2}{2\cos^2 x} > 0$

$\left(\text{as } \sin x > 0 \text{ in } \left(0, \frac{\pi}{2}\right)\right)$

$\therefore f(x)$ is an increasing function in $\left(0, \frac{\pi}{2}\right)$

22. Find for what values of x, the function $x^3 - 9x^2 + 24x + 7$ is - (i) increasing; (ii) decreasing and (iii) stationary

Soln :– Let $f(x) = x^3 - 9x^2 + 24x + 7$

On differentiating we get,

$f'(x) = 3x^2 - 18x + 24 = 3\left(x^2 - 6 + 8\right)$

$= 3(x-2)(x-4)$

(i) For f(x) to be increasing,

f'(x) should be greater than 0

$\therefore 3(x-2)(x-4) > 0$

$\Rightarrow (x-2)(x-4) > 0 \Rightarrow \therefore x > 4 \text{ (or) } x < 2$

($\because$ both the factors are – ve and the product is + ve)

(Contd......)



ಇಂಟರ್ನ್‌ಷಿಪ್ ಬಗ್ಗೆ ಇನ್ನಷ್ಟು ಮಾಹಿತಿ

- ಇಂಟರ್ನ್‌ಷಿಪ್ ಆರು ತಿಂಗಳ ಅವಧಿಯದ್ದಾಗಿರುತ್ತದೆ.
- ಈ ಇಂಟರ್ನ್‌ಷಿಪ್‌ಗೆ ಕಲಿಯುವ ಜತೆಗೆ ಸಂಭಾವನೆ ಪಡೆಯುವ ಅವಕಾಶ ಇರುತ್ತದೆ.
- ಆಯ್ಕೆಯಾದವರಿಗೆ ಆನ್‌ಲೈನ್ ಅಥವಾ ದೂರವಾಣಿಯ ಮೂಲಕವೇ ಸಂದರ್ಶನ ನಡೆಯುತ್ತದೆ.
- ಅರ್ಜಿ ಸ್ವೀಕೃತಗೊಂಡಿರುವ ಬಗ್ಗೆ ಆನ್‌ಲೈನ್‌ನಲ್ಲಿ ಪರಿಶೀಲನೆ ಮಾಡಲು ಅವಕಾಶ ಇಲ್ಲ. ಅರ್ಜಿ ಸಲ್ಲಿಸಿದ ನಂತರ ಶಾರ್ಟ್‌ಲಿಸ್ಟ್ ಮಾಡಲಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಗೂಗಲ್ ಕಂಪನಿಯೇ ಸಂದೇಶ ಅಥವಾ ಕರೆ ಮಾಡಿ ತಿಳಿಸುತ್ತದೆ.

ಗೂಗಲ್ ಕಂಪನಿಯಲ್ಲಿ ಇಂಟರ್ನ್‌ಷಿಪ್ ಮಾಡಬೇಕೆ?

ರವಿಚಂದ್ರ ಎಂ

ಕಂಪ್ಯೂಟರ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆಲ್ಲ ಕನಸಿನ ಉದ್ಯೋಗವೆಂದರೆ ಅದು ಗೂಗಲ್ ಕಂಪನಿ. ಖುಷಿಯ ವಿಷಯವೆಂದರೆ 2025ರ ಸಾಲಿನ ಆರು ತಿಂಗಳ ಇಂಟರ್ನ್‌ಷಿಪ್‌ಗೆ ಗೂಗಲ್ ಪ್ರಕಟಣೆ ಹೊರಡಿಸಿದೆ. ಅದರ ವಿವರ ಹೀಗಿದೆ.

ಕನಿಷ್ಠ ವಿದ್ಯಾರ್ಹತೆ: ಯಾವುದೇ ಕ್ಷೇತ್ರದಲ್ಲಿ ಪದವೀಧರರಾಗಿರಬೇಕು ಅಥವಾ ಅದಕ್ಕೆ ಸಮಾನವಾದ ಅನುಭವವನ್ನು ಕಂಪ್ಯೂಟರ್ ಕ್ಷೇತ್ರದಲ್ಲಿ ಹೊಂದಿರಬೇಕು.

- C, C + + , Java ಅಥವಾ Python ಪ್ರೋಗ್ರಾಮಿಂಗ್ ಭಾಷೆಯನ್ನು ಕಲಿತಿರಬೇಕು.
- Windows, Linux /Unix ಅಥವಾ Mac-OS ತಂತ್ರಾಂಶಗಳಲ್ಲಿ ಕಾರ್ಯನಿರ್ವಹಣೆ ಮಾಡುವ ಪರಿಣತಿ ಇರಬೇಕು.
- TCP /IP, ಮಾಹಿತಿ ನಿರ್ವಹಣೆ ಮತ್ತು ಸಂಗ್ರಹ ಮಾಡುವ ಮತ್ತು ಮಷಿನ್ ಲರ್ನಿಂಗ್ ಬಗ್ಗೆ ತಿಳಿವಳಿಕೆ ಹೊಂದಿರಬೇಕು.

ಕಂಪನಿಯ ಆದ್ಯತೆಯೇನು?

- 2025ನೇ ಶೈಕ್ಷಣಿಕ ವರ್ಷದಲ್ಲಿ ಕಂಪ್ಯೂಟರ್ ವಿಜ್ಞಾನ ಅಥವಾ ಅದಕ್ಕೆ ಸಂಬಂಧಪಟ್ಟ ಕೋರ್ಸ್‌ನಲ್ಲಿ ಪದವಿ ಅಥವಾ ಸ್ನಾತಕೋತ್ತರ/ಉನ್ನತ ಪದವಿ ಪಡೆದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ.

ತರಬೇತಿ ಸ್ಥಳ: ಬೆಂಗಳೂರು, ಹೈದರಾಬಾದ್, ಮುಂಬೈ, ಪುಣೆ, ಅಥವಾ ಗುರುಗ್ರಾಮ (Guragoan) ಕಚೇರಿಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು.

ತರಬೇತಿಯ ಉದ್ದೇಶವೇನು?

ಗೂಗಲ್ ಕಂಪನಿಯಲ್ಲಿ ತರಬೇತಿ ಪಡೆಯುವ ಶಿಕ್ಷಾರ್ಥಿಗಳು ಮುಂದಿನ ಪೀಳಿಗೆಯ ಕೋಟ್ಯಂತರ ಮಂದಿ ಬಳಸುವ ತಂತ್ರಾಂಶಗಳ ವಿನ್ಯಾಸ, ಪರೀಕ್ಷೆ, ಅಳವಡಿಕೆ, ಕಾರ್ಯಸಿದ್ಧತೆ ಮತ್ತು ನಿರ್ವಹಣೆ ಬಗ್ಗೆ ಕಲಿಯಲಿದ್ದಾರೆ.

ತರಬೇತಿ ಕೇವಲ ಸರ್ಚ್ ಎಂಜಿನ್‌ಗೆ ಸೀಮಿತವಾಗಿರದೆ ಕೃತಕ ಬುದ್ಧಿಮತ್ತೆ (ಎ.ಐ), ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್, ಡಿಸ್ಟ್ರಿಬ್ಯುಟೆಡ್ ಕಂಪ್ಯೂಟಿಂಗ್, ನೆಟ್‌ವರ್ಕಿಂಗ್, ಕಂಪ್ಯೂಟರ್ ಸೆಕ್ಯೂರಿಟಿ, ಡೇಟಾ ಬೇಸ್ ಕ್ಷೇತ್ರಗಳಲ್ಲಿ ಪರಿಣತಿ ನೀಡುವ ಉದ್ದೇಶ ಹೊಂದಿದೆ. ಆ ಕಾರಣಕ್ಕಾಗಿ ಸಂಸ್ಥೆ ಪ್ರತಿಭಾನ್ವಿತರ ಶೋಧನೆಯಲ್ಲಿ ನಿರತವಾಗಿದೆ.

ತರಬೇತಿಯಲ್ಲಿ ಏನಿರುತ್ತೆ?

ಗೂಗಲ್‌ನ ಉದ್ದೇಶಿತ ಹೊಸ ಪ್ರಾಡಕ್ಟ್/ ತಂತ್ರಾಂಶಗಳ ಬಗ್ಗೆ ಸಂಶೋಧನೆ, ಪರಿಕಲ್ಪನೆ, ಮತ್ತು ನಿರ್ಮಾಣ ಮಾಡುವ ನೈಪುಣ್ಯ ಗಳಿಸುವುದು.

ಗೂಗಲ್‌ನ ಪ್ರಾಡಕ್ಟ್‌ಗಳನ್ನು ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್, ಮಷೀನ್ ಲರ್ನಿಂಗ್, ಡೇಟಾ ಕಂಪ್ರೆಷನ್, ಸರ್ಚ್ ಟೆಕ್ನಾಲಜೀಸ್ ಬಳಸಿ ಅಭಿವೃದ್ಧಿಪಡಿಸುವುದು.

ಇದರ ಜೊತೆಗೆ ಗೂಗಲ್ ಪರಿಣತ ತಂಡಗಳು ನೀಡುವ ಕ್ಲಿಷ್ಟಕರ ಸವಾಲುಗಳನ್ನು ನಿರ್ವಹಿಸುವ ಕಲೆಯನ್ನು ಕಲಿಯಲು ಅವಕಾಶ ಇರುತ್ತದೆ.

ಅರ್ಜಿ ಸಲ್ಲಿಸಲು ಈ ವೆಬ್ ಕೊಂಡಿ ಬಳಸಿ: https://www.google.com/about/careers/applications/jobs results/123826017989993158-software-engineer-university-graduate-2025

ವಿದ್ಯಾರ್ಥಿ ವೇತನ ಕೈಪಿಡಿ

ವೆಸ್ಟರ್ನ್ ಡಿಜಿಟಲ್ ಸ್ಕಾಲರ್‌ಷಿಪ್

ಇದು ವೆಸ್ಟರ್ನ್ ಡಿಜಿಟಲ್‌ನ ಸಿಎಸ್‌ಆರ್ ಉಪಕ್ರಮವಾಗಿದ್ದು, ಲಿಂಗಪರಿವರ್ತಿತ ವಿದ್ಯಾರ್ಥಿಗಳನ್ನು ಬೆಂಬಲಿಸುವ ಉದ್ದೇಶ ಹೊಂದಿದೆ.

ಅರ್ಹತೆ: ಸ್ಟೆಮ್-ಸಂಬಂಧಿತ ಕ್ಷೇತ್ರಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ ಪದವಿ ಮಾಡುತ್ತಿರುವ ಲಿಂಗಪರಿವರ್ತಿತ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಲು ಅರ್ಹರು. ಅರ್ಜಿದಾರರು ತಮ್ಮ ಹಿಂದಿನ ಸೆಮಿಸ್ಟರ್ ಅಥವಾ ಹಿಂದಿನ ತರಗತಿಯಲ್ಲಿ ಕನಿಷ್ಠ ಶೇ 50ರಷ್ಟು ಅಂಕಗಳನ್ನು ಗಳಿಸಿರಬೇಕು. ಭಾರತದಾದ್ಯಂತ ವಿದ್ಯಾರ್ಥಿಗಳಿಗೆ ಲಭ್ಯವಿದೆ. ವೆಸ್ಟರ್ನ್ ಡಿಜಿಟಲ್ ಮತ್ತು ಬಡ್ಡಿ4ಸ್ಟಡಿಯ ಉದ್ಯೋಗಿಗಳ ಮಕ್ಕಳು ಅರ್ಹರಾಗಿರುವುದಿಲ್ಲ.

ಅರ್ಹತೆ: ₹75,000ದವರೆಗಿನ ವಿದ್ಯಾರ್ಥಿವೇತನ

ಅರ್ಜಿ ಸಲ್ಲಿಸಲು ಕೊನೆ ದಿನ: 27-11-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/WDSP1

ನಿಕಾನ್ ಸ್ಕಾಲರ್‌ಷಿಪ್

ನಿಕಾನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಮಾಜದ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಅಭ್ಯಾಸ ಮಾಡಲು ಆರ್ಥಿಕವಾಗಿ ಬೆಂಬಲ ನೀಡಲಿದೆ.

ಅರ್ಹತೆ: 12ನೇ ತರಗತಿಯನ್ನು ಪೂರ್ಣಗೊಳಿಸಿರುವ ಮತ್ತು ಮೂರು ತಿಂಗಳು ಅಥವಾ ಹೆಚ್ಚಿನ ಸಮಯದ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವಂಥ ಭಾರತೀಯ ವಿದ್ಯಾರ್ಥಿಗಳಿಗೆ ಲಭ್ಯವಿದೆ. ಕುಟುಂಬದ ವಾರ್ಷಿಕ ಆದಾಯವು (ಎಲ್ಲಾ ಮೂಲಗಳಿಂದ) ₹ 6 ಲಕ್ಷಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ₹ 10,000ದವರೆಗೆ

ಅರ್ಜಿ ಸಲ್ಲಿಸಲು ಕೊನೆ ದಿನ: 30-11-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/NIKON12

ಸುಭಾಷಿತ

ಹುಚ್ಚುತನದ ಸಂಗತಿಗಳ ಬಗ್ಗೆ ಗಂಭೀರವಾಗಿ ಮಾತನಾಡುವುದು, ಸಮಯವನ್ನು ವ್ಯರ್ಥ ಮಾಡುವ ಗಂಭೀರವಾದ ಸಂಗತಿ. –ಹರುಕಿ ಮುರಕಮಿ

ನೀತಿ ನಿರೂಪಣೆಗೆ ಬೇಕಿರುವ ದತ್ತಾಂಶಕ್ಕೆ ಜನಗಣತಿ ಅತ್ಯಗತ್ಯ

ಸರ್ಕಾರವು ಮುಂದಿನ ವರ್ಷ ಜನಗಣತಿ ನಡೆಸಲು ಯೋಜನೆ ರೂಪಿಸಿದೆ ಎಂಬ ವರದಿಗಳು ಪ್ರಕಟವಾಗಿವೆ. ಆದರೆ, ಅದನ್ನು ಅಧಿಕೃತವಾಗಿ ದೃಢಪಡಿಸಲಾಗಿಲ್ಲ. ವರದಿಗಳ ಪ್ರಕಾರ, ಮುಂದಿನ ವರ್ಷ ಆರಂಭಗೊಳ್ಳುವ ಜನಗಣತಿ ಪ್ರಕ್ರಿಯೆಯು 2026ರಲ್ಲಿ ಪೂರ್ಣಗೊಳ್ಳಲಿದೆ. 2021ರಲ್ಲಿಯೇ ನಡೆಯಬೇಕಿದ್ದ ಜನಗಣತಿಯ ವಿಧಾನ ಕುರಿತು ಇನ್ನೂ ಏನೂ ತೀರ್ಮಾನಿಸಿಲ್ಲ. ಗಣತಿ ನಡೆಸುವುದಕ್ಕೆ ಇಷ್ಟೊಂದು ವಿಳಂಬ ಮಾಡುತ್ತಿರುವುದು ಏಕೆ ಎಂಬುದಕ್ಕೂ ಯಾವುದೇ ಕಾರಣವನ್ನು ನೀಡಲಾಗಿಲ್ಲ. ದೇಶದಾದ್ಯಂತ ಕೋವಿಡ್ ಸಾಂಕ್ರಾಮಿಕ ವ್ಯಾಪಕವಾಗಿದ್ದ ಕಾರಣ, 2021ರಲ್ಲಿ ಜನಗಣತಿ ನಡೆಸುವುದು ಸಾಧ್ಯವಿರಲಿಲ್ಲ. ಸಾಂಕ್ರಾಮಿಕ ಆರಂಭವಾಗಿದ್ದ ಸಂದರ್ಭದಲ್ಲಿ ಜನಗಣತಿಗೆ ಸಿದ್ಧತೆಗಳನ್ನು ನಡೆಸಲಾಗಿತ್ತು. ಆದರೆ, ದೇಶವು ಸಾಂಕ್ರಾಮಿಕದಿಂದ ಹೊರಬಂದ ಬಳಿಕ ಗಣತಿ ನಡೆಸಲು ಅಗತ್ಯವಾದ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಿಲ್ಲ. ಹತ್ತು ವರ್ಷಕ್ಕೊಂದು ಬಾರಿ ನಡೆಯುವ ಜನಗಣತಿ 1881ರಿಂದ ಈವರೆಗೆ ನಿರಂತರವಾಗಿ ನಡೆದುಕೊಂಡು ಬಂದಿದೆ. ಸಾಂಕ್ರಾಮಿಕದ ಕಾರಣಕ್ಕೆ ಜನಗಣತಿ ನಡೆಸಲಾಗದ 44 ದೇಶಗಳ ಪೈಕಿ ಭಾರತವೂ ಒಂದು.

ಜನರ ಸಮಸ್ಯೆಗಳು ಮತ್ತು ಅಭಿವೃದ್ಧಿಯಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು ಬೇಕಾದ ನೀತಿಗಳನ್ನು ರೂಪಿಸಲು ನಿರ್ದಿಷ್ಟ ಹಾಗೂ ನಂಬಲರ್ಹ ದತ್ತಾಂಶದ ಅಗತ್ಯ ಇದೆ

ಜನರಿಗೆ ಸಂಬಂಧಿಸಿದ ಅಗತ್ಯ ಮಾಹಿತಿಯನ್ನು ಜನಗಣತಿಯಲ್ಲಿ ಸಂಗ್ರಹಿಸಲಾಗುತ್ತದೆ. ಅರ್ಥವ್ಯವಸ್ಥೆ, ಸಮಾಜ ಕಲ್ಯಾಣ ಮತ್ತು ಇತರ ಕ್ಷೇತ್ರಗಳ ನೀತಿಗಳನ್ನು ರೂಪಿಸುವುದಕ್ಕೆ ಜನಗಣತಿಯ ದತ್ತಾಂಶವು ಸರ್ಕಾರ ಮತ್ತು ಇತರ ಸಂಸ್ಥೆಗಳಿಗೆ ಅತ್ಯಗತ್ಯ. ಜನರ ಜೀವನೋಪಾಯ ಮತ್ತು ಇತರ ಅಗತ್ಯಗಳಿಗೆ ಸಂಬಂಧಿಸಿ ಕಾರ್ಯಕ್ರಮಗಳನ್ನು ರೂಪಿಸಲು ಈ ಮಾಹಿತಿ ಬೇಕು. ಅದಕ್ಕಾಗಿ ಜನರ ಆದಾಯ ಮತ್ತು ಮನೆಯಲ್ಲಿ ಇರುವ ಜನರ ಸಂಖ್ಯೆ, ಮೂಲಸೌಕರ್ಯಗಳ ಲಭ್ಯತೆ, ಶಿಕ್ಷಣ ಮತ್ತು ಉದ್ಯೋಗದ ಸ್ಥಿತಿಯಂತಹ ಮಾಹಿತಿ ಬೇಕಾಗುತ್ತದೆ. ಪ್ರದೇಶ, ರಾಜ್ಯಗಳು, ಸಾಮಾಜಿಕ ಗುಂಪುಗಳಲ್ಲಿ ಈ ಎಲ್ಲ ವಿವರಗಳು ಭಿನ್ನವಾಗಿರುತ್ತವೆ. ಜನರ ಸಮಸ್ಯೆಗಳು ಮತ್ತು ಅಭಿವೃದ್ಧಿಯಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು ಬೇಕಾದ ನೀತಿಗಳನ್ನು ರೂಪಿಸಲು ನಿರ್ದಿಷ್ಟ ಮತ್ತು ನಂಬಲರ್ಹ ದತ್ತಾಂಶದ ಅಗತ್ಯ ಇದೆ. ಜಗತ್ತಿನಲ್ಲಿಯೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಹಾಗೂ ಕಲ್ಯಾಣ ಮತ್ತು ಅಭಿವೃದ್ಧಿಯ ಹಲವು ಕ್ಷೇತ್ರಗಳಲ್ಲಿ ಹಿಂದುಳಿದಿರುವ ಭಾರತದಂತಹ ದೇಶಕ್ಕೆ ಈ ಮಾಹಿತಿ ಅತ್ಯಂತ ಅಗತ್ಯ. ಭಾರತವು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಯನ್ನು ಹೊಂದಿದೆ. ಅರ್ಥವ್ಯವಸ್ಥೆಯ ಬೆಳವಣಿಗೆಯನ್ನು ಸುಸ್ಥಿರಗೊಳಿಸುವಂತಹ ನೀತಿ ರೂಪಿಸಲು ಕೂಡ ವಿಶ್ವಾಸಾರ್ಹ ದತ್ತಾಂಶ ಬೇಕಿದೆ.

ಜನಗಣತಿಯ ಜೊತೆಗೆ ಜಾತಿ ಜನಗಣತಿಯನ್ನೂ ನಡೆಸಬೇಕು ಎಂಬ ಬೇಡಿಕೆ ಬಲವಾಗಿ ವ್ಯಕ್ತವಾಗಿದೆ. ಇಡೀ ದೇಶಕ್ಕೆ ಅನ್ವಯವಾಗುವಂತೆ ಈಗ ಇರುವ ಜಾತಿ ಜನಗಣತಿಯ ಮಾಹಿತಿಯು 1931ರಲ್ಲಿ ಸಂಗ್ರಹಿಸಿದ್ದಾಗಿದೆ. ಹಾಗಾಗಿ, ಆ ಮಾಹಿತಿ ಈಗ ಬಳಕೆಗೆ ಯೋಗ್ಯವಲ್ಲ. ಅಸಮಾನತೆ ನಿವಾರಣೆ ಮತ್ತು ಇತರ ನೀತಿಗಳನ್ನು ರೂಪಿಸಲು ಜಾತಿ ಜನಗಣತಿಯ ಮಾಹಿತಿ ಬೇಕಾಗಿದೆ ಎಂದು ವಿರೋಧ ಪಕ್ಷಗಳು ಗಟ್ಟಿಯಾಗಿ ಪ್ರತಿಪಾದಿಸುತ್ತಿವೆ. ಆದರೆ, ಜನಗಣತಿಯಲ್ಲಿ ಜಾತಿ ಜನಗಣತಿಯನ್ನು ಸೇರಿಸಿಕೊಳ್ಳಬೇಕೆ ಎಂಬುದರ ಕುರಿತು ಸರ್ಕಾರ ಏನನ್ನೂ ಹೇಳಿಲ್ಲ. ಹೊಸದಾಗಿ ಸಂಗ್ರಹಿಸಲಾಗುವ ಜನಸಂಖ್ಯಾ ದತ್ತಾಂಶದ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆ ನಡೆಸುವ ಪ್ರಸ್ತಾವವೂ ಇದೆ ಎಂಬುದು ಗಣತಿಗೆ ಸಂಬಂಧಿಸಿದ ಇನ್ನೊಂದು ವಿವಾದಾಸ್ಪದ ಅಂಶ. ಇದರಿಂದಾಗಿ, ಜನಸಂಖ್ಯೆ ನಿಯಂತ್ರಣದಲ್ಲಿ ಯಶಸ್ವಿಯಾಗಿರುವ ರಾಜ್ಯಗಳಿಗೆ ಲೋಕಸಭೆಯಲ್ಲಿ ಕಡಿಮೆ ಪ್ರಾತಿನಿಧ್ಯ ದೊರೆಯಲಿದೆ. ಜನಸಂಖ್ಯೆ ನಿಯಂತ್ರಣದಲ್ಲಿ ವಿಫಲವಾದ ರಾಜ್ಯಗಳ ಪ್ರಾತಿನಿಧ್ಯ ಹೆಚ್ಚಲಿದೆ. ಜನಸಂಖ್ಯೆಯ ಆಧಾರದ ಮೇಲೆ ಕ್ಷೇತ್ರಗಳ ಪುನರ್ ವಿಂಗಡಣೆಗೆ ದಕ್ಷಿಣದ ರಾಜ್ಯಗಳ ಪ್ರಬಲ ವಿರೋಧ ಇದೆ.

ದಿನದ ಟ್ವೀಟ್

ಉಗ್ರರ ವಿರುದ್ಧ ಒಂದಾಗೋಣ

ಶ್ರೀನಗರದ ಸಂಡೇ ಮಾರ್ಕೆಟ್‌ನಲ್ಲಿ ಗ್ರೆನೇಡ್ ದಾಳಿ ನಡೆದಿದ್ದು, ಹಲವರು ಗಾಯಗೊಂಡಿರುವ ವರದಿಗಳಿವೆ. ಶ್ರೀನಗರದ ಮಧ್ಯ ಭಾಗದಲ್ಲಿರುವ ಖನ್ಯಾರ್‌ನಲ್ಲಿ ನಿನ್ನೆಯಷ್ಟೇ ನಡೆದ ಎನ್‌ಕೌಂಟರ್‌ನಲ್ಲಿ ಎಲ್‌ಇಟಿ ಕಮಾಂಡರ್‌ನನ್ನು ಕೊಂದು ಹಾಕಲಾಗಿತ್ತು. ಕಾಶ್ಮೀರದಲ್ಲಿನ ಶಾಂತ ಸ್ಥಿತಿಯನ್ನು ಮತ್ತು ಒಮರ್ ಅಬ್ದುಲ್ಲಾ ನೇತೃತ್ವದ ಚುನಾಯಿತ ಸರ್ಕಾರವನ್ನು ಒಪ್ಪಿಕೊಳ್ಳಲು ಪಾಕಿಸ್ತಾನದ ಆಡಳಿತದ ಪರೋಕ್ಷ ನಿಯಂತ್ರಕರಿಗೆ ಕಷ್ಟವಾಗುತ್ತಿದೆ ಎಂದು ತೋರುತ್ತದೆ. ಇಂತಹ ದಾಳಿಗಳ ವಿರುದ್ಧ ನಾವೆಲ್ಲರೂ ಒಗ್ಗಟ್ಟಿನಿಂದ ನಿಲ್ಲಬೇಕು.

ಶೇಷ್ ಪಾಲ್ ವೈದ್, ನಿವೃತ್ತ ಐಪಿಎಸ್ ಅಧಿಕಾರಿ

ಕಿಡಿನುಡಿ

ಚನ್ನಪಟ್ಟಣ ಉಪಚುನಾವಣಾ ಪ್ರಚಾರದಲ್ಲಿ ನಿರತರಾಗಿದ್ದ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ, ಸ್ಕೂಟರ್‌ನಲ್ಲಿ ತೆರಳುತ್ತಿದ್ದಾಗ ರಸ್ತೆಯ ಕೆಟ್ಟ ಸ್ಥಿತಿಯ ಕಾರಣಕ್ಕಾಗಿ ಕೆಳಗೆ ಬಿದ್ದಿದ್ದಾರೆ. ಈಗ ಕೇಂದ್ರ ಸಚಿವರಾಗಿರುವ ಅವರ ತಂದೆ ಎಚ್.ಡಿ.ಕುಮಾರಸ್ವಾಮಿ ಅವರೇ ಈ ಕ್ಷೇತ್ರದಲ್ಲಿ ಆರೇಳು ವರ್ಷಗಳಿಂದಲೂ ಶಾಸಕರಾಗಿದ್ದರು.

ವೀಣಾ ಜೈನ್

25 ವರ್ಷಗಳ ಹಿಂದೆ

ಗುರುವಾರ, 4-11-1999

- **ಸಾಂಕ್ರಾಮಿಕ ರೋಗದ ಭೀತಿಯಲ್ಲಿ ಚಂಡಮಾರುತ ಸಂತ್ರಸ್ತರು**

ನವದೆಹಲಿ, ನ. 3 (ಪಿಟಿಐ, ಯುಎನ್‌ಐ)– ಭೀಕರ ಚಂಡಮಾರುತದಿಂದ ತೀವ್ರ ಹಾನಿಗೊಳಗಾಗಿರುವ ಒರಿಸ್ಸಾದಲ್ಲಿ ಇಂದು ಪ್ರಥಮ ಬಾರಿಗೆ ಸೂರ್ಯ ಕಾಣಿಸಿಕೊಂಡಿದ್ದು, ಸಾಮಾನ್ಯ ಸ್ಥಿತಿಯತ್ತ ಮರಳುತ್ತಿದೆ. ಸೇನಾಪಡೆ ಪರಿಹಾರ ಕಾರ್ಯ ಚುರುಕುಗೊಳಿಸಿದೆ.

- **‘ರೈತರ ಸಮಸ್ಯೆಗೆ ಸ್ಪಂದಿಸದ ಸಂಶೋಧನೆ’**

ಬೆಂಗಳೂರು, ನ. 3– ರಾಜ್ಯದ ಎರಡೂ ಕೃಷಿ ವಿಶ್ವವಿದ್ಯಾಲಯಗಳು ರೈತರ ಸಮಸ್ಯೆಗಳಿಗೆ ಕ್ಷಿಪ್ರವಾಗಿ ಸ್ಪಂದಿಸುವಲ್ಲಿ ಹಿಂದೆ ಬಿದ್ದಿವೆ ಹಾಗೂ ಅವುಗಳ ಸಂಶೋಧನೆಗಳ ಫಲ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂದು ಕೃಷಿ ಸಚಿವ ಟಿ.ಬಿ.ಜಯಚಂದ್ರ ಇಂದು ಕೃಷಿ ವಿಜ್ಞಾನಿಗಳನ್ನು ತರಾಟೆಗೆ ತೆಗೆದುಕೊಂಡರು.

ಅವರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಏರ್ಪಡಿಸಿದ್ದ ಮೂರು ದಿನಗಳ ‘ಕೃಷಿ ಮೇಳ’ವನ್ನು ಉದ್ಘಾಟಿಸಿ, ರೈತರ ಸಮಸ್ಯೆಗಳಿಗೆ ಕೃಷಿ ವಿಶ್ವವಿದ್ಯಾಲಯಗಳಿಗಿಂತ ಖಾಸಗಿ ಸಂಸ್ಥೆಗಳು ಕ್ಷಿಪ್ರವಾಗಿ ಸ್ಪಂದಿಸುತ್ತಿವೆ. ಈ ಹಿನ್ನೆಲೆಯಲ್ಲಿ ರೈತರು ಖಾಸಗಿ ವಲಯದತ್ತ ಒಲವು ತೋರಿಸುತ್ತಿದ್ದಾರೆ ಎಂದರು.

50 ವರ್ಷಗಳ ಹಿಂದೆ

ಸೋಮವಾರ, 4-11-1974

- **ಶಿಕ್ಷಣದಲ್ಲಿ ಹಿಂದುಳಿದ ಜನರ ವರ್ಗೀಕರಣ**

ಬೆಂಗಳೂರು, ನ. 3– ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಗೊತ್ತುಮಾಡಲು ಹಿಂದುಳಿದ ವರ್ಗಗಳನ್ನು ರಾಜ್ಯದ ಹಿಂದುಳಿದ ವರ್ಗಗಳ ಆಯೋಗ ಎರಡು ಪ್ರಧಾನ ವರ್ಗಗಳನ್ನಾಗಿ ವರ್ಗೀಕರಿಸಲು ಸರ್ವಾನುಮತದಿಂದ ತೀರ್ಮಾನಿಸಿದೆ.

1972ರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯದ ಸರಾಸರಿಗಿಂತ ಕಡಿಮೆ, ಆದರೆ ಈ ಸರಾಸರಿಯ ಶೇಕಡ 50ರಷ್ಟಕ್ಕಿಂತ ಹೆಚ್ಚು ಅಂಕ ಪಡೆದಿರುವ ಹಿಂದುಳಿದ ಜಾತಿಗಳು ಮೊದಲ ವರ್ಗ.

ರಾಜ್ಯದ ಸರಾಸರಿಯ ಶೇಕಡ 50ರಷ್ಟಕ್ಕಿಂತ ಕಡಿಮೆ ಅಂಕ ಪಡೆದಿರುವ ಜಾತಿಗಳು ಎರಡನೆಯ ವರ್ಗ.

ಈ ಎರಡನೇ ವರ್ಗವನ್ನು ಹಿಂದುಳಿದ ಜಾತಿಗಳು ಹಾಗೂ ಹಿಂದುಳಿದ ಪಂಗಡ (ಟ್ರೈಬ್ಸ್) ಎಂದು ವರ್ಗೀಕರಿಸಲಾಗಿದೆ.

ಆಯೋಗದ ನಿರ್ಧಾರವನ್ನು ಆಯೋಗದ ಅಧ್ಯಕ್ಷ ಶ್ರೀ ಎಲ್.ಜಿ.ಹಾವನೂರು ಅವರು ಇಂದು ವರದಿಗಾರರಿಗೆ ತಿಳಿಸಿದರು.

‘ಹಿಂದುಳಿದ ವರ್ಗಗಳಾವುವು ಎಂಬುದನ್ನು ಗೊತ್ತುಮಾಡುವಾಗ ನಾವು ಜಾತಿ– ಕೋಮುಗಳನ್ನು ಆಧಾರವಾಗಿ ತೆಗೆದುಕೊಳ್ಳಲೇಬೇಕಾಗಿದೆ. ಆದರೆ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಗೊತ್ತು ಮಾಡುವುದರಲ್ಲಿ ಜಾತಿ ತತ್ವದ ಆಧಾರದ ಮೇಲೆ ಮಾತ್ರ ಹೋಗುವುದಿಲ್ಲ. ಸಂಪ್ರದಾಯವಾಗಿ ಬಂದಿರುವ ಮೇಲು ಜಾತಿ ಹಾಗೂ ಕೀಳು ಜಾತಿ ಎಂಬ ಕಲ್ಪನೆಯನ್ನು ಒಪ್ಪಿಕೊಂಡರೆ, ಅರ್ಹರಾಗಿದ್ದರೂ ಮೇಲು ಜಾತಿಗಳ ಕೆಲ ವರ್ಗಗಳನ್ನು ಬಿಟ್ಟು ಬಿಡುತ್ತೇವೆ ಹಾಗೂ ಮುಂದುವರಿದಿದ್ದರೂ ಕೀಳು ಜಾತಿಗಳ ಕೆಲ ವರ್ಗಗಳನ್ನು ಸೇರಿಸಿಬಿಡುತ್ತೇವೆ. ಇಲ್ಲಿಯವರೆಗಿನ ಹಿಂದುಳಿದ ವರ್ಗಗಳ ಆಯೋಗಗಳು ಅಥವಾ ಸಮಿತಿಗಳು ಹಿಂದುಳಿದಿರುವಿಕೆಯನ್ನು ಗೊತ್ತುಮಾಡುವುದರಲ್ಲಿ ಜಾತಿ ಆಧಾರದ ಮೇಲೆ ನಿರ್ಧರಿಸುವ ಸಾಂಪ್ರದಾಯಿಕ ಮಾರ್ಗ ಅನುಸರಿಸಿವೆ’ ಎಂದು ಹಾವನೂರು ಅವರು ವಿವರಿಸಿದರು.

ಜಾತಿಗಳ ಜನಸಂಖ್ಯೆ, ವಿದ್ಯಾರ್ಹತೆ, ಉದ್ಯೋಗ, ವಾಸಸ್ಥಳ, ಆದಾಯ, ಆರ್ಥಿಕ ಪರಿಸ್ಥಿತಿ ಮತ್ತಿತರ ವಿಷಯಗಳ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಿ, ಅವುಗಳ ಆಧಾರದ ಮೇಲೆ ಹಿಂದುಳಿದಿರುವಿಕೆಯನ್ನು ಗೊತ್ತುಮಾಡುವ ‘ಯುಕ್ತ ಮಾರ್ಗವನ್ನು’ ಆಯೋಗ ಅನುಸರಿಸುತ್ತಿದೆ ಎಂದರು.

ಈ ಚುನಾವಣೆಯಲ್ಲಿ ವಲಸೆಯ ವಿಷಯ ಹೆಚ್ಚು ಚರ್ಚೆಗೆ ಒಳಗಾಗಿದೆ

ಶ್ವೇತಭವನ: ಯಾರು ಗೆದ್ದರೆ ಏನು ಲಾಭ?

ಸೀಮೋಲ್ಲಂಘನೆ

ಸುಧೀಂದ್ರ ಬುಧ್ಯ

ಅಮೆರಿಕದ ಮುಂದಿನ ಅಧ್ಯಕ್ಷ ಯಾರಾಗಬೇಕು ಎಂಬ ಪ್ರಶ್ನೆಗೆ, ಅಮೆರಿಕದ ಮತದಾರರು ನಾಳೆ (ನ. 5) ಉತ್ತರಿಸಲಿದ್ದಾರೆ. ಹಲವು ವಿಶೇಷಗಳಿಂದ ಕೂಡಿರುವ ಈ ಚುನಾವಣೆಯು ಮತ್ತೊಮ್ಮೆ ತೀವ್ರ ಪೈಪೋಟಿಯ ಹಣಾಹಣಿಯಾಗಿ ಹೊರಹೊಮ್ಮಿದೆ.

ಈ ಬಾರಿಯ ಅಮೆರಿಕದ ಅಧ್ಯಕ್ಷೀಯ ಚುನಾವಣೆಯು ಈ ಹಿಂದಿನ ಚುನಾವಣೆಗಳಿಗಿಂತ ಕೊಂಚ ಭಿನ್ನ. ಏಕೆಂದರೆ, ಒಂದು ಅವಧಿಗೆ ಅಧ್ಯಕ್ಷರಾಗಿದ್ದ ಡೊನಾಲ್ಡ್ ಟ್ರಂಪ್ ಅವರು ಮರುಆಯ್ಕೆ ಬಯಸಿ ಸೋತು, ಮತ್ತೊಮ್ಮೆ ಅಧ್ಯಕ್ಷೀಯ ಚುನಾವಣೆಯ ಕಣದಲ್ಲಿದ್ದಾರೆ. ಹತ್ತಾರು ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಎದುರಿಸುತ್ತಿರುವ ಟ್ರಂಪ್, ಎರಡು ಬಾರಿ ಸಂಸತ್ತಿನಲ್ಲಿ ವಾಗ್ದಂಡನೆಗೆ ಕೂಡ ಗುರಿಯಾಗಿದ್ದರು. ಪ್ರಸಕ್ತ ಚುನಾವಣೆಯ ಅವಧಿಯಲ್ಲಿ ಟ್ರಂಪ್ ಅವರನ್ನು ಹತ್ಯೆಗೈಯ್ಯುವ ಎರಡು ಪ್ರಯತ್ನಗಳು ನಡೆದವು!

ಮತ್ತೊಂದೆಡೆ, ಉತ್ಸಾಹದಿಂದಲೇ ಪ್ರಚಾರ ಆರಂಭಿಸಿದ್ದ, ಹಾಲಿ ಅಧ್ಯಕ್ಷ ಜೋ ಬೈಡನ್ ಅವರು ಕಣದಿಂದ ಹಿಂದೆ ಸರಿಯಬೇಕಾಯಿತು. ಆಕಸ್ಮಿಕವಾಗಿ ಅಧ್ಯಕ್ಷೀಯ ಅಭ್ಯರ್ಥಿಯಾದ ಕಮಲಾ ಹ್ಯಾರಿಸ್ ಇದೀಗ ಕಣದಲ್ಲಿದ್ದಾರೆ. ವರ್ಣೀಯ ಸಮುದಾಯಕ್ಕೆ ಸೇರಿದ, ಏಷ್ಯನ್ ಅಮೆರಿಕನ್ ಸಮುದಾಯದ ಮಹಿಳೆಯೊಬ್ಬರು ಅಮೆರಿಕದ ಅತ್ಯುನ್ನತ ಹುದ್ದೆಗೆ ಸ್ಪರ್ಧಿಸಿರುವ ಕಾರಣದಿಂದಲೂ ಈ ಚುನಾವಣೆ ವಿಶೇಷವಾದದ್ದು.

ಅಮೆರಿಕದ ಅಧ್ಯಕ್ಷೀಯ ಚುನಾವಣೆಯನ್ನು, ಅಮೆರಿಕದ ಅಧ್ಯಕ್ಷ ಯಾರಾದರೆ ತನಗೆ ಲಾಭ ಎಂಬ ಲೆಕ್ಕಾಚಾರದೊಂದಿಗೇ ಜಗತ್ತು ಗಮನಿಸುತ್ತದೆ. ಈಗಾಗಲೇ ಉಕ್ರೇನ್ ಯುದ್ಧ ಮತ್ತು ಇಸ್ರೇಲ್-ಹಮಾಸ್-ಇರಾನ್ ನಡುವಿನ ಸಂಘರ್ಷ ಜಗತ್ತಿನ ಇತರ ದೇಶಗಳ ಮೇಲೂ ಪರೋಕ್ಷ ಪರಿಣಾಮ ಬೀರಿದೆ. ಚೀನಾದ ಆಕ್ರಮಣಶೀಲ ನಡೆ ಏಷ್ಯಾದಲ್ಲಿ ಹೊಸ ಸಂಘರ್ಷಗಳನ್ನು ಹುಟ್ಟುಹಾಕಬಲ್ಲದು ಎಂಬ ಭೀತಿ ಇದೆ. ಐರೋಪ್ಯ ರಾಷ್ಟ್ರಗಳ ಮೇಲೆ ರಷ್ಯಾದ ಕರಾಳಛಾಯೆ ಇದೆ. ಜಾಗತಿಕ ಅರ್ಥವ್ಯವಸ್ಥೆ ಸದೃಢವಾಗಿಲ್ಲ. ಈ ಸಂದರ್ಭದಲ್ಲಿ ಜಾಗತಿಕ ರಾಜಕೀಯವನ್ನು ಮತ್ತು ಆರ್ಥಿಕತೆಯನ್ನು ನಿಯಂತ್ರಿಸುವ ಸಾಮರ್ಥ್ಯವಿರುವ ಅಮೆರಿಕದ ಚುಕ್ಕಾಣಿ ಯಾರ ಕೈಯಲ್ಲಿ ಇರುತ್ತದೆ ಎಂಬುದು ಮುಖ್ಯವಾಗುತ್ತದೆ.

ಭಾರತದ ದೃಷ್ಟಿಯಿಂದ ನೋಡುವುದಾದರೆ, ಅಮೆರಿಕ ಮತ್ತು ಭಾರತದ ನಡುವಿನ ದ್ವಿಪಕ್ಷೀಯ ಸಂಬಂಧ ಬಲವಾಗಿದೆ. ಟ್ರಂಪ್ ಅಥವಾ ಕಮಲಾ ಶ್ವೇತಭವನ ಹೊಕ್ಕರೆ, ದ್ವಿಪಕ್ಷೀಯ ಸಂಬಂಧದಲ್ಲಿ ದೊಡ್ಡ ಮಟ್ಟದ ಬದಲಾವಣೆಗಳು ಆಗುವುದಿಲ್ಲ. ಆದರೆ ಕೆಲವು ವಿಷಯಗಳಲ್ಲಿ ಕಮಲಾ ಅಥವಾ ಟ್ರಂಪ್ ಅವರ ಸಂಭಾವ್ಯ ಆಡಳಿತ ಭಿನ್ನವಾಗಿ ವರ್ತಿಸಬಹುದು.

ಈ ಹಿಂದೆ ಭಾರತದ ಉಕ್ಕು ಮತ್ತು ಅಲ್ಯೂಮಿನಿಯಂ ಉತ್ಪನ್ನಗಳ ಮೇಲೆ ಹೆಚ್ಚಿನ ಸುಂಕವನ್ನು ಟ್ರಂಪ್ ಆಡಳಿತ ಹೇರಿತ್ತು. ಭಾರತ ತನ್ನ ಮಾರುಕಟ್ಟೆಗೆ ಅಮೆರಿಕಕ್ಕೆ ಸಮ ಪ್ರಮಾಣದ ಪ್ರವೇಶವನ್ನು ನೀಡಿಲ್ಲ, ಹಾಗಾಗಿ ಅದೇ ನಿಲುವನ್ನು ಅಮೆರಿಕ ತಳೆಯಲಿದೆ ಎಂದು ಅಮೆರಿಕದ ಮಾರುಕಟ್ಟೆಗೆ ಭಾರತದ ಉತ್ಪನ್ನಗಳ ಪ್ರವೇಶವನ್ನು ಟ್ರಂಪ್ ಕಡಿತಗೊಳಿಸಿದ್ದರು. ಭಾರತ ಇದೀಗ ಮುಕ್ತ ಮಾರುಕಟ್ಟೆ ಒಪ್ಪಂದಕ್ಕೆ ಅಮೆರಿಕದತ್ತ ನೋಡುತ್ತಿದೆ. ಸಾಮಾನ್ಯವಾಗಿ ಟ್ರಂಪ್, ಎಲ್ಲ ವಿಷಯಗಳಲ್ಲೂ ‘ಕೊಡು ಮತ್ತು ಕೊಳ್ಳುವಿಕೆ’ ಸಮಾನವಾಗಿ ಇರಬೇಕು ಎಂದು ಬಯಸುತ್ತಾರೆ. ಹಾಗಾಗಿ, ಒಂದೊಮ್ಮೆ ಅವರು ಅಧ್ಯಕ್ಷರಾದರೆ, ಮುಕ್ತ ಮಾರುಕಟ್ಟೆ ಒಪ್ಪಂದ ಏನೆಲ್ಲಾ ಷರತ್ತುಗಳೊಂದಿಗೆ ಬರಬಹುದು ಎಂಬುದನ್ನು ಕಾದು ನೋಡಬೇಕು. ಆದರೆ ಈ ವಿಷಯವಾಗಿ ಕಮಲಾ ಅವರ ನಿಲುವಿನಲ್ಲಿ ಕೂಡ ಹೆಚ್ಚಿನ ವ್ಯತ್ಯಾಸಗಳಿಲ್ಲ.

ಉಕ್ರೇನ್ ಯುದ್ಧದ ವಿಷಯ ನೋಡುವುದಾದರೆ, ತಾನು ಅಧಿಕಾರಕ್ಕೆ ಬಂದರೆ ಉಕ್ರೇನ್ ಯುದ್ಧವನ್ನು ಅಂತ್ಯಗೊಳಿಸುವುದಾಗಿ ಟ್ರಂಪ್ ಹೇಳುತ್ತಿದ್ದಾರೆ. ಆದರೆ ಹೇಗೆ ಎಂದು ವಿವರಿಸುತ್ತಿಲ್ಲ. ಅವರು ತಮ್ಮದೇ ಶೈಲಿಯಲ್ಲಿ ಈ ಸಮಸ್ಯೆಯನ್ನು ಕೊನೆಗಾಣಿಸಲು ಪ್ರಯತ್ನಿಸಬಹುದು. ರಷ್ಯಾದೊಂದಿಗೆ ಯಾವುದೇ ಬಗೆಯ ಸಂಬಂಧ ಇರಿಸಿಕೊಳ್ಳಬಾರದು ಎಂಬ ಒತ್ತಡ ಭಾರತದ ಮೇಲೆ ಇಲ್ಲವಾಗಬಹುದು. ಕಮಲಾ ಅಧ್ಯಕ್ಷರಾದರೆ, ರಷ್ಯಾದೊಂದಿಗೆ ಉತ್ತಮ ಸಂಬಂಧ ಹೊಂದಿರುವ ಭಾರತವನ್ನು ಶಾಂತಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬಹುದು.

ಭಾರತ ಮತ್ತು ಅಮೆರಿಕ ಎರಡಕ್ಕೂ ಚೀನಾ ಬಹುಮುಖ್ಯವಾದ ವಿಷಯ. ಕಮಲಾ ಹ್ಯಾರಿಸ್ ಚೀನಾ ಕುರಿತು ಸ್ಪಷ್ಟ ನಿಲುವು ಹೊಂದಿದಂತೆ ಕಾಣುವುದಿಲ್ಲ. ಬೈಡನ್ ಆಡಳಿತದ ಚೀನಾ ಕುರಿತ ನೀತಿಯನ್ನೇ ಅವರು ಮುಂದುವರಿಸಬಹುದು. ಆದರೆ ಟ್ರಂಪ್, ಚೀನಾದ ಕುಟಿಲ ತಂತ್ರಗಳನ್ನು ಬಹಿರಂಗವಾಗಿ ಟೀಕಿಸುತ್ತಾ ಬಂದಿದ್ದಾರೆ. ಟ್ರಂಪ್ ಅವರ ಈ ಹಿಂದಿನ ಅವಧಿಯಲ್ಲಿ ಅಮೆರಿಕ ಮತ್ತು ಚೀನಾದ ನಡುವೆ ವಾಣಿಜ್ಯಿಕ ಸಮರ ತಾರಕಕ್ಕೇರಿತ್ತು. ಒಂದೊಮ್ಮೆ ಟ್ರಂಪ್ ಅವರು ಅಧ್ಯಕ್ಷರಾದರೆ, ಚೀನಾದ ಓಘ ಅಷ್ಟರಮಟ್ಟಿಗೆ ತಗ್ಗಬಹುದು. ಚೀನಾ ಕೇಂದ್ರಿತ ಪೂರೈಕೆ ಜಾಲವನ್ನು ತಪ್ಪಿಸಲು ಟ್ರಂಪ್ ಮುಂದಡಿಯಿಟ್ಟರೆ, ಹೆಚ್ಚಿನ ಹೂಡಿಕೆ ಭಾರತದತ್ತ ಬರಬಹುದು. ತೈವಾನ್ ಕುರಿತು ಚೀನಾ ಮೃದು ನಿಲುವು ತಳೆಯಬಹುದು.

ಈ ಚುನಾವಣೆಯಲ್ಲಿ ಆರ್ಥಿಕತೆಯ ವಿಷಯಕ್ಕಿಂತ ವಲಸೆಯ ವಿಷಯ ಹೆಚ್ಚು ಚರ್ಚೆಗೆ ಒಳಗಾಗಿದೆ. ಅಮೆರಿಕದಲ್ಲಿರುವ ಅತಿದೊಡ್ಡ ವಲಸಿಗ ಸಮುದಾಯಗಳ ಪೈಕಿ ಭಾರತೀಯರು ಎರಡನೇ ಸ್ಥಾನದಲ್ಲಿದ್ದಾರೆ. ಸಾಮಾನ್ಯವಾಗಿ ಭಾರತೀಯ ಅಮೆರಿಕನ್ನರು ಡೆಮಾಕ್ರಟಿಕ್ ಪಕ್ಷವನ್ನು ಬೆಂಬಲಿಸುತ್ತಾರೆ. ವಲಸಿಗರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ವಿಷಯದಲ್ಲಿ ಡೆಮಾಕ್ರಟಿಕ್ ಪಕ್ಷ ಉದಾರ ನೀತಿ ಅನುಸರಿಸುತ್ತದೆ ಎಂಬುದು ಅದಕ್ಕೆ ಕಾರಣ. ಆದರೆ ಇತ್ತೀಚಿನ ವರ್ಷಗಳಲ್ಲಿ ರಿಪಬ್ಲಿಕನ್ ಪಕ್ಷವನ್ನು ಕೂಡ ಭಾರತೀಯ ಅಮೆರಿಕನ್ನರು ಬೆಂಬಲಿಸುತ್ತಿದ್ದಾರೆ. ಹಾಗಾಗಿ, ನಿರ್ಣಾಯಕ ರಾಜ್ಯಗಳಲ್ಲಿ ಭಾರತೀಯ ಅಮೆರಿಕನ್ನರ ಮತ ಪಡೆಯಲು ಎರಡೂ ಪಕ್ಷಗಳು ಪ್ರಯತ್ನಿಸುತ್ತಿವೆ.

ಕಮಲಾ ಅವರ ತಾಯಿ ಭಾರತ ಮೂಲದವರು ಎಂಬ ಅಂಶ ಭಾರತೀಯ ಅಮೆರಿಕನ್ನರನ್ನು ಈ ಚುನಾವಣೆಯಲ್ಲಿ ಕಮಲಾ ಅವರತ್ತ ಸೆಳೆಯಬಹುದು ಎಂಬುದು ಖರೆಯಾದರೂ, ಭಾರತದೊಂದಿಗೆ ಬೆಸೆದುಕೊಳ್ಳುವ, ಭಾರತಕ್ಕೆ ಅಗತ್ಯ ಸಹಕಾರ ನೀಡುವ ಕುರಿತು ಕಮಲಾ ಮಾತನಾಡಿದ್ದು ಕಡಿಮೆ. ಹೆಚ್ಚೆಂದರೆ ಅವರ ಅವಧಿಯಲ್ಲಿ ಭಾರತದ ಐ.ಟಿ. ಸೇವಾ ವಲಯಕ್ಕೆ ನಿರ್ಣಾಯಕವಾಗಿರುವ ಎಚ್‌1ಬಿ ವೀಸಾಗಳ ಸಂಖ್ಯೆ ಹೆಚ್ಚಬಹುದು.

ಟ್ರಂಪ್ ಅವರು ದೀಪಾವಳಿಗೆ ಶುಭ ಕೋರುವಾಗ, ಬಾಂಗ್ಲಾದೇಶ ಸೇರಿದಂತೆ ಜಗತ್ತಿನ ವಿವಿಧ ಭಾಗಗಳಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಖಂಡಿಸಿದ್ದಾರೆ. ಇಂತಹ ಮಾತನ್ನು ಕಮಲಾ ಅವರಿಂದ ಅಪೇಕ್ಷಿಸಲು ಸಾಧ್ಯವಿಲ್ಲ. ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ, ಕಮಲಾ ಅವರನ್ನು ಭಾರತ ಆಹ್ವಾನಿಸಿದರೂ, ಅವರು ಭಾರತಕ್ಕೆ ಭೇಟಿ ನೀಡಲಿಲ್ಲ!

ಸಾಮಾನ್ಯವಾಗಿ ಡೆಮಾಕ್ರಟಿಕ್ ಪಕ್ಷದ ಆಡಳಿತ ಇದ್ದಾಗ, ಮಾನವ ಹಕ್ಕುಗಳ ಉಲ್ಲಂಘನೆ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಎಂಬ ವಿಷಯಗಳ ಕುರಿತು ಕೆಲವು ಸಂಸ್ಥೆಗಳು ರೂಪಿಸುವ ಭಾರತ ವಿರೋಧಿ ಆಖ್ಯಾನವನ್ನು ನೆಚ್ಚಿಕೊಂಡು, ಭಾರತದ ಆಂತರಿಕ ವಿಷಯಗಳ ಕುರಿತು ಅಮೆರಿಕ ಮಾತನಾಡುತ್ತದೆ. ಇದು ಒಬಾಮ ಮತ್ತು ಬೈಡನ್ ಅವಧಿಗಳಲ್ಲಿ ಆಗಿದೆ. ಜಗತ್ತಿನ ಉಸಾಬರಿ ತಮಗೆ ಬೇಡ ಎಂಬ ನಿಲುವು ಹೊಂದಿರುವ ಟ್ರಂಪ್ ಅವರ ಅವಧಿಯಲ್ಲಿ ಇಂತಹ ಅನವಶ್ಯಕ ಬುದ್ಧಿಮಾತು ಇಲ್ಲವಾಗಬಹುದು.

ಇಷ್ಟಲ್ಲದೆ, ರಕ್ಷಣಾ ವಲಯಕ್ಕೆ ಸಂಬಂಧಿಸಿದ ತಂತ್ರಜ್ಞಾನ ವಿನಿಮಯ, ಆಧುನಿಕ ಯುದ್ಧೋಪಕರಣಗಳ ಮಾರಾಟ, ಕ್ವಾಡ್ ಸಹಭಾಗಿತ್ವದ ವಿಷಯದಲ್ಲಿ ಟ್ರಂಪ್ ಅಥವಾ ಕಮಲಾ ಆಡಳಿತ ಭಿನ್ನವಾಗಿ ವರ್ತಿಸಲಾರದು. ಇದೀಗ ಭಾರತಕ್ಕೆ ಮುಖ್ಯವಾಗಿ ಅಮೆರಿಕದ ಬೆಂಬಲ ಬೇಕಿರುವುದು, ಭಾರತದ ವಿರುದ್ಧ ಕೆನಡಾ ಮಾಡುತ್ತಿರುವ ಆರೋಪದ ವಿಷಯದಲ್ಲಿ. ಈ ಕುರಿತು ಟ್ರಂಪ್ ಅಥವಾ ಕಮಲಾ ಬಹಿರಂಗವಾಗಿ ಏನೂ ಹೇಳಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕದ ಮುಂದಿನ ಅಧ್ಯಕ್ಷರ ನಡುವಿನ ಉತ್ತಮ ಬಾಂಧವ್ಯ ಈ ವಿಷಯದಲ್ಲಿ ಕೆಲಸಕ್ಕೆ ಬರಬಹುದು.

ಮೋದಿ ಅವರ ಜೊತೆ ಟ್ರಂಪ್ ಮತ್ತು ಕಮಲಾ ಅವರು ಈ ಹಿಂದೆ ಕಾಣಿಸಿಕೊಂಡ ರೀತಿಯನ್ನು ಗಮನಿಸಿದಾಗ, ಯಾರಿಂದ ಭಾರತಕ್ಕೆ ಎಷ್ಟು ಸ್ಪಂದನೆ ವ್ಯಕ್ತವಾಗಬಹುದು ಎಂಬುದನ್ನು ಊಹಿಸಬಹುದು.

ಚುರುಮುರಿ

ಬಹುರುಚಿ ಭಾಗ್ಯ

• ಮಣ್ಣೆ ರಾಜು

‘ಅಕ್ಕ ಕೆಫೆ’ ಆರಂಭಿಸುವ ಉತ್ಸಾಹದಲ್ಲಿ ಸಂಘದ ಮಹಿಳೆಯರು ಪೂರ್ವಭಾವಿ ಸಭೆ ಸೇರಿದ್ದರು.

‘ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದು ಅಕ್ಕ ಕೆಫೆ ತೆರೆಯಲು ಸರ್ಕಾರ ನಮಗೆ ಅವಕಾಶ ನೀಡಿದೆ. ನಾವು ಸಮರ್ಥವಾಗಿ ಕೆಫೆಯನ್ನು ಮುನ್ನಡೆಸೋಣ’ ಸಂಘದ ಅಧ್ಯಕ್ಷೆ ಸುಮಿ ಹೇಳಿದಳು.

‘ಇವಳು ಚಿತ್ರಾನ್ನ ಚೆನ್ನಾಗಿ ಮಾಡುತ್ತಾಳೆ, ಚಿತ್ರಾನ್ನ ತಯಾರಿಕೆ ಜವಾಬ್ದಾರಿಯನ್ನು ಇವಳಿಗೇ ವಹಿಸೋಣ’ ಸರೋಜಾಳ ಹೆಸರನ್ನು ಸೂಚಿಸಿದಳು ಮಂಗಳಾ.

‘ಇಡ್ಲಿ, ವಡೆ, ದೋಸೆ ಯಾರು ಮಾಡ್ತೀರಿ?’ ಸುಮಿ ಕೇಳಿದಳು.

‘ಈ ಲಕ್ಷ್ಮಿಗೆ ದೋಸೆಗೂ ಇಡ್ಲಿಗೂ ವ್ಯತ್ಯಾಸವೇ ಗೊತ್ತಿಲ್ಲ. ಇವಳು ಮಾಡುವ ದೋಸೆಯು ಇಡ್ಲಿಯ ಗಾತ್ರ ಇರುತ್ತದೆ, ಇಡ್ಲಿಯು ದೋಸೆಯಂತೆ ತೆಳುವಾಗಿ ಇರುತ್ತದೆ. ಇವಳಿಗೆ ದೋಸೆ ಹೊಣೆಗಾರಿಕೆ ವಹಿಸಬೇಡಿ’ ರೇಗಿಸಿದಳು ನಾಗರತ್ನ.

ಕೋಪಗೊಂಡ ಲಕ್ಷ್ಮಿ, ‘ನೀನೇ ಇಡ್ಲಿ, ದೋಸೆ ಮಾಡು, ನಾನು ಚಟ್ನಿ ರುಬ್ಬುತ್ತೇನೆ’ ಎಂದಳು.

‘ಅಡುಗೆ, ತಿಂಡಿ ಮಾಡಿದರೆ ಸಾಕಾಗೋದಿಲ್ಲ, ಗ್ರಾಹಕರನ್ನು ಕೆಫೆಗೆ ಸೆಳೆಯುವ ವ್ಯವಹಾರ ಜ್ಞಾನ ರೂಢಿಸಿಕೊಳ್ಳಬೇಕು’ ಅಂದಳು ಸುಮಿ.

‘ಮನೆರುಚಿಯ ಊಟ, ತಿಂಡಿ ಲಭ್ಯ’ ಅಂತ ಬೋರ್ಡ್ ಹಾಕಿ ಗ್ರಾಹಕರನ್ನು ಆಕರ್ಷಿಸೋಣ’.

‘ಬೇಡ, ಮನೆ ಊಟ, ತಿಂಡಿ ಬೇಜಾರಾದವರು ಇಲ್ಲೂ ಅದೇ ರುಚಿ ಅಂದುಕೊಂಡು ಬರೋದಿಲ್ಲ. ನಾವೆಲ್ಲಾ ಸೇರಿ ಮಾಡೋದ್ರಿಂದ ‘ಬಹುರುಚಿ ಭಾಗ್ಯ’ ಅಂತ ಬೋರ್ಡ್ ಬರೆಯೋಣ’ ಸವಿತಾಳ ಸಲಹೆ.

‘ನಮ್ಮ ನಮ್ಮ ಫ್ಯಾಮಿಲಿಗಳು ಕೆಫೆಗೆ ಬರುವುದನ್ನು ಕಡ್ಡಾಯ ಮಾಡಿದರೆ ಇತರ ಫ್ಯಾಮಿಲಿಗಳೂ ಬರ್ತವೆ’.

‘ನೀವ್ಯಾರೂ ಮನೆಯಲ್ಲಿ ಅಡುಗೆ ಮಾಡಬೇಡಿ. ನಿಮ್ಮ ಗಂಡ, ಮಕ್ಕಳು, ಅತ್ತೆ, ಮಾವ ಕೆಫೆಗೇ ಬಂದು ದುಡ್ಡು ಕೊಟ್ಟು ಊಟ, ತಿಂಡಿ ತಿಂದು, ಹತ್ತಾರು ಜನರಿಗೆ ಪ್ರಚಾರ ಮಾಡಲು ತಿಳಿಸಿ...’ ಎಂದು ಸುಮಿ ಸಲಹೆ ನೀಡಿದಳು.

ಸಂಗತ

ಅಕ್ಷರ ಲೋಕಕ್ಕೆ ಎಐ ಸವಾಲು

ಎಐ ಬಹಳಷ್ಟು ಜನರಿಗೆ ಘೋಸ್ಟ್ ಬರಹಗಾರ ಆಗಿರುವ ಈ ಸಂದರ್ಭದಲ್ಲಿ, ಶಿಕ್ಷಕರ ಮೌಖಿಕ ಸಾಮರ್ಥ್ಯಗಳಿಗೆ ಸಮಾನ ಒತ್ತು ನೀಡುವುದು ಅತ್ಯಗತ್ಯ

• ಶಿವಲಿಂಗಸ್ವಾಮಿ ಎಚ್.ಕೆ.

ಮಾನವನ ವಿಕಾಸದಲ್ಲಿ ಆತನ ವಿಶೇಷ ಗುಣವಾಗಿ ಗುರುತಿಸಲ್ಪಟ್ಟಿರುವುದು ಬರವಣಿಗೆಯ ಸಾಮರ್ಥ್ಯ. ತಮ್ಮ ಈ ಸಾಮರ್ಥ್ಯದ ಬಗ್ಗೆ ಬೀಗುತ್ತಿದ್ದ ಜನರಿಗೆ ಈಗ ಸವಾಲಾಗಿ ಕಂಡುಬರುತ್ತಿರುವುದು, ಕೃತಕ ಬುದ್ಧಿಮತ್ತೆಯಿಂದ (ಎಐ) ಸೃಷ್ಟಿಯಾಗಿರುವ ಬರಹಗಾರರು ಮತ್ತು ಸಂಶೋಧಕರ ಮತ್ತೊಂದು ಪರ್ಯಾಯ ಲೋಕ.

ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಮಂದಿಯಲ್ಲಿ ಇದ್ದಕ್ಕಿದ್ದ ಹಾಗೆ ಮೂಡಿಬಂದಿರುವ ಆತ್ಮವಿಶ್ವಾಸ ಎಷ್ಟಿದೆಯೆಂದರೆ, ಎಐ ಮೂಲಕ ಸೂರ್ಯನ ಕೆಳಗಿರುವ ಯಾವುದೇ ವಿಷಯದ ಬಗ್ಗೆ ಏನನ್ನಾದರೂ ಸರಿ ಬಹಳ ಕರಾರುವಾಕ್ಕಾಗಿ ರಚಿಸಬಹುದು ಎಂಬ ಭಾವನೆಯಿದೆ. ಗ್ರಾಹಕ ಕೇಳಿದ್ದನ್ನು ಎಐ ಅರೆಗಳಿಗೆಯಲ್ಲಿ ನೀಡಬಲ್ಲದು. ಇದು ಕವಿತೆಗಳ ರಚನಾ ಮಾರ್ಗವನ್ನು, ಸಾಹಿತ್ಯದ ವಿವಿಧ ನಿರೂಪಣಾ ಶೈಲಿಗಳನ್ನು ಅರ್ಥಮಾಡಿಕೊಳ್ಳುತ್ತದೆ ಮತ್ತು ಸಂಶೋಧನಾ ಪ್ರಬಂಧಗಳನ್ನು ನಿಮಿಷಗಳಲ್ಲಿ ಅರಗಿಸಿಕೊಂಡು ಉನ್ನತ ಮಟ್ಟದ ಕ್ರಾಸ್-ರೆಫರೆನ್ಸ್ ಮಾಡಿಕೊಡಬಲ್ಲದು. ಇಲ್ಲಿ ವೇಗವಷ್ಟೇ ಮುಖ್ಯವಲ್ಲ, ಇದು ತಪ್ಪುಗಳಾಗದಂತೆ ನೋಡಿಕೊಳ್ಳುತ್ತದೆ ಮತ್ತು ನಾವು ಟೈಪ್ ಮಾಡುವ ಶ್ರಮವನ್ನೂ ತಪ್ಪಿಸುತ್ತದೆ. ಇದನ್ನೆಲ್ಲಾ ಗಮನದಲ್ಲಿಟ್ಟು ನೋಡುವುದಾದರೆ ಕವಿ, ಕಾದಂಬರಿಕಾರ, ಸಂಶೋಧಕ ಎಂಬೆಲ್ಲ ಹಣೆಪಟ್ಟಿಗಳು ಯಾವುದೇ ಅನನ್ಯ ಸಾಮರ್ಥ್ಯವನ್ನು ಬಿಂಬಿಸದೆ ಎಲ್ಲರಿಗೂ ಅನ್ವಯಿಸಬಹುದಾಗಿದೆ.

ಎಐ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಅದ್ಭುತ ಫಲಿತಾಂಶಗಳನ್ನು ನೀಡುತ್ತಿದ್ದರೆ ಮಾನವನ ಸೃಜನಶೀಲತೆ, ಸಂಶೋಧನಾ ಬದ್ಧತೆ ಮತ್ತು ಅವನ ಅನನ್ಯ ಸಾಮರ್ಥ್ಯವಾದ ಬರವಣಿಗೆಯು ಮುಂದೆ ಗುರುತಿಸಲ್ಪಡುತ್ತವೆಯೇ? ಯಂತ್ರವೇ ಎಲ್ಲವನ್ನೂ ಸೃಜಿಸುವುದಾದರೆ ಮಾನವನ ಸಾಹಿತ್ಯದ ಕರಕೌಶಲದ ಮೌಲ್ಯಕ್ಕೆ ಏನಾಗುತ್ತದೆ? ಬರೆಯುವ ಸಾಮರ್ಥ್ಯವು ಲೋಕಾನುಭವ ಮತ್ತು ಬೌದ್ಧಿಕ ಮೂಲದ ಹಿನ್ನೆಲೆಯಿಂದ ಹೊರಹೊಮ್ಮದೆ ಯಂತ್ರದ ಮೂಲಕ ಹುಟ್ಟಿದರೆ ಎಐ ಯುಗದಲ್ಲಿ ಬರವಣಿಗೆ, ಬರಹಗಾರ ಎಂಬಂಥ ಅಸ್ಮಿತೆಗಳಿಗೆ ಬೆಲೆಯಿರುತ್ತದೆಯೇ?

ಇತ್ತೀಚಿನ ದಿನಗಳಲ್ಲಿ ಎಲ್ಲ ರೀತಿಯ ಬರವಣಿಗೆಯನ್ನು ಎಐ ಮಾಡುತ್ತಿರುವುದರಿಂದ ಕರ್ತೃತ್ವವನ್ನು ನಿಖರವಾಗಿ ಗುರುತಿಸುವುದು ಕಷ್ಟದ ಕೆಲಸ. ಅಂದರೆ, ಮೇಲ್ನೋಟಕ್ಕೆ ಅಷ್ಟೇನೂ ಪ್ರತಿಭಾವಂತರಲ್ಲದವರು ಅತ್ಯಂತ ಉತ್ಕೃಷ್ಟ ಮಟ್ಟದ ಲೇಖನ, ಕಥೆ ಅಥವಾ ಕವನ ತೋರಿಸಿ ನಮ್ಮ ಪ್ರತಿಕ್ರಿಯೆ ಕೇಳಿದರೆ ನಾವು ಮೌಲ್ಯಮಾಪನ ಮಾಡಬೇಕಿರುವುದು ಬರವಣಿಗೆಯನ್ನು ಮಾತ್ರ. ‘ನೀವೇ ಬರೆದಿರಾ?’ ಎಂದು ಯಾರೂ ಅನುಮಾನಿಸಿ ಪ್ರಶ್ನಿಸುವುದಿಲ್ಲ. ಹೀಗಿರುವಾಗ, ಶೈಕ್ಷಣಿಕ ವಲಯಕ್ಕೆ ಸವಾಲಾಗುವುದು ನಮ್ಮ ಕಣ್ಣ ಮುಂದಿರುವ ಬರಹದಲ್ಲಿ ಕಂಡುಬರುವ ಪದಗಳು ಆ ವ್ಯಕ್ತಿಯ ಆಳವಾದ ಆಲೋಚನೆಗಳು ಮತ್ತು ಓದಿನಿಂದ ಮೂಡಿಬಂದಿರದೆ, ಎಐನಿಂದ ಯಾಂತ್ರಿಕವಾಗಿ ಬಂದವಾಗಿದ್ದು, ಅದರ ಲಾಭವನ್ನು ಆ ವ್ಯಕ್ತಿಯು ಪಡೆಯುವಂತಹ ಪ್ರಸಂಗಗಳು.

ಒಂದು ವಾಕ್ಯವನ್ನೂ ಸ್ವಂತ ಪರಿಶ್ರಮದಿಂದ ಬರೆಯದೆ, ಪೂರಾ ಲೇಖನವನ್ನು ಎಐನಿಂದ ಬರೆಸಿ, ಅದು ತಮ್ಮ ಸಾಧನೆ ಎಂದು ಬೀಗುವ ಪ್ರಸಂಗಗಳು ಈಗ ಹೆಚ್ಚಾಗಿ ಕೇಳಿಬರುತ್ತಿವೆ. ಸಾಂಪ್ರದಾಯಿಕವಾಗಿ ಹೇಳುವುದಾದರೆ, ಕಥೆ, ಕಾದಂಬರಿ, ಸಂಶೋಧನಾ ಲೇಖನದಂತಹವನ್ನು ರಚಿಸಲು ಪ್ರತಿ ವ್ಯಕ್ತಿಯು ತನ್ನ ಸಮಯ, ಬುದ್ಧಿಶಕ್ತಿ ಮತ್ತು ಭಾವನೆಗಳನ್ನು ಶ್ರದ್ಧೆಯಿಂದ ಹೂಡಿಕೆ ಮಾಡಬೇಕಿತ್ತು. ಈಗ ಕೃತಕ ಬುದ್ಧಿಮತ್ತೆಯೇ ‘ಬರಹಗಾರ’ ಆಗಿರುವಾಗ, ಮಾನವ ಹೂಡಿಕೆಯು ಸಂಪೂರ್ಣವಾಗಿ ಇಲ್ಲದಂತಾಗಿ ನಿಜವಾಗಿಯೂ ಪ್ರತಿಭಾವಂತ ಬರಗಾರರನ್ನು ಗುರುತಿಸುವುದು ಕಠಿಣವಾದ ಕೆಲಸವಾಗಿದೆ.

ಇಂದಿನ ಶೈಕ್ಷಣಿಕ ಜಗತ್ತಿನಲ್ಲಿ ಪದೋನ್ನತಿಗಳು ಅಧ್ಯಾಪಕರು ಮಾಡಿರುವ ಪ್ರಕಟಣೆಗಳ ಪ್ರಮಾಣವನ್ನು ಆಧರಿಸಿರುತ್ತವೆಯೇ ವಿನಾ ಬೋಧನೆಯಲ್ಲಿರುವ ಸ್ವಂತಿಕೆಯನ್ನಲ್ಲ. ಎಐ- ಚಾಲಿತ ಬರವಣಿಗೆಯ ಗಮನಾರ್ಹ ಏರಿಕೆಯೊಂದಿಗೆ, ಅನೇಕ ಶೈಕ್ಷಣಿಕ ಪ್ರಕಟಣೆಗಳು ಈಗ ಅಲ್ಗಾರಿದಮ್‌ಗಳಿಂದ ಉತ್ಪತ್ತಿಯಾಗುತ್ತಿವೆ. ಆದರೂ ಕೃತಿಚೌರ್ಯ ಆಗಿರಬಾರದು ಎಂಬ ಏಕೈಕ ಕರಾರಿನೊಂದಿಗೆ ಎಲ್ಲವೂ ಮಾನ್ಯವಾಗುತ್ತವೆ. ಬೌದ್ಧಿಕ ಪ್ರಯತ್ನ ಮತ್ತು ಶ್ರದ್ಧೆಯ ಔಟ್‌ಪುಟ್‌ನತ್ತ ಗಮನಹರಿಸಲು ಇದರಿಂದ ಸಾಧ್ಯವಾಗದು ಮತ್ತು ಶೈಕ್ಷಣಿಕ ಸಾಧನೆಗಳ ಸಮಗ್ರತೆ ಹಾಗೂ ಪ್ರಕಟಣೆಗಳ ಗುಣಮಟ್ಟ ಕಾಲಕ್ರಮೇಣ ದುರ್ಬಲಗೊಳ್ಳುತ್ತವೆ.

ಎಐ ಬಹಳಷ್ಟು ಜನರಿಗೆ ಘೋಸ್ಟ್ ಬರಹಗಾರ ಆಗಿರುವ ಸಂದರ್ಭದಲ್ಲಿ, ಶಿಕ್ಷಕರ ಮೌಖಿಕ ಸಾಮರ್ಥ್ಯಗಳಿಗೆ ಸಮಾನ ಒತ್ತು ನೀಡುವುದು ಅತ್ಯಗತ್ಯ. ಪ್ರಕಟಣೆಗಳನ್ನು ಮೌಲ್ಯಮಾಪನ ಮಾಡುವುದರ ಜೊತೆಗೆ ಅವರ ಸಂವಹನ ಕೌಶಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಬೇಕು. ಸಂಶೋಧನೆ ಮತ್ತು ಪ್ರಕಟಣೆ ಮುಖ್ಯವಾಗಿದ್ದರೂ, ಒಬ್ಬ ಅಧ್ಯಾಪಕನ ಮೂಲ ಪ್ರವೃತ್ತಿಯು ಸಂಕೀರ್ಣ ವಿಚಾರಗಳನ್ನು ತಿಳಿಸುವ, ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ಮತ್ತು ಕ್ರಿಯಾತ್ಮಕ ಕಲಿಕೆಯ ವಾತಾವರಣವನ್ನು ಬೆಳೆಸುವುದರತ್ತ ಇರಬೇಕು.

ಶಿಕ್ಷಣ ಕ್ಷೇತ್ರದಲ್ಲಿ ಅತಿ ತುರ್ತಾಗಿ ಎಲ್ಲರ ಅರಿವಿಗೆ ಬರಬೇಕಿರುವ ವಿಚಾರವೆಂದರೆ, ನಮಗೆ ಆಧುನಿಕಪೂರ್ವದಲ್ಲಿ ಒಂದು ಮೌಖಿಕ ಪರಂಪರೆ ಇತ್ತು. ಈಗ ಅದೇ ಪರಂಪರೆಗೆ ಬೇರೆ ಸ್ವರೂಪದಲ್ಲಿ ಹಿಂದಿರುಗಬೇಕಿದೆ ಎಂಬುದು. ಏಕೆಂದರೆ, ನೂರಾರು ಲೇಖನಗಳನ್ನು ಪ್ರಕಟಿಸಿ ಎಲ್ಲ ರೀತಿಯ ಪ್ರಶಂಸೆಗಳಿಸಿ ಕಡೆಗೆ ಬಾಯಿ ಬಿಟ್ಟರೆ ಬಣ್ಣಗೇಡು ಎಂಬಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ನಮ್ಮ ಸಂಶೋಧನಾ ಪ್ರಕಟಣೆಗಳು ಒಳಗೊಂಡಿರುವ ಪ್ರಶ್ನೆಗಳು, ಕುತೂಹಲಗಳು ಮತ್ತು ಪರಿಕಲ್ಪನೆಗಳನ್ನು ಮೌಖಿಕವಾಗಿ ಸಹ ಸ್ಪಷ್ಟಪಡಿಸಲು ಸಾಧ್ಯವಾದರೆ ಮಾತ್ರ ಎಐ ಜಗತ್ತಿನಲ್ಲಿ ನಮ್ಮ ಅಸ್ತಿತ್ವಕ್ಕೆ ಮಾನ್ಯತೆ ದೊರೆಯುವುದು.

ವಾಚಕರ ವಾಣಿ

ಅಗಲಿದವರ ತೇಜೋವಧೆ ಸರಿಯೇ?

ನಟ ಹಾಗೂ ಸಿನಿಮಾ ನಿರ್ದೇಶಕ ಗುರುಪ್ರಸಾದ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾದ ಸುದ್ದಿಯನ್ನು ಭಾನುವಾರ ಮಧ್ಯಾಹ್ನ ಎಲ್ಲ ಸುದ್ದಿ ಚಾನೆಲ್‌ಗಳು ಬಿತ್ತರಿಸುತ್ತಿದ್ದವು. ಒಂದು ಚಾನೆಲ್ ಸುದ್ದಿ ನಿರೂಪಕ ಈ ಸಂದರ್ಭದಲ್ಲಿ, ಖ್ಯಾತನಾಮರು, ಸಿನಿಮಾ ಮಂದಿ, ಬರಹಗಾರರಿಗೆ ಕರೆ ಮಾಡಿ, ಗುರುಪ್ರಸಾದ್ ಅವರ ಸಿನಿಮಾ ಜೀವನ ಹಾಗೂ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದಂತೆ ಅಪ್ರಬುದ್ಧ ಪ್ರಶ್ನೆಗಳನ್ನು ಕೇಳುತ್ತಿದ್ದುದನ್ನು ನೋಡಿ ಬೇಸರವಾಯಿತು. ಆ ನಿರೂಪಕನ ಪ್ರಶ್ನೆಗಳಿಗೆ ಬರಹಗಾರರೊಬ್ಬರು, ‘ಗುರುಪ್ರಸಾದ್ ಅವರಿಗೆ ಕುಡಿತದ ಚಟವಿತ್ತು, ಸಿನಿಮಾ ಸೆಟ್‌ಗೆ ಲೇಟಾಗಿ ಬರುತ್ತಿದ್ದರು, ಯಾರ ಜೊತೆಗೂ ಅಷ್ಟಾಗಿ ಬೆರೆಯುತ್ತಿರಲಿಲ್ಲ, ಪ್ರತಿ ದಿನದ ಖರ್ಚಿಗೂ ಅವರ ಬಳಿ ಹಣ ಇರುತ್ತಿರಲಿಲ್ಲ ಅನ್ನಿಸುತ್ತದೆ, ಅವರಿಗೆ ಆತ್ಮೀಯ ಸ್ನೇಹಿತರು ಇರಲಿಲ್ಲ ಅನ್ನಿಸುತ್ತದೆ’ ಎಂದೆಲ್ಲ, ಅಗಲಿದ ಜೀವದ ಬಗ್ಗೆ ಮಾತನಾಡಿ ‘ಬುದ್ಧಿವಂತಿಕೆ’ ತೋರಿಸಿದರು. ಅಗಲಿದ ವ್ಯಕ್ತಿಯ ಬಗ್ಗೆ ಹೀಗೆಲ್ಲಾ ಮಾತನಾಡುವ ಪ್ರವೃತ್ತಿ ನಿಲ್ಲಬೇಕು.

ಗುರುಪ್ರಸಾದ್ ಅವರ ವೈಯಕ್ತಿಕ ಜೀವನ ಬದಿಗಿರಲಿ. ಅವರು ಕನ್ನಡ ಸಿನಿಮಾ ಲೋಕಕ್ಕೆ ತೋರಿಸಿದ ಹೊಸ ದಿಕ್ಕು, ನೈಜತೆ ತುಂಬಿದ ಸಂಭಾಷಣೆ, ವಾಸ್ತವ ಚಿತ್ರಣದ ನಿರೂಪಣೆ, ಸಮಾಜದ ಅಂಕುಡೊಂಕನ್ನು ಅಚ್ಚುಕಟ್ಟಾಗಿ ಸೆರೆಹಿಡಿಯುತ್ತಿದ್ದ ಅಪರೂಪದ ವ್ಯಕ್ತಿಯಾಗಿದ್ದರು. ಅಂತಹವರು ಅಕಾಲದಲ್ಲಿ ನಮ್ಮನ್ನು ಅಗಲಿರುವುದು ಕನ್ನಡ ಸಿನಿಮಾ ಲೋಕಕ್ಕೆ ದೊಡ್ಡ ಆಘಾತ ಉಂಟುಮಾಡಿದ ಸಂಗತಿ.

ಬಸನಗೌಡ ಪಾಟೀಲ, ಯರಗುಪ್ಪಿ

ಮರಳು ಗಣಿಗಾರಿಕೆ: ಬೇಕಾಗಿದೆ ಎಚ್ಚರ

ದೀಪಾವಳಿ ಪ್ರಯುಕ್ತ ವಾಹನವನ್ನು ತೊಳೆಯಲು ನದಿಗೆ ತೆರಳಿದ್ದ ಹದಿಹರೆಯದ ಬಾಲಕ ಮತ್ತು ಆತನ ಚಿಕ್ಕಪ್ಪ, ಮರಳಿಗಾಗಿ ನದಿಯಲ್ಲಿ ತೋಡಿದ್ದ ಗುಂಡಿಯಲ್ಲಿ ಮುಳುಗಿ ಮೃತಪಟ್ಟಿರುವ ದುರಂತವು ಹರಿಹರ ಹೊರವಲಯದ ಗುತ್ತೂರು ಬಳಿ ನಡೆದಿರುವುದು ಅತೀವ ದುಃಖಕರ ಸಂಗತಿ. ಈ ಭಾಗದಲ್ಲಿ ಹರಿಯುವ ತುಂಗಭದ್ರಾ ನದಿಯ ಪಾತ್ರದಲ್ಲಿ ಹಗಲು ಇರುಳೆನ್ನದೆ ಮರಳು ಮತ್ತು ಮಣ್ಣಿನ ಗಣಿಗಾರಿಕೆ ನಡೆಯುತ್ತಿದೆ. ಅದಕ್ಕಾಗಿ ತೋಡುವ ಗುಂಡಿಗಳನ್ನು ಬಳಿಕ ಮುಚ್ಚದೆ ಹಾಗೇ ಬಿಡಲಾಗುತ್ತಿದೆ. ಈ ಬಗ್ಗೆ ನದಿಪಾತ್ರದಲ್ಲಿ ಇರುವ ಗ್ರಾಮಸ್ಥರು ಯಾವುದೇ ವಿರೋಧ ವ್ಯಕ್ತಪಡಿಸದೆ ಮೌನವಾಗಿದ್ದು, ಇಂತಹ ಗುಂಡಿಗಳಲ್ಲಿ ಸಿಲುಕಿ ಜಾನುವಾರುಗಳು ಮತ್ತು ಜನರ ಪ್ರಾಣಹಾನಿ ಸಂಭವಿಸಿದಾಗ ಮಾತ್ರ ಸರ್ಕಾರವನ್ನು ದೂಷಿಸುವುದು ಎಷ್ಟು ಸರಿ?

ಜನರ ಜೀವನಾಡಿಯಾಗಿರುವ ನದಿಗಳು ಹಾಗೂ ಅವುಗಳ ತಟಗಳನ್ನು ಸಂರಕ್ಷಿಸಲು ಕಟಿಬದ್ಧರಾಗೋಣ.

ಜಬೀವುಲ್ಲಾ ಟಿ., ದಾವಣಗೆರೆ

ಪುಸ್ತಕೋದ್ಯಮದ ಸಂಕಷ್ಟ ಅರಿವಿಗೆ ಬರಲಿ

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಹಿಂದಿನ ಮಾರ್ಚ್ ತಿಂಗಳಲ್ಲಿ ಪುಸ್ತಕ ಖರೀದಿಸಿರುವ ಬಾಬ್ತು ₹13 ಕೋಟಿಯನ್ನು ಲೇಖಕರು, ಪ್ರಕಾಶಕರಿಗೆ ಇನ್ನೂ ನೀಡದೆ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ. ಪುಟವಾರು ಬೆಲೆ ಹೆಚ್ಚಿಸಿ 8 ವರ್ಷ ಕಳೆದರೂ, ಕಾಗದದ ಬೆಲೆ ಗಗನಕ್ಕೇರಿದ್ದರೂ ಇದನ್ನು ಗಣನೆಗೇ ತೆಗೆದುಕೊಂಡಿಲ್ಲ. ಕೆಲವು ಪುಸ್ತಕ ಖರೀದಿ ಯೋಜನೆಗಳು ಸ್ಥಗಿತವಾಗಿದ್ದು, ಈಗ ಸಗಟು ಪುಸ್ತಕ ಖರೀದಿಯನ್ನೂ ನಿಲ್ಲಿಸುವ ಪ್ರಯತ್ನ ನಡೆದಿದೆ.

ಪುಸ್ತಕೋದ್ಯಮದಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡಿರುವ ಯಾರೊಬ್ಬರನ್ನೂ ರಾಜ್ಯೋತ್ಸವ ಪ್ರಶಸ್ತಿ ಅಥವಾ ಸುವರ್ಣ ಸಂಭ್ರಮ ಪ್ರಶಸ್ತಿಗೆ ಪರಿಗಣಿಸಿಲ್ಲ. ಬಜೆಟ್‌ನಲ್ಲಿ ಇಲಾಖೆಗೆ ಅನುದಾನ ಕಡಿತ ಮಾಡಲಾಗುತ್ತದೆ. ಇಷ್ಟಾದರೂ ರಾಜ್ಯೋತ್ಸವದ ದಿನದಂದು ಸಚಿವರು ಕನ್ನಡದ ಮೇಲೆ ಅಪಾರವಾದ ಪ್ರೀತಿ ವ್ಯಕ್ತಪಡಿಸುತ್ತಾ ಮಾಡುವ ಭಾಷಣಗಳನ್ನು ಕೇಳಿದರೆ ಆಶ್ಚರ್ಯವಾಗುತ್ತದೆ. ಸಾಹಿತಿಗಳು ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಿಲ್ಲ. ಪುಸ್ತಕೋದ್ಯಮ ಅನಾಥವಾಗುತ್ತಿದೆ. ನಮ್ಮ ಸಂಕಟವನ್ನು ಅಧಿಕಾರಸ್ಥರು ಅರ್ಥ ಮಾಡಿಕೊಳ್ಳಬೇಕಾಗಿದೆ.

ನಿಡಸಾಲೆ ಪುಟ್ಟಸ್ವಾಮಯ್ಯ, ಬೆಂಗಳೂರು

ವಕ್ಫ್ ಆಸ್ತಿ: ನಡೆಯಬೇಕಿದೆ ತನಿಖೆ

ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳ ರೈತರಿಗೆ ಅವರ ಜಮೀನಿನ ಮಾಲೀಕತ್ವವು ವಕ್ಫ್ ಮಂಡಳಿಗೆ ಸೇರಿದ್ದೆಂದು ನೋಟಿಸ್ ಜಾರಿ ಮಾಡಿದ ಕಂದಾಯ ಇಲಾಖೆಯ ಕ್ರಮ ದುಡುಕಿನದ್ದಾಗಿದೆ. ಇದರಿಂದ ರೈತರು ಸಹಜವಾಗಿ ಆತಂಕಕ್ಕೆ ಗುರಿಯಾಗಿದ್ದಾರೆ. ಇಂತಹ ಗೊಂದಲಗಳು ಹೊಸವೇನಲ್ಲ. ತಮಿಳುನಾಡಿನ ತಿರುಚಿನಾಪಳ್ಳಿ ಜಿಲ್ಲೆಯ ತಿರುಚೆಂತುರಯ್‌ನ 1,500 ವರ್ಷಗಳಷ್ಟು ಹಳೆಯದಾದ ಸುಂದರೇಶ್ವರ ದೇವಾಲಯವೂ ಸೇರಿದಂತೆ ಗ್ರಾಮದ ಎಲ್ಲಾ ಜಮೀನು ವಕ್ಫ್ ಮಂಡಳಿಗೆ ಸೇರಿದ್ದೆಂದು ದಾಖಲೆಗಳಲ್ಲಿ ನಮೂದಿಸಿರುವುದಾಗಿ ವರದಿಯಾಗಿತ್ತು. ನಮ್ಮ ರಾಜ್ಯದ 48 ಲಕ್ಷ ಪಹಣಿಗಳು ಇನ್ನೂ ಸತ್ತವರ ಹೆಸರಿನಲ್ಲಿ ಇರುವುದಾಗಿ ಕಂದಾಯ ಸಚಿವರೇ ಇತ್ತೀಚೆಗೆ ಬೇಸರ ವ್ಯಕ್ತಪಡಿಸಿದ್ದರು. ಇಂತಹ ಎಡವಟ್ಟುಗಳ ಮುಂದುವರಿದ ಭಾಗವಾಗಿ ಇದೀಗ ಕಂದಾಯ ಇಲಾಖೆಯಿಂದ ರೈತರಿಗೆ ನೋಟಿಸ್ ಜಾರಿಯಾಗಿದೆ.

ಈ ಬೆಳವಣಿಗೆಯನ್ನು ರಾಜಕಾರಣಿಗಳು ತಮ್ಮ ರಾಜಕೀಯ ಲಾಭಕ್ಕಾಗಿ ವಕ್ಫ್ ಮಂಡಳಿ ವರ್ಸಸ್ ರೈತರು ಅಥವಾ ಹಿಂದೂಗಳು ವರ್ಸಸ್ ಮುಸ್ಲಿಮರ ನಡುವಿನ ಸಂಘರ್ಷದಂತೆ ಬಿಂಬಿಸುತ್ತಿರುವುದು ದುರದೃಷ್ಟಕರ. ವಕ್ಫ್ ಮಂಡಳಿಗೆ ಸಂಘರ್ಷ ಇರುವುದು ಮಂಡಳಿಯ ಆಸ್ತಿಯನ್ನು ಅಕ್ರಮವಾಗಿ ಕಬಳಿಸಿರುವ ಪ್ರಭಾವಿ ಮುಸ್ಲಿಂ ಮುಖಂಡರು ಹಾಗೂ ಈ ಕಬಳಿಕೆಗೆ ಅವರಿಗೆ ಬೆಂಬಲವಾಗಿ ನಿಂತ ಸರ್ಕಾರಿ ಅಧಿಕಾರಿಗಳೊಂದಿಗೆ. ವಾಲ್ಮೀಕಿ ನಿಗಮದ ಅಕ್ರಮದ ಪರಿಣಾಮ ಎದುರಿಸುವವರು ವಾಲ್ಮೀಕಿ ಸಮುದಾಯದ ಬಡವರು. ಭೋವಿ ಅಭಿವೃದ್ಧಿ ನಿಗಮದ ಭ್ರಷ್ಟಾಚಾರದಿಂದ ನಷ್ಟ ಅನುಭವಿಸುವವರು ಬಡ ಭೋವಿ ಸಮುದಾಯದವರು. ಅದೇ ರೀತಿ ವಕ್ಫ್ ಮಂಡಳಿಯ ಅವ್ಯವಹಾರದ ಕಾರಣದಿಂದ ಬಡ ಮುಸ್ಲಿಮರ ಕಲ್ಯಾಣಕ್ಕಾಗಿ ಮೀಸಲಾದ ಅನುದಾನವು ಪ್ರಭಾವಿಗಳ ಪಾಲಾಗಿದೆ. ಈ ಕಾರಣದಿಂದ, ಎಲ್ಲೆಡೆ ವಕ್ಫ್ ಮಂಡಳಿಯ ವಿವಾದವೇ ಸುದ್ದಿಯಾಗಿರುವ ಈ ಸಂದರ್ಭದಲ್ಲಾದರೂ, ನನೆಗುದಿಗೆ ಬಿದ್ದಿರುವ ಮಂಡಳಿಯ ಆಸ್ತಿ ಕಬಳಿಕೆಯ ಬಗ್ಗೆ ಸೂಕ್ತ ತನಿಖೆ ನಡೆದು, ಈ ವಿಷಯ ತಾರ್ಕಿಕ ಅಂತ್ಯ ಕಾಣಲಿ ಎಂದು ಆಶಿಸೋಣ.

ಟಿ.ಜಯರಾಂ, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದಲ್ಲೇ ಸಿ–295 ವಿಮಾನ ತಯಾರು

56 ಏರ್‌ಬಸ್ ಭಾರತಕ್ಕೆ ಮಾರಾಟ ಮಾಡಲಿರುವ ಸಿ–295 ಸೇನಾ ಸರಕು ವಿಮಾನಗಳ ಸಂಖ್ಯೆ

₹21,935 ಕೋಟಿ ಸಿ–295 ವಿಮಾನ ಖರೀದಿಗೆ ಭಾರತದ ರಕ್ಷಣಾ ಸಚಿವಾಲಯ ಮಾಡುತ್ತಿರುವ ವೆಚ್ಚ

40 ವಡೋದರಾದಲ್ಲಿರುವ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್‌ನ ಘಟಕದಲ್ಲಿ ತಯಾರಾಗಲಿರುವ ವಿಮಾನಗಳು

2026ರ ಸೆಪ್ಟೆಂಬರ್ ದೇಶೀಯವಾಗಿ ತಯಾರಾದ ಮೊದಲ ವಿಮಾನ ವಾಯುಪಡೆಗೆ ಸೇರ್ಪಡೆಗೊಳ್ಳಲಿರುವ ವರ್ಷ

16 ಏರ್‌ಬಸ್ ಕಂಪನಿಯು ಸ್ಪೇನ್‌ನಲ್ಲಿರುವ ತನ್ನ ಘಟಕದಲ್ಲಿ ತಯಾರಿಸಿ ಭಾರತೀಯ ವಾಯುಪಡೆಗೆ ನೀಡಲಿರುವ ವಿಮಾನಗಳು

6 ಈಗಾಗಲೇ ವಾಯುಪಡೆಗೆ ಸೇರ್ಪಡೆಗೊಂಡಿರುವ ಸಿ–295 ವಿಮಾನಗಳು

13 ಸಾವಿರ ವಿಮಾನದ ಪ್ರಮುಖ ಭಾಗಗಳು ಸೇರಿದಂತೆ ಭಾರತದಲ್ಲೇ ತಯಾರಾಗಲಿರುವ ಬಿಡಿಭಾಗಗಳ ಸಂಖ್ಯೆ

2031ರ ಆಗಸ್ಟ್ ಎಲ್ಲ 56 ವಿಮಾನಗಳನ್ನು ವಾಯುಪಡೆಗೆ ಹಸ್ತಾಂತರಿಸಲು ನಿಗದಿ ಪಡಿಸಿರುವ ಗಡುವು

ವಿಮಾನ ತಯಾರಿಕೆಗೆ ಮುಂದಡಿ

ರಾಷ್ಟ್ರದ ವಿಮಾನಯಾನ ಮತ್ತು ಸೇನಾ ವಲಯದಲ್ಲಿ ಹೊಸ ಅಧ್ಯಾಯ ಬರೆಯಲು ಭಾರತ ಮುಂದಡಿ ಇಟ್ಟಿದೆ. ಸೇನಾ ಸರಕು ಸಾಗಣೆ ವಿಮಾನಗಳ ತಯಾರಿಕೆಯಲ್ಲಿ ಖಾಸಗಿ ಕಂಪನಿಗಳು ಮೊಟ್ಟ ಮೊದಲ ಬಾರಿಗೆ ಭಾಗಿಯಾಗಿವೆ. ಗುಜರಾತ್‌ನಲ್ಲಿರುವ ಟಾಟಾ ಘಟಕದಲ್ಲಿ ಏರ್‌ಬಸ್‌ನ ಸಿ–295 ವಿಮಾನ ತಯಾರಿಕೆ ಆರಂಭವಾಗಿದೆ. ಇದರಿಂದ 'ಮೇಕ್ ಇನ್ ಇಂಡಿಯಾ'ಗೆ ಉತ್ತೇಜನ ಸಿಗುವುದಲ್ಲದೇ, ಭವಿಷ್ಯದಲ್ಲಿ ವಿಮಾನಯಾನ ಕ್ಷೇತ್ರದಲ್ಲಿ ಹಲವು ಸಾಧ್ಯತೆಗಳು ಅನಾವರಣಗೊಳ್ಳಲಿವೆ ಎನ್ನುವುದು ಕೇಂದ್ರ ಸರ್ಕಾರದ ನಂಬಿಕೆ. ಮುಖ್ಯವಾಗಿ, ಪ್ರಯಾಣಿಕ ವಿಮಾನಗಳ ತಯಾರಿಕೆಯ ತನ್ನ ಕನಸು ಈಡೇರಿಸಿಕೊಳ್ಳುವಲ್ಲಿ ಇದು ಆರಂಭಿಕ ಹೆಜ್ಜೆ ಎಂದೇ ಭಾರತ ಭಾವಿಸಿದೆ

ಪ್ರಜಾವಾಣಿ ವಾರ್ತೆ

ಭಾರತದ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ಮತ್ತು ಸ್ಪೇನ್‌ನ ಏರ್‌ಬಸ್ ಜಂಟಿಯಾಗಿ ಸೇನಾ ವಿಮಾನ ತಯಾರಿಕೆ ಆರಂಭಿಸಿವೆ. ಗುಜರಾತ್‌ನ ವಡೋದರಾದಲ್ಲಿ ಕಳೆದ ವಾರ ವಿಮಾನ ತಯಾರಿಕೆ ಘಟಕ ಕಾರ್ಯಾರಂಭ ಮಾಡಿದ್ದು, ಅದನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಪೇನ್ ಅಧ್ಯಕ್ಷ ಪೆಡ್ರೊ ಸ್ಯಾಂಚೆಝ್ ಉದ್ಘಾಟಿಸಿದ್ದಾರೆ. ಏರ್‌ಬಸ್‌ನ ಮಧ್ಯಮ ಗಾತ್ರದ ಸೇನಾ ಸರಕು ಸಾಗಣೆ ವಿಮಾನ ಸಿ–295 ಇಲ್ಲಿ ತಯಾರಾಗಲಿದೆ. ಸೇನೆಗೆ ಬೇಕಾದ ವಿಮಾನವನ್ನು ಖಾಸಗಿ ಸಂಸ್ಥೆಗಳು ದೇಶೀಯವಾಗಿ ಮೊದಲ ಬಾರಿಗೆ ತಯಾರಿಕೆ ಮಾಡುತ್ತಿವೆ. ಭವಿಷ್ಯದಲ್ಲಿ ಇದು ಪ್ರಯಾಣಿಕ ವಿಮಾನ ತಯಾರಿಕೆಯೂ ಸೇರಿದಂತೆ ವಿಮಾನ ತಯಾರಿಕೆಯಲ್ಲಿ ದೇಶದ ಸ್ವಾವಲಂಬನೆಗೆ ಕಾರಣವಾಗಲಿದೆ ಎನ್ನುವ ಆಶಯ ಭಾರತದ್ದು.

ಭಾರತದ ಟಾಟಾ ಆ್ಯಂಡ್ ಸನ್ಸ್ ಒಡೆತನದ ಟಿಎಎಸ್‌ಎಲ್ ಬಹಳ ಹಿಂದಿನಿಂದಲೂ ಭಾರತೀಯ ಸೇನೆಗೆ ಬೇಕಾದ ಜೀಪ್, ಟ್ರಕ್ ಮುಂತಾದ ವಾಹನಗಳನ್ನು ಪೂರೈಸುತ್ತಿದೆ. ಏರ್‌ಬಸ್ ಸ್ಪೇನ್ ಮೂಲದ ಕಂಪನಿಯಾಗಿದ್ದು, ಯುರೋಪ್‌ನ ನಾಲ್ಕು ರಾಷ್ಟ್ರಗಳಲ್ಲಿ (ಫ್ರಾನ್ಸ್, ಬ್ರಿಟನ್, ಜರ್ಮನಿ ಮತ್ತು ಸ್ಪೇನ್) ತನ್ನ ಪ್ರಮುಖ ತಯಾರಿಕಾ ಘಟಕಗಳನ್ನು ಹೊಂದಿದೆ. ಭಾರತವು ಒಟ್ಟು 56 ಸಿ–295 ಸೇನಾ ವಿಮಾನಗಳಿಗೆ ಬೇಡಿಕೆ ಸಲ್ಲಿಸಿದ್ದು, ಅವುಗಳ ಪೈಕಿ 16 ವಿಮಾನಗಳನ್ನು ಸ್ಪೇನ್ ಪೂರೈಸಲಿದೆ; ಉಳಿದ 40 ವಡೋದರಾದಲ್ಲಿ ತಯಾರಾಗಲಿವೆ.

ಸಿ–295 ಸೇನಾ ಸರಕು ಸಾಗಣೆ ವಿಮಾನದ ತಯಾರಿಕೆ ಆರಂಭ ಅಷ್ಟೇ. ದೇಶದ ಗುರಿ ಇರುವುದು 'ಮೇಕ್ ಇನ್ ಇಂಡಿಯಾ'ದಲ್ಲಿ ಪ್ರಯಾಣಿಕ ವಿಮಾನ ತಯಾರಿಕೆಯನ್ನು ಒಳಗೊಳ್ಳುವುದು. ಅಂದರೆ, ದೇಶೀಯವಾಗಿ ಪ್ರಯಾಣಿಕ ವಿಮಾನಗಳ ತಯಾರಿಕೆ ಮಾಡುವುದು. ವಡೋದರಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಈ ಬಗ್ಗೆ ಮಾತನಾಡಿದ್ದಾರೆ.

ಆದರೆ, ಪ್ರಯಾಣಿಕ ವಿಮಾನಗಳ ತಯಾರಿಕೆ ಅತಿ ದೀರ್ಘವಾದ ಹಾಗೂ ಸಂಕೀರ್ಣ ಪ್ರಕ್ರಿಯೆಯಾಗಿದೆ.

ಎರಡು ಕಂಪನಿಗಳ ಏಕಸ್ವಾಮ್ಯ: ಜಾಗತಿಕ ಮಟ್ಟದಲ್ಲಿ ಪ್ರಯಾಣಿಕ ವಿಮಾನಗಳ ತಯಾರಿಕೆಯು ಎರಡು ಕಂಪನಿಗಳ (ಬೋಯಿಂಗ್ ಮತ್ತು ಏರ್‌ಬಸ್) ಹಿಡಿತದಲ್ಲಿದೆ. ಮಾರುಕಟ್ಟೆಯ ಶೇ 90ರಷ್ಟು ಪಾಲನ್ನು ಈ ಎರಡು ಕಂಪನಿಗಳೇ ಹೊಂದಿವೆ. ಭಾರತದ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಲಘು ಯುದ್ಧವಿಮಾನ, ಹೆಲಿಕಾಪ್ಟರ್‌ಗಳನ್ನು ಈಗಾಗಲೇ ತಯಾರಿಸಿದೆ. ವಿದೇಶಿ ಕಂಪನಿಗಳೊಂದಿಗಿನ ಸಹಭಾಗಿತ್ವದಲ್ಲೂ ಸೇನಾ ವಿಮಾನಗಳನ್ನು ಅಭಿವೃದ್ಧಿಪಡಿಸಿದೆ. ಹಾಗೆಯೇ 19 ಆಸನಗಳ ಪ್ರಯಾಣಿಕ ವಿಮಾನದ ತಯಾರಿಕೆಯಲ್ಲೂ ಎಚ್‌ಎಎಲ್ ತೊಡಗಿದೆ. ಆದರೆ, ಒಂದು ಪೂರ್ಣ ಪ್ರಯಾಣಿಕ ವಿಮಾನವನ್ನು ತಯಾರು ಮಾಡುವುದು ಭಾರಿ ಕಷ್ಟದ ವಿಚಾರ. ಹಲವು ವರ್ಷಗಳ ಹಿಂದೆಯೇ ಈ ದಿಕ್ಕಿನಲ್ಲಿ ಪ್ರಯತ್ನ ನಡೆಸಿದ್ದ ಚೀನಾ, ಈಗ ದೇಶೀಯವಾಗಿ ಪ್ರಯಾಣಿಕ ವಿಮಾನ ತಯಾರಿಕೆಯನ್ನು ಆರಂಭಿಸುವ ಹಂತಕ್ಕೆ ಬಂದಿದೆ. ಭಾರತ ಅದೇ ಕನಸಿನೊಂದಿಗೆ ಈಗ ಖಾಸಗಿಯವರ ಮೂಲಕ ಸೇನಾ ವಿಮಾನ ತಯಾರಿಕೆಗೆ ಮುಂದಡಿ ಇಟ್ಟಿದೆ.

ಜಗತ್ತಿನ ಅತಿ ಹೆಚ್ಚು ಜನಸಂಖ್ಯೆಯ ರಾಷ್ಟ್ರವಾಗಿರುವ ಭಾರತವು, 2047ರ ಹೊತ್ತಿಗೆ ಅಭಿವೃದ್ಧಿ ಹೊಂದಿದ ದೇಶವಾಗುವ ದಿಸೆಯಲ್ಲಿ ಪ್ರಯತ್ನಿಸುತ್ತಿದೆ. ದೇಶದಲ್ಲಿ ಮಧ್ಯಮ ವರ್ಗದ ಜನಸಂಖ್ಯೆಯೂ ಹೆಚ್ಚುತ್ತಿದ್ದು, ವಿಮಾನ ಪ್ರಯಾಣ ಮಾಡುವವರ ಸಂಖ್ಯೆ ಹೆಚ್ಚಲಿದೆ ಎಂದು ಏರ್‌ಬಸ್‌ನ ಇತ್ತೀಚಿನ ವರದಿ ತಿಳಿಸಿದೆ. ಭಾರತದಲ್ಲಿ ವಿಮಾನ ಪ್ರಯಾಣಿಕರ ಸಂಖ್ಯೆಯು 2040ರ ಹೊತ್ತಿಗೆ ಶೇ 6.2ರಷ್ಟು ಆಗಲಿದ್ದು, ಇದು ಮುಂದುವರಿದ ಆರ್ಥಿಕತೆಗಳಲ್ಲಿಯೇ ಅತಿ ದೊಡ್ಡ ಪ್ರಮಾಣವಾಗಿದೆ ಮತ್ತು ಜಾಗತಿಕ ಪ್ರಮಾಣಕ್ಕಿಂತಲೂ (ಶೇ 3.9) ಹೆಚ್ಚಿದೆ. ಏರುತ್ತಿರುವ ಅಗತ್ಯಗಳಿಗೆ ಅನುಗುಣವಾಗಿ ದೇಶವು ಈಗಾಗಲೇ 1,200 ವಿಮಾನಗಳಿಗಾಗಿ ಕಂಪನಿಗಳಿಗೆ ಬೇಡಿಕೆ ಸಲ್ಲಿಸಿದೆ. ಮುಂದಿನ 20 ವರ್ಷಗಳಲ್ಲಿ ದೇಶಕ್ಕೆ ಒಟ್ಟು 2,210 ಹೊಸ ವಿಮಾನಗಳು ಬೇಕು ಎಂದು ಅಂದಾಜಿಸಲಾಗಿದೆ.

ಆದರೆ, ಭಾರತವಷ್ಟೇ ಅಲ್ಲದೇ ಲ್ಯಾಟಿನ್ ಅಮೆರಿಕ, ಗಲ್ಫ್ ದೇಶಗಳು ಸೇರಿದಂತೆ ಜಗತ್ತಿನ ಹಲವು ದೇಶಗಳಿಂದಲೂ ಹೆಚ್ಚಿನ ವಿಮಾನಗಳಿಗೆ ಬೇಡಿಕೆ ಬರುತ್ತಿರುವುದರಿಂದ ಸಕಾಲಕ್ಕೆ ಪೂರೈಕೆ ಮಾಡಲು ಬೋಯಿಂಗ್ ಮತ್ತು ಏರ್‌ಬಸ್ ಕಂಪನಿಗಳಿಗೆ ಸಾಧ್ಯವಾಗುತ್ತಿಲ್ಲ.

ಭಾರತದಲ್ಲಿ ವಿಮಾನದ ಬಿಡಿಭಾಗಗಳ ತಯಾರಿಕೆ ಕ್ಷಿಪ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದು, ಬೋಯಿಂಗ್ ಮತ್ತು ಏರ್‌ಬಸ್ ಕಂಪನಿಗಳು ಸಂಶೋಧನೆ, ತಾಂತ್ರಿಕತೆ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ದೇಶದಲ್ಲಿ ತೆರೆದಿವೆ. ಹೀಗಾಗಿ ವಿಮಾನ ತಯಾರಿಕಾ ಕ್ಷೇತ್ರವನ್ನು ಪ್ರವೇಶಿಸಲು ಭಾರತಕ್ಕೆ ಇದು ಸಕಾಲವಾಗಿದೆ. ಈ ದಿಸೆಯಲ್ಲಿ ಸಿ–295 ಸೇನಾ ವಿಮಾನ ತಯಾರಿಕೆಗೆ ವಡೋದರಾದಲ್ಲಿ ಘಟಕ ಆರಂಭವಾಗಿರುವುದು ನಿರ್ಣಾಯಕ ಹೆಜ್ಜೆ ಎನ್ನಲಾಗುತ್ತಿದೆ.

ಆಧಾರ: ಪಿಟಿಐ, ಏರ್‌ಬಸ್ ವೆಬ್‌ಸೈಟ್

ವಿಮಾನದ ವೈಶಿಷ್ಟ್ಯ

ಸಿ–295 'ಸಿ' ಅಕ್ಷರ ಮೂಲ ಕಂಪನಿ ಸಿಎಎಸ್‌ಎ (CASA) ಹೆಸರನ್ನು ಸೂಚಿಸುತ್ತದೆ. '2'– ಎಂಜಿನ್ ಸಂಖ್ಯೆಯನ್ನು, '95'– ವಿಮಾನದ ಗರಿಷ್ಠ ತೂಕ ಹೊರುವ ಸಾಮರ್ಥ್ಯ '9.5' ಟನ್ ಅನ್ನು ಸೂಚಿಸುತ್ತದೆ

24 ಮೀಟರ್ ವಿಮಾನದ ಉದ್ದ

8.66 ಮೀಟರ್ ವಿಮಾನದ ಎತ್ತರ

26 ಮೀಟರ್ ರೆಕ್ಕೆಯ ಎರಡೂ ತುದಿಗಳ ನಡುವಿನ ಅಂತರ

9,500 ಕೆಜಿ ಭಾರ ಹೊರುವ ಸಾಮರ್ಥ್ಯ

480 ಕಿ.ಮೀ/ಪ್ರತಿ ಗಂಟೆಗೆ ವಿಮಾನದ ಗರಿಷ್ಠ ವೇಗದ ಸಾಮರ್ಥ್ಯ

71 ಒಮ್ಮೆಗೆ ಸಾಗಿಸಬಹುದಾದ ಸೈನಿಕರ ಸಂಖ್ಯೆ

48 ಒಮ್ಮೆಗೆ ಕರೆದೊಯ್ಯಬಹುದಾದ ಪ್ಯಾರಾಟ್ರೂಪರ್‌ಗಳ ಸಂಖ್ಯೆ

5,000 ಕಿ.ಮೀ ಒಂದು ಬಾರಿಗೆ ವಿಮಾನ ಹಾರಬಹುದಾದ ಗರಿಷ್ಠ ದೂರ

30 ಸಾವಿರ ಅಡಿ ವಿಮಾನ ಹಾರಬಹುದಾದ ಗರಿಷ್ಠ ಎತ್ತರ

30ಕ್ಕೂ ಹೆಚ್ಚು ಸಿ–295 ವಿಮಾನವನ್ನು ಸೇನಾ ಉದ್ದೇಶಕ್ಕೆ ಬಳಸುತ್ತಿರುವ ದೇಶಗಳು

ಸ್ವಾವಲಂಬನೆಯಲ್ಲಿ ಮಹತ್ವದ ಹೆಜ್ಜೆ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ 'ಮೇಕ್ ಇನ್ ಇಂಡಿಯಾ' ಯೋಜನೆ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುವ ಭಾರತದ ಪ್ರಯತ್ನದಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂದು ವಿಶ್ಲೇಷಿಸಲಾಗುತ್ತಿದೆ. 40 ವಿಮಾನಗಳು ಪೂರ್ಣವಾಗಿ ಟಾಟಾದ ತಯಾರಿಕಾ ಘಟಕದಲ್ಲೇ ತಯಾರಾಗಲಿವೆ. ಅದಕ್ಕಾಗಿ ಕೆಲವು ಬಿಡಿ ಭಾಗಗಳು ಹೈದರಾಬಾದ್‌ನಲ್ಲಿರುವ ಏರ್‌ಬಸ್‌ನ ಘಟಕದಿಂದ ಪೂರೈಕೆಯಾದರೆ, ವಿಮಾನದ ಪ್ರಮುಖ ಭಾಗಗಳು, ಬಹುತೇಕ ಬಿಡಿಭಾಗಗಳು ಟಾಟಾ ಘಟಕದಲ್ಲೇ ತಯಾರಾಗಲಿವೆ. ಬಿಡಿ ಭಾಗಗಳ ಪೂರೈಕೆಗಾಗಿ ಸರ್ಕಾರಿ ಮತ್ತು ಖಾಸಗಿ ಸೇರಿದಂತೆ 37 ಕಂಪನಿಗಳೊಂದಿಗೆ ಟಾಟಾ, ಏರ್‌ಬಸ್ ಒಪ್ಪಂದ ಮಾಡಿಕೊಂಡಿವೆ.

ಎವ್ರೊ–748 ಸ್ಥಾನ ತುಂಬಲಿರುವ ಸಿ–295

ಭಾರತದಲ್ಲೇ ತಯಾರಾಗಲಿರುವ ಮಧ್ಯಮ ಗಾತ್ರದ ಸಿ–295 ಸೇನಾ ಸರಕುಸಾಗಣೆ ವಿಮಾನಗಳು ಭಾರತೀಯ ವಾಯುಪಡೆಯಲ್ಲಿ ದಶಕಗಳಿಂದ ಕಾರ್ಯಾಚರಿಸುತ್ತಿರುವ ಎವ್ರೊ ಎಚ್‌ಎಸ್–748 ವಿಮಾನಗಳ ಜಾಗ ತುಂಬಲಿವೆ. 1960ರ ದಶಕದಲ್ಲಿ ತಯಾರಾಗಿರುವ ಈ ವಿಮಾನಗಳು ಈಗ ಹಳೆಯದಾಗಿದ್ದು, ಅವುಗಳ ನಿರ್ವಹಣೆಯೇ ವಾಯುಪಡೆಗೆ ದೊಡ್ಡ ಸವಾಲಾಗಿದೆ. ಈ ವಿಮಾನಗಳ ಬದಲಿಗೆ ಅತ್ಯಾಧುನಿಕ ಮತ್ತು ಬಹೂಪಯೋಗಿ ಸಿ–295 ಸರಕು ಸಾಗಣೆ ವಿಮಾನಗಳನ್ನು ಖರೀದಿಸಲು ರಕ್ಷಣಾ ಸಚಿವಾಲಯ ತೀರ್ಮಾನಿಸಿತ್ತು. 56 ವಿಮಾನಗಳನ್ನು ಖರೀದಿಸಲು ಭಾರತ ಏರ್‌ಬಸ್ ಜೊತೆ ಒಪ್ಪಂದ ಮಾಡಿಕೊಂಡಿದೆ.

ಎರಡು ಟರ್ಬೊಪ್ರೊಪೆಲ್ಲರ್ ಎಂಜಿನ್‌ಗಳನ್ನು ಹೊಂದಿರುವ ಸಿ–295 ವಿಮಾನವನ್ನು ಕಡಿಮೆ ಉದ್ದದ ರನ್‌ವೇ ಇರುವ ಜಾಗಗಳಲ್ಲೂ ಇಳಿಸಬಹುದು. ಪ್ರತಿಕೂಲ ಅಥವಾ ತುರ್ತುಪರಿಸ್ಥಿತಿಯಲ್ಲಿ ಕಡಿಮೆ ಸ್ಥಳಾವಕಾಶ ಇರುವಲ್ಲಿಯೂ ವಿಮಾನವನ್ನು ಇಳಿಸಬಹುದು. ಟೇಕ್ ಆಫ್ ಮಾಡಬಹುದು. ಕನಿಷ್ಠ 670 ಮೀಟರ್ ಉದ್ದದ ರನ್‌ವೇ ಇದ್ದರೆ ಸಲೀಸಾಗಿ ಟೇಕ್ ಆಫ್ ಮಾಡಬಹುದು. ಇಳಿಯುವುದಕ್ಕೆ 320 ಮೀಟರ್ ಉದ್ದದ ರನ್‌ವೇ ಸಾಕು.

ಸೇನಾ ಸರಕು ಸಾಗಣೆ ಮಾತ್ರವಲ್ಲದೇ ವಿವಿಧ ಉದ್ದೇಶಗಳಿಗೂ ಬಳಸಬಹುದು ಎನ್ನುವುದು ಈ ವಿಮಾನದ ಹೆಗ್ಗಳಿಕೆ. ಸೈನಿಕರು, ಪ್ಯಾರಾಟ್ರೂಪರ್‌ಗಳನ್ನು ಕರೆದೊಯ್ಯಲು, ರಕ್ಷಣಾ ಕಾರ್ಯಾಚರಣೆಗೆ, ವೈದ್ಯಕೀಯ ತುರ್ತು ಸಂದರ್ಭಗಳಲ್ಲಿ, ನೌಕಾ ನಿಗಾ ವ್ಯವಸ್ಥೆಗೆ, ಗಡಿ ಕಾಯಲು, ಆಗಸದಲ್ಲೇ ವಿಮಾನಗಳಿಗೆ ಇಂಧನ ತುಂಬಿಸಲು ಸೇರಿದಂತೆ ಇನ್ನಿತರ ಉದ್ದೇಶಗಳಿಗೆ ಈ ವಿಮಾನವನ್ನು ಬಳಸಬಹುದು.

ಸಿನಿ ಬಿಟ್ಸ್

ಬರಲಿದೆ 'ಭೈರತಿ ರಣಗಲ್' ಸೀಕ್ವೆಲ್

ರುಕ್ಮಿಣಿ ವಸಂತ್, ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್, ರುಕ್ಮಿಣಿ ವಸಂತ್ ಜೋಡಿಯಾಗಿ ನಟಿಸಿರುವ 'ಭೈರತಿ ರಣಗಲ್' ಚಿತ್ರ ನವೆಂಬರ್ 15ರಂದು ತೆರೆಗೆ ಬರಲಿದೆ. ಚಿತ್ರದ 'ಅಜ್ಞಾತವಾಸ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನರ್ತನ್ ನಿರ್ದೇಶನದ ಈ ಚಿತ್ರ 'ಮಫ್ತಿ' ಚಿತ್ರದ ಪ್ರೀಕ್ವೆಲ್ ಆಗಿದ್ದು, 'ಭೈರತಿ ರಣಗಲ್'ನ ಸೀಕ್ವೆಲ್ ಅನ್ನು ಚಿತ್ರತಂಡ ಘೋಷಿಸಿದೆ.

'ಅಜ್ಞಾತವಾಸ' ಗೀತೆಗೆ ವಿ.ನಾಗೇಂದ್ರಪ್ರಸಾದ್ ಸಾಹಿತ್ಯವಿದ್ದು, ರವಿ ಬಸ್ರೂರ್ ಸಂಗೀತ ಸಂಯೋಜಿಸಿದ್ದಾರೆ. ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜ್‌ಕುಮಾರ್ ಚಿತ್ರವನ್ನು ನಿರ್ಮಿಸಿದ್ದಾರೆ.

'ಮಫ್ತಿ' ಚಿತ್ರದ ಬಳಿಕ 'ಭೈರತಿ ರಣಗಲ್' ಪಾತ್ರ ನನಗೆ ಬಹಳ ಇಷ್ಟವಾಯ್ತು. ನಿರ್ದೇಶಕ ನರ್ತನ್ ಹೇಳಿದ ಈ ಚಿತ್ರದ ಕಥೆ ನನಗೆ ಹಾಗೂ ಗೀತಾ ಅವರಿಗೆ ಮೆಚ್ಚುಗೆಯಾಯಿತು. ಹೀಗಾಗಿ ನಮ್ಮ ಗೀತಾ ಪಿಕ್ಚರ್ಸ್ ಬ್ಯಾನರ್‌ನಲ್ಲೇ ಈ ಚಿತ್ರವನ್ನು ನಿರ್ಮಾಣ ಮಾಡಿದ್ದೇವೆ. ನಮ್ಮ ಸಂಸ್ಥೆಯಿಂದ ನಿರ್ಮಾಣವಾಗಿರುವ ಎರಡನೇ ಚಿತ್ರವಿದು. ಚಿತ್ರದ ಎರಡನೇ ಭಾಗ ಕೂಡ ಕಥೆಯ ಸೀಕ್ವೆಲ್ ಆಗಿ ಮೂಡಿಬರಲಿದೆ' ಎಂದರು ಶಿವಣ್ಣ.

ನವೆಂಬರ್ 5ರಂದು ಟ್ರೇಲರ್ ಬಿಡುಗಡೆಗೊಳ್ಳಲಿದೆ. ದೇವರಾಜ್, ಅವಿನಾಶ್, ರಾಹುಲ್ ಬೋಸ್, ಛಾಯಾಸಿಂಗ್, ಬಾಬು ಹಿರಣ್ಣಯ್ಯ, ಗೋಪಾಲಕೃಷ್ಣ ದೇಶಪಾಂಡೆ ಮುಂತಾದವರು ತಾರಾಗಣದಲ್ಲಿದ್ದಾರೆ. ನವೀನ್ ಕುಮಾರ್ ಛಾಯಾಚಿತ್ರಗ್ರಹಣವಿದೆ.

ಯುವ ರಾಜ್‌ಕುಮಾರ್ ಈಗ 'ಎಕ್ಕ'

ಯುವ ರಾಜ್‌ಕುಮಾರ್

'ಯುವ' ಸಿನಿಮಾದ ಬಳಿಕ ನಟ ಯುವ ರಾಜ್‌ಕುಮಾರ್ ನಿರ್ದೇಶಕ ರೋಹಿತ್ ಪದಕಿ ಜೊತೆ ತಮ್ಮ ಮುಂದಿನ ಸಿನಿಮಾವನ್ನು ಕೆಲ ದಿನಗಳ ಹಿಂದಷ್ಟೇ ಘೋಷಿಸಿದ್ದರು. ಇದೀಗ ಚಿತ್ರದ ಶೀರ್ಷಿಕೆ ಘೋಷಣೆಯಾಗಿದ್ದು, ಫಸ್ಟ್‌ಲುಕ್ ಕೂಡ ಬಿಡುಗಡೆಗೊಂಡಿದೆ. ಈ ಚಿತ್ರಕ್ಕೆ 'ಎಕ್ಕ' ಎಂದು ಹೆಸರಿಡಲಾಗಿದೆ.

ಕಥೆಗಾರ ವಿಕ್ರಂ ಹತ್ವಾರ್ ಬರವಣಿಗೆ ಚಿತ್ರಕ್ಕಿದೆ. ಶಿವರಾಜ್‌ಕುಮಾರ್ ಮುಖ್ಯಭೂಮಿಕೆಯಲ್ಲಿರುವ 'ಉತ್ತರಾಕಾಂಡ' ಚಿತ್ರವನ್ನು ರೋಹಿತ್ ಪದಕಿ ನಿರ್ದೇಶಿಸುತ್ತಿದ್ದಾರೆ. ಆ ಸಿನಿಮಾ ಪೂರ್ಣಗೊಳ್ಳುವ ಮೊದಲೇ ಮತ್ತೊಂದು ಚಿತ್ರ ಕೈಗೆತ್ತಿಕೊಂಡಿದ್ದಾರೆ. ಇತ್ತೀಚೆಗಷ್ಟೇ ವಿನಯ್ ರಾಜ್‌ಕುಮಾರ್ ಅವರ 'ಪೆಪೆ' ಚಿತ್ರ ತೆರೆಕಂಡಿತ್ತು. 'ಎಕ್ಕ'ದ ಮೊದಲ ಪೋಸ್ಟರ್ 'ಪೆಪೆ' ಚಿತ್ರವನ್ನು ನೆನಪಿಸುವಂತಿದೆ. ಮಾಂಸದ ಮಾರುಕಟ್ಟೆಯಲ್ಲಿ ಮಾರಕಾಸ್ತ್ರ ಹಿಡಿದು, ಬಟ್ಟೆಯೆನ್ನೆಲ್ಲ ರಕ್ತಸಿಕ್ತಗೊಳಿಸಿಕೊಂಡಿರುವ ಯುವ ಮತ್ತೊಂದು ಮಾಸ್ ಆ್ಯಕ್ಷನ್ ಸಿನಿಮಾದೊಂದಿಗೆ ಬರಲು ಸಿದ್ಧರಾಗಿದ್ದಾರೆ ಎಂಬುದನ್ನು ಪೋಸ್ಟರ್ ಹೇಳುತ್ತಿದೆ.

ಪಿ.ಆರ್.ಕೆ.ಪ್ರೊಡಕ್ಷನ್ಸ್ ಬ್ಯಾನರ್, ಜಯಣ್ಣ ಕಂಬೈನ್ಸ್, ಕೆ.ಆರ್.ಜಿ.ಸ್ಟುಡಿಯೋಸ್ ಒಟ್ಟಾಗಿ ಚಿತ್ರವನ್ನು ನಿರ್ಮಿಸುತ್ತಿದೆ. ನವೆಂಬರ್ 28ಕ್ಕೆ ಚಿತ್ರೀಕರಣ ಆರಂಭವಾಗಲಿದ್ದು, 2025ಕ್ಕೆ ಚಿತ್ರ ತೆರೆ ಕಾಣಲಿದೆ. ತಾರಾಬಳಗವನ್ನು ಮುಂಬರುವ ದಿನಗಳಲ್ಲಿ ಪರಿಚಯಿಸುತ್ತೇವೆ' ಎಂದು ಚಿತ್ರತಂಡ ಹೇಳಿದೆ.

ಚಿತ್ರಕ್ಕೆ ಚರಣ್ ರಾಜ್ ಸಂಗೀತ ಸಂಯೋಜನೆ ಮಾಡಲಿದ್ದು, ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ದೀಪು ಎಸ್ ಕುಮಾರ್ ಸಂಕಲನವಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಅಹಮದಾಬಾದ್‌ನ ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿಯನ್ನು ಬೆಂಬಲಿಸಿ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಮಾತನಾಡಿದ್ದಾರೆ ಎಂದು ಹೇಳಲಾದ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣಗಳ ಬಳಕೆದಾರರು ತಮ್ಮ ಖಾತೆಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. 'ಯಾರೊಬ್ಬರಿಗೂ ಲಾರೆನ್ಸ್ ಬಿಷ್ಣೋಯಿಯನ್ನು ಬೆರಳಿನಿಂದ ಮುಟ್ಟಲೂ ಸಾಧ್ಯವಿಲ್ಲ. ಇದು ರಕ್ಷಣಾ ಸಚಿವಾಲಯದ ಆದೇಶ' ಎಂಬ ಒಕ್ಕಣೆಯೊಂದಿಗೆ ವಿಡಿಯೊ ತುಣುಕನ್ನು ಪೋಸ್ಟ್ ಮಾಡಲಾಗಿದೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕನ್ನು ಹಲವು ಕೀ ಫ್ರೇಮ್‌ಗಳನ್ನಾಗಿ ವಿಭಜಿಸಿ, ಒಂದು ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್ ಬಳಸಿ ರಿವರ್ಸ್ ಇಮೇಜ್ ವಿಧಾನದಲ್ಲಿ ಹುಡುಕಾಟ ನಡೆಸಲಾಯಿತು. ಆಗ, ರಾಜನಾಥ್ ಸಿಂಗ್ ಅವರ ಅಧಿಕೃತ ಯುಟ್ಯೂಬ್ ಚಾನೆಲ್‌ನಲ್ಲಿ ನೇರಪ್ರಸಾರವಾಗಿದ್ದ ವಿಡಿಯೊ ದೊರೆಯಿತು. ಅದು, 2020ದ ಜನವರಿಯಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆಗೆ (ಸಿಎಎ) ಸಂಬಂಧಿಸಿದಂತೆ ಮುಸ್ಲಿಮರನ್ನು ಉದ್ದೇಶಿಸಿ ಮಾತನಾಡಿದ ವಿಡಿಯೊ. ಕಾಯ್ದೆಯಿಂದ ದೇಶದ ಮುಸ್ಲಿಮರಿಗೆ ಯಾವುದೇ ತೊಂದರೆ ಇಲ್ಲ ಎಂದು ಭರವಸೆ ನೀಡುತ್ತಾ ಮಾತನಾಡಿದ್ದ ಸಿಂಗ್, 'ರಕ್ಷಣಾ ಸಚಿವನಾಗಿ ನಾನು ಹೇಳುತ್ತಿದ್ದೇನೆ... ಪೌರತ್ವವನ್ನು ವಾಪಸ್ ಪಡೆಯುವುದಲ್ಲ; ಭಾರತದ ಯಾವೊಬ್ಬ ಮುಸ್ಲಿಮನನ್ನೂ ಯಾರೊಬ್ಬರಿಗೂ ಬೆರಳಿನಿಂದಲೂ ಮುಟ್ಟಲು ಸಾಧ್ಯವಿಲ್ಲ' ಎಂದು ಹೇಳಿದ್ದರು. ಭಾಷಣದ ಈ ಭಾಗದಲ್ಲಿ ಮುಸ್ಲಿಮರು ಎಂದು ಬರುವಲ್ಲಿ ಲಾರೆನ್ಸ್ ಬಿಷ್ಣೋಯಿ ಎಂದು ಬರುವಂತೆ ಎಡಿಟ್ ಮಾಡಿ ವಿಡಿಯೊವನ್ನು ಪೋಸ್ಟ್ ಮಾಡಲಾಗಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಸಂತೋಷಕ್ಕಾಗಿ ಹುಡುಕಾಟ!

ನುಡಿ ಬೆಳಗು

ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

58

ನಾವು ವಾಸಿಸುವ ಈ ಭೂಮಿ ಸ್ವರ್ಗ ಸಮಾನವಾದುದು. ಇದು ಋಷಿಗಳ ಅಭಿಪ್ರಾಯ. ಇಂತಹ ಭೂಮಿ ಇನ್ನೊಂದು ಸಿಗಾಕೆ ಸಾಧ್ಯವಿಲ್ಲ. ಒಂದು ಜೀವ ಹುಟ್ಟಿ ವಿಕಾಸ ಆಗಲು ಏನೇನು ಬೇಕೋ ಅದೆಲ್ಲವನ್ನೂ ನಿಸರ್ಗ ನಿರ್ಮಾಣ ಮಾಡೈತಿ. ಅನ್ನ, ನೀರು, ಗಾಳಿ, ಬೆಳಕು ಯಾವುದಕ್ಕೂ ಕೊರತೆ ಇಲ್ಲ. ಎಲ್ಲವನ್ನೂ ನಿಸರ್ಗ ನಮಗಾಗಿ ನಿರ್ಮಾಣ ಮಾಡಿದೆ. ಅನ್ನಕ್ಕಾಗಿ, ನೀರಿಗಾಗಿ, ಗಾಳಿಗಾಗಿ, ಬೆಳಕಿಗಾಗಿ ಏನಾದರೂ ದುಡ್ಡು ಕೊಡಬೇಕೇನು? ಎಲ್ಲವೂ ಪುಕ್ಕಟೆ ಸಿಗುತ್ತೈತಿ. ಕೆಲವರು ಮಂಗಳ ಗ್ರಹಕ್ಕೆ ಹೋಗಿ ಬಂದಾರ. ಇನ್ನು ಕೆಲವರು ಚಂದ್ರ ಗ್ರಹಕ್ಕೆ ಹೋಗ್ಯಾರ. ಆದರೆ, ಹೋಗುವಾಗ ಅನ್ನ, ನೀರು, ಗಾಳಿಯನ್ನು ಕಟಗೊಂಡೇ ಹೋಗ್ಯಾರ. ಬೇರೆ ಯಾವುದೇ ಗ್ರಹಗಳಲ್ಲಿ ನೀರು ಗಾಳಿ, ಅನ್ನ ಸಿಗೋದಿಲ್ಲ. ಜೀವಿಗಳು ಬದುಕೋಕೆ ಯೋಗ್ಯವೇ ಇಲ್ಲ. ಜೀವಿ ಸಂತೋಷವಾಗಿ ಬದುಕಲು ಏನೇನು ಬೇಕೋ ಅದೆಲ್ಲವನ್ನೂ ನಿಸರ್ಗ ನಮಗೆ ಕೊಟ್ಟೈತಿ. ಅದಕ್ಕಾಗಿಯೇ ಈ ಭೂಮಿ ನಿಜವಾದ ಸ್ವರ್ಗ.

ಗಗನಯಾತ್ರಿಗಳು, ಜಲಯಾತ್ರಿಗಳು ಹುಡುಕಾಟ ನಡೆಸಿದರೂ ಇಂತಹ ಗ್ರಹ ಇನ್ನೊಂದು ಸಿಕ್ಕಿಲ್ಲ. ಸನ್ಯಾಸಿಗಳು ಪವಾಡ ಮಾಡ್ತಾರೆ ಅಂತಾರ. ಕೈ ಅಲ್ಲಾಡಿಸಿ ಭಸ್ಮ ತರ್ತಾರೆ. ಬಂಗಾರದ ಉಂಗುರ ತರ್ತಾರೆ. ಆದರೆ ಇವೆಲ್ಲ ಪವಾಡಗಳಲ್ಲ. ಕೇವಲ ಕೈಚಳಕ ಅಷ್ಟೆ. ನಿಜವಾಗಿ ಪವಾಡ ಮಾಡೋಳು ಭೂಮಿ ತಾಯಿ. ನೀವು ಹಣ್ಣು ತಿಂದು ಗೊಟ್ಟ ಹುಗಿದರೂ ಅದು ಚಿಗುರಿ ಸಾವಿರ ಹಣ್ಣು ಕೊಡುತ್ತದಲ್ಲ ಅದು ನಿಜವಾದ ಪವಾಡ. ಇಂತಹ ಭೂಮಿಯಲ್ಲಿ ಸಂತೋಷವಾಗಿ ಬದುಕಲು ಬರದಿದ್ದರೆ ಅವ ಇನ್ನು ಎಲ್ಲಿ ಸಂತೋಷವಾಗಿ ಬದುಕಬಹುದು? ಹುಟ್ಟಿದ ಪ್ರತಿಯೊಬ್ಬನಿಗೂ ತಾನು ಸಂತೋಷವಾಗಿ ಇರಬೇಕು ಎಂದಿರತ್ತೈತಿ. ನಾವು ಗುಡಿಗುಂಡಾರಗಳಿಗೆ ಹೋಗಿದ್ದು, ಜ್ಯೋತಿಷಿಗಳ ಬಳಿಗೆ ಹೋಗಿದ್ದು, ಮಠ ಮಂದಿರಗಳಿಗೆ ಹೋಗಿದ್ದು ಯಾತಕ್ಕೆ? ನಾವು ಸಂತೋಷವಾಗಿರಬೇಕು ಅಂತ ಹೋಗೇವಿ. ಆದರೆ ಅಲ್ಲೆಲ್ಲಾ ನಮಗೆ ಭೆಟ್ಟಿಯಾಗಿದ್ದು ದುಃಖನೇ. ಸಂತೋಷವನ್ನು ಅನುಭವಿಸಲು ಯಾವ ಸಾಧನ ಇರಬೇಕು? ನಾವೆಲ್ಲ ಏನು ಅಂದಕೊಂಡೀವಿ ಅಂದರೆ ಒಂದು ದೊಡ್ಡ ಬಂಗಲೆ ಇದ್ದರೆ ಸಂತೋಷವಾಗಿ ಇರ್ತೀವಿ ಅಂತ.

ಒಬ್ಬ ಒಂದು ಭಾರೀ ಮನೆ ಕಟ್ಟಿಸಿದ್ದ. ಒಂದು ಎಕರೆ ಗಾರ್ಡನ್ ಮಾಡಿದ್ದ. ಸ್ವಿಮ್ಮಿಂಗ್ ಪೂಲ್ ಇತ್ತು. ವಾಕಿಂಗ್ ಟ್ರ್ಯಾಕ್ ಇತ್ತು. ಅವ ಮಾತ್ರ ಕುರ್ಚಿ ಮೇಲೆ ಸುಮ್ಮನೆ ಕುಳಿತಿದ್ದ. ಅದನ್ನು ನೋಡಿದ ಒಬ್ಬ 'ನೀವು ಯಾಕ್ ವಾಕ್ ಮಾಡೋದಿಲ್ಲ' ಎಂದು ಕೇಳಿದ. ಅದಕ್ಕೆ ಇವ 'ಏನ್ ಮಾಡೋದ್ರಿ ಮಂಡಿನೋವು' ಎಂದ. ದೊಡ್ಡ ಬಂಗ್ಲೆ ಐತಿ, ವಾಕಿಂಗ್ ಟ್ರ್ಯಾಕ್ ಐತಿ. ಆದರೆ ಅಡ್ಡಾಡಕ್ಕೇ ಬರಲಿಲ್ಲ ಅಂದ್ರ ಏನ್ ಸುಖ? ಇನ್ನೊಬ್ಬ ಹತ್ತು ಸಕ್ಕರೆ ಕಾರ್ಖಾನೆ ಮಾಲೀಕ ಇದ್ದ. ಆದರೆ, ಅವ ದಿನಾ ಬೆಳಿಗ್ಗೆ ಎದ್ದು ಹಾಗಲಕಾಯಿ ರಸ ಕುಡೀತಿದ್ದ. ರಾತ್ರಿ ರಾಗಿ ಗಂಜಿ. ಮಧ್ಯಾಹ್ನ ಅನ್ನ ಮಜ್ಜಿಗಿ ಇಷ್ಟೆ. ಮೊದಲು ಸೈಕಲ್ ತುಳೀತಿದ್ದ. ಕಾಲು ನೋವು ಬಂತು ಅಂತ ಬೈಕ್ ತಗಂಡ. ಬೆನ್ನು ನೋವು ಬಂತು. ಅದಕ್ಕೆ ಕಾರು ತಗಂಡ. ಆಗ ಹೊಟ್ಟೆ ಬಂತು. ಈಗ ಹೊಟ್ಟೆ ಕರಗಿಸಲು ಮತ್ತೆ ಸೈಕಲ್ ಹೊಡೀತಾನೆ. ಇದೇ ರೀಸೈಕಲ್. ಸಂತೋಷಕ್ಕಾಗಿ ನಿರಂತರ ಹುಡುಕಾಟ ಅಷ್ಟೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ನವೆಂಬರ್ 4, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ತೃತೀಯ ಗಂ. 23-25 ನಕ್ಷತ್ರ: ಅನುರಾಧ ಗಂ. 08-04 ಯೋಗ: ಶೋಭನ ಗಂ. 11-43 ಕರಣ: ತೈತಿಲ ಗಂ. 10-48, ತುಲಾ ಮಾಸದ 18 ನೇ ದಿನ, ಮಳೆನಕ್ಷತ್ರ: ಸ್ವಾತಿ 4.

ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 06-29 ಸೂರ್ಯಾಸ್ತ : 05-59

ಮುಸ್ಲಿಂ ದಿನಾಂಕ : 01 ಜುಮಾದುಲ್ಲಾವಲ್

ಅದೃಷ್ಟ ಸಂಖ್ಯೆ : 4, 1

ಮೇಷ: ಇಂದಿನ ಜೀವನದಲ್ಲಿ ಅದೃಷ್ಟದ ಲಾಭವನ್ನು ವ್ಯರ್ಥವಾಗದಂತೆ ಪಡೆದುಕೊಳ್ಳಲು ಪರಿಪೂರ್ಣ ಪ್ರಯತ್ನ ಹಾಕುವುದು ಅಗತ್ಯ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕಾಳಜಿ ವಹಿಸುವುದು ಸೂಕ್ತ.

ವೃಷಭ: ಉದ್ಯೋಗದಲ್ಲಿರುವ ಒತ್ತಡವನ್ನು ಬಗೆಹರಿಸಿಕೊಳ್ಳಲು ಹೋಗಿ ಪುನಃ ದೊಡ್ಡ ಸಮಸ್ಯೆಗೆ ಸಿಲುಕಿದಂತಾಗಬಹುದು. ವ್ಯವಹಾರದಲ್ಲಿ ಸಮಂಜಸ ನಿರ್ಧಾರ ಕೈಗೊಳ್ಳುವುದರ ಬಗ್ಗೆ ಗಮನಕೊಡಿ.

ಮಿಥುನ: ಕುಟುಂಬದಲ್ಲಿದ್ದಂಥ ವೈಮನಸ್ಸು, ಭಿನ್ನಾಭಿಪ್ರಾಯಗಳು ನಿರಾತಂಕವಾಗಿ ದೂರಾಗಲಿವೆ. ಕಬ್ಬಿಣ ಹಾಗೂ ಸಿಮೆಂಟ್ ವ್ಯಾಪಾರಿಗಳಿಗೆ ಲಾಭ ಸಿಗಬಹುದು. ಮಕ್ಕಳೊಡನೆ ಸಮಯ ಕಳೆಯುವಿರಿ.

ಕರ್ಕಾಟಕ: ಅಧಿಕಾರಿ ವರ್ಗದವರಲ್ಲಿ ಸಹನಶೀಲರಾಗಿ ವರ್ತಿಸಿದಲ್ಲಿ ಸರ್ಕಾರಿ ಕೆಲಸಗಳ ಪ್ರಯತ್ನ ಈಡೇರಲಿದೆ. ತಂತ್ರಜ್ಞಾನಿಗಳಿಗೆ ಉದ್ಯೋಗದಲ್ಲಿ ಬಗೆಹರಿಸಲಾಗದ ಸಮಸ್ಯೆ ಎದುರಾಗಬಹುದು. ಹಿತಶತ್ರುಗಳ ಬಗ್ಗೆ ಜಾಗ್ರತೆ ಇರಲಿ.

ಸಿಂಹ: ಪತ್ರಿಕೋದ್ಯಮಿಗಳಿಗೆ ಬಿಡುವಿಲ್ಲದ ಕೆಲಸಗಳು ಮತ್ತು ವಿಮರ್ಶಿಸಲು ಕಷ್ಟವಾಗುವಂಥ ಪರಿಸ್ಥಿತಿಗಳು ಎದುರಾಗುತ್ತವೆ. ಚಾಣಾಕ್ಷತನದ ನಿರ್ಧಾರಗಳು ಊರಿನ ತೂಕದ ವ್ಯಕ್ತಿಯನ್ನಾಗಿ ಮಾಡಲಿದೆ.

ಕನ್ಯಾ: ಉದ್ಯೋಗ ದೊರೆಯುವ ಸುಳಿವಿನ ಕಾರಣದಿಂದ ಜೀವನದಲ್ಲಿನ ಸಮಸ್ಯೆಗಳು ಹಂತ ಹಂತವಾಗಿ ದೂರಾಗಲಿವೆ. ರಾಜಕಾರಣದಲ್ಲಿ ಮೇಲುಗೈ ಸಾಧಿಸಲು ಅಕ್ಕ ಪಕ್ಕದ ವಾತಾವರಣ ಪೂರಕವಾಗುತ್ತದೆ.

ತುಲಾ: ವಿದ್ಯಾರ್ಥಿಗಳ ಉತ್ತಮ ಶ್ರೇಣಿಯ ಕನಸು ನನಸಾಗುವುದು. ಹಾಗೆಯೇ ಇಷ್ಟಪಟ್ಟಂಥ ರೀತಿಯಲ್ಲಿ ಉದ್ಯೋಗ ಅವಕಾಶಗಳೂ ದೊರಕುವ ಸಾಧ್ಯತೆ ಇದೆ. ಉದ್ಯೋಗದಲ್ಲಿ ಕ್ರಿಯಾಶೀಲತೆ ಹೆಚ್ಚಲಿದೆ.

ವೃಶ್ಚಿಕ: ಇಂದಿನ ಯೋಜನೆಗಳಿಗೆ ಮನೆಯವರಿಂದ ವಿರೋಧ ವ್ಯಕ್ತವಾಗಬಹುದು. ಆದರೆ ಶತ್ರುಗಳು ಕಾರ್ಯವೈಖರಿಯಿಂದ ಚಕಿತಗೊಂಡು ಸನಿಹಕ್ಕೂ ಬರಲಾರರು. ಯಾವ ವಿಚಾರಕ್ಕೂ ಬೇಸರ ಪಡುವ ಅವಶ್ಯಕತೆ ಇಲ್ಲ.

ಧನು: ಬೆಳ್ಳಿ-ಬಂಗಾರದ ಮಾರಾಟಗಾರರಿಗೆ ಉದ್ಯೋಗದಲ್ಲಿ ಬಿಡುವಿಲ್ಲದಂಥ ವ್ಯಾಪಾರ ಆಗುವುದು. ಕುಟುಂಬದಲ್ಲಿ ಉತ್ತಮ ವಾತಾವರಣವಿದ್ದು, ಸಂತಸ ಹಾಗೂ ಸಮಾಧಾನ ತರಲಿದೆ. ಹೊಸ ಮನೆಗೆ ಹೋಗಬಹುದು.

ಮಕರ: ವೃತ್ತಿಯಲ್ಲಿ ಪ್ರತಿಸ್ಪರ್ಧಿಗಳು ಹೆಚ್ಚಾಗಲಿದ್ದು, ವ್ಯಾಪಾರ ವ್ಯವಹಾರಕ್ಕೆ ಆತಂಕದ ಪರಿಸ್ಥಿತಿ ಬರಬಹುದು. ಬಹಳ ದಿನದ ನಂತರದಲ್ಲಿ ಗುರು ಹಿರಿಯರ ದರ್ಶನ ಭಾಗ್ಯ ದೊರಕುತ್ತದೆ. ಆತ್ಮವಿಶ್ವಾಸದಿಂದ ಮುಂದುವರಿಯಿರಿ.

ಕುಂಭ: ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿ ಬದಲಾವಣೆ ಉಂಟು ಮಾಡಲಿದ್ದೀರಿ. ಕಾರ್ಯಕ್ಷೇತ್ರದಲ್ಲಿ ನಿಸ್ವಾರ್ಥ ಶ್ರಮಕ್ಕೆ ಹೆಚ್ಚಿನ ಫಲ ದೊರೆಯುತ್ತದೆ. ಉಮಾಮಹೇಶ್ವರನ ಆರಾಧನೆಯಿಂದ ಶುಭ.

ಮೀನ: ವ್ಯವಹಾರಗಳಲ್ಲಿ ನುರಿತವರ ಸಲಹೆಗಳನ್ನು ಪಡೆದುಕೊಳ್ಳುವುದರಿಂದ ಯಶಸ್ವಿಯಾಗುವಿರಿ. ಋಣಬಾಧೆಯಿಂದ ಮುಕ್ತರಾಗಬಹುದು. ದುರ್ಜನರ ಸಹವಾಸದಿಂದ ತಕ್ಷಣ ಹೊರಬರುವ ಪ್ರಯತ್ನ ಮಾಡಿ.

ಪದಬಂಧ 5851

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚಕಚಕನೆ ನೇಯುವ ರಾಟೆ (3)
3.ಕಿತಾಪತಿ ಏರಿಸಿದ ಬಾವುಟ! (3)
5.ಕಚಕ್ಕನೆ ಕತ್ತರಿಸಿದ ತಲೆಗೂದಲು (2)
6.ಮನೆಯ ಮೇಲಿನ ಮಚ್ಚು (3)
7.ನೆನಪಲ್ಲೇ ಇರುವ ನವ (2)
9.ಈಕೆ ಬೇಡತಿ (4)
10.ಈ ಪರಿ ಬಂದಿರುವ ಸೋಲು! (4)
11.ಹಾವಸೆ ಬೆಳೆದ ಜಾಗದಲ್ಲಿ ಉಲ್ಟಾ ರಂಗೋಲಿ (2)
13.ನೋಡುಗ ತಿರುಗಿದ್ದಾನಲ್ಲಾ! (3)
14.ಆ ಮನೆ ಮುಂದಿರುವ ಗಜ (2)
15.ಕಕ್ಷದಲ್ಲಿದ್ದು ಕಾಪಾಡುವವ! (3)
16.ವರ್ತಮಾನದ ಕುಣಿತ! (3)

ಮೇಲಿಂದ ಕೆಳಕ್ಕೆ

1.ಇದು ಕನ್ನಡಿಗನ ಚಮತ್ಕಾರಿ ಸ್ಪೂನು! (3)
2.ಕತ್ತೆಯಂತೆ ದುಡಿಯುವುದು (5)
3.ಬೆಳೆಯ ಪ್ರಮಾಣವನ್ನು ಗುರುತಿಸುವುದು (3)
4.ನೆರೆ ಬಂದಾಗ ಉಲ್ಟಾ ಆಗಿರುವ ತಡಿಕೆ (3)
5.ಕತ್ತಿ ಹಿಡಿದು ತೋರುವ ಪಟ್ಟು (5)
8.ಈ ಪರಿ ಆದ ಬದಲಾವಣೆ! (5)
10.ವಿದ್ಯಾರ್ಹತೆಯ ಪ್ರಶಸ್ತಿಯನ್ನು ನೀಡುವುದು (5)
12.ಪಡಸಾಲೆ ಇಲ್ಲಿದೆ (3)
13.ಪ್ರಾಣಿಗಳನ್ನು ಕಡಿಯುವವನು (3)
14.ಆ ಮಾನವನ ಮುಖ! (3)



5850ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಹಠ 5.ಗುಲಾಮ 8.ಕರಡಿ 9.ಗುಲಾಬಿ 10.ಕರ 11.ಹರ್ಡೇಕರ್‌ಮಂಜಪ್ಪ 12.ಬತ್ತಿ 14.ಡವಾಲಿ 17.ವರ್ಧನ 18.ಪಿಟೀಲು 19.ಕಣ್ಣಿ

ಮೇಲಿಂದ ಕೆಳಕ್ಕೆ: 1.ಉಂಗುರ 3.ಠಕಲಿ 4.ಗಡಿಯಾರ 6.ಮಗು 7.ಅಂಬಿಗರಚೌಡಯ್ಯ 10.ಕಪ್ಪ 11.ಹತ್ತಿ 12.ಬಸವಣ್ಣ 13.ವಾನಕ 15.ಲಿಪಿ 16.ಕುಲುಮೆ

ಸುಡೊಕು 6236

	8			9		5		3
6	7	5						
	9		1		5		7	6
		4					5	
	5					1		9
2				5	9		6	
1			9					
	3					6	4	1
8		6		3			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6235 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

12 ನದಿ ಸೇತುವೆ ನಿರ್ಮಾಣ ಪೂರ್ಣ

ಮುಂಬೈ–ಅಹಮದಾಬಾದ್ ಬುಲೆಟ್ ರೈಲು ಮಾರ್ಗ

ನವದೆಹಲಿ (ಪಿಟಿಐ): ಮುಂಬೈ ಮತ್ತು ಅಹಮದಾಬಾದ್ ನಡುವೆ ನಿರ್ಮಿಸುತ್ತಿರುವ ಬುಲೆಟ್ ರೈಲು ಕಾರಿಡಾರ್ ವ್ಯಾಪ್ತಿಗೆ ಬರುವ ನದಿಗಳ ಮೇಲೆ ಒಟ್ಟು 20 ಸೇತುವೆಗಳನ್ನು ನಿರ್ಮಿಸಲಾಗುತ್ತಿದೆ. ಈ ಪೈಕಿ 12 ಸೇತುವೆಗಳ ನಿರ್ಮಾಣವು ಪೂರ್ಣಗೊಂಡಿದೆ ಎಂದು ನ್ಯಾಷನಲ್ ಹೈಸ್ಪೀಡ್ ರೈಲ್ ಕಾರ್ಪೊರೇಷನ್ ಲಿಮಿಟೆಡ್ (ಎನ್‌ಎಚ್‌ಎಸ್‌ಆರ್‌ಸಿಎಲ್) ತಿಳಿಸಿದೆ.

ಗುಜರಾತ್‌ನ ನವಸಾರಿ ಜಿಲ್ಲೆಯ ಖರೇರಾ ನದಿಯ ಮೇಲೆ ಬುಲೆಟ್ ರೈಲು ಮಾರ್ಗ ಹಾದುಹೋಗಲಿದೆ. ಈ ನದಿ ಮೇಲೆ 120 ಮೀಟರ್ ಉದ್ದದ ಸೇತುವೆ ನಿರ್ಮಾಣವು ಅಕ್ಟೋಬರ್ 29ರಂದು ಪೂರ್ಣಗೊಂಡಿದೆ. ಇದು ಪೂರ್ಣಗೊಂಡಿರುವ 12ನೇ ಸೇತುವೆಯಾಗಿದೆ ಎಂದು ವಿವರಿಸಿದೆ.

ಬುಲೆಟ್ ರೈಲು ಮಾರ್ಗವು ಗುಜರಾತ್‌ನಲ್ಲಿ 352 ಕಿ.ಮೀ. ಹಾಗೂ ಮಹಾರಾಷ್ಟ್ರದಲ್ಲಿ 156 ಕಿ.ಮೀ. ಹಾದುಹೋಗಲಿದೆ. ಮುಂಬೈ ಮತ್ತು ಅಹಮದಾಬಾದ್ ನಡುವಿನ ರಸ್ತೆ ಪ್ರಯಾಣ 6ರಿಂದ 8 ಗಂಟೆ ತೆಗೆದುಕೊಳ್ಳಲಿದೆ. ಈ ದೂರವನ್ನು ಬುಲೆಟ್ ರೈಲಿನಲ್ಲಿ 3 ಗಂಟೆಯಲ್ಲಿ ಕ್ರಮಿಸಬಹುದಾಗಿದೆ. ವಾಪಿ ಮತ್ತು ಸೂರತ್ ನಿಲ್ದಾಣದ ನಡುವೆ ಬರುವ ನದಿಗಳ ಮೇಲೆ ಒಟ್ಟು ಒಂಬತ್ತು ಸೇತುವೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದೆ.

ಖರೇರಾ ನದಿಯು ಅಂಬಿಕಾ ನದಿಯ ಉಪ ನದಿಯಾಗಿದೆ. ಗುಜರಾತ್ ಮತ್ತು ಮಹಾರಾಷ್ಟ್ರದ ಗಡಿ ಭಾಗದಲ್ಲಿರುವ ವಂಸ್ದಾ ತಾಲ್ಲೂಕಿನ ಗಿರಿ ಪ್ರದೇಶದಲ್ಲಿ ಇದು ಹುಟ್ಟುತ್ತದೆ. ಈ ನದಿಯು ವಾಪಿ ನಿಲ್ದಾಣದಿಂದ 45 ಕಿ.ಮೀ. ಹಾಗೂ ಬಿಲಿಮೊರಾ ನಿಲ್ದಾಣದ ನಡುವೆ 6 ಕಿ.ಮೀ. ದೂರ ಹರಿಯುತ್ತದೆ ಎಂದು ಮಾಹಿತಿ ನೀಡಿದೆ.

ಈಗಾಗಲೇ, ವಾಪಿ ಮತ್ತು ಸೂರತ್ ನಡುವೆ ಬರುವ ಪರ್, ಪೂರ್ಣಾ, ಮಿಂಧೋಲ, ಅಂಬಿಕಾ, ಔರಂಗ, ಕೋಲಕ್, ಕಾವೇರಿ ಮತ್ತು ವೆಂಗನಿಯಾ ನದಿಗಳ ಮೇಲೆ ಸೇತುವೆ ನಿರ್ಮಾಣ ಪೂರ್ಣಗೊಂಡಿದೆ ಎಂದು ಹೇಳಿದೆ.

ಒಟ್ಟಾರೆ ಈ ಯೋಜನೆಗೆ 1,389.5 ಹೆಕ್ಟೇರ್ ಭೂಮಿಯ ಅಗತ್ಯವಿದೆ. ಅಕ್ಟೋಬರ್ 21ರಂದು ಈ ಜಮೀನಿನ ಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿದೆ. ಎಲ್ಲಾ ಸಿವಿಲ್, ಡಿಪೊ ನಿರ್ಮಾಣ ಸೇರಿದಂತೆ ಗುಜರಾತ್ ಭಾಗದಲ್ಲಿನ ರೈಲ್ವೆ ಮಾರ್ಗದ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡಿದೆ. ಎಲ್ಲಾ 12 ನಿಲ್ದಾಣಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ ಎಂದು ವಿವರಿಸಿದೆ.

2017 ಚಾಲನೆ ವರ್ಷ

₹1.08 ಲಕ್ಷ ಕೋಟಿ ಅಂದಾಜು ವೆಚ್ಚ

508 ಕಿ.ಮೀ. ಒಟ್ಟು ದೂರ

320 ಕಿ.ಮೀ./ ಪ್ರತಿ ಗಂಟೆಗೆ ವೇಗ

12 ಒಟ್ಟು ನಿಲ್ದಾಣಗಳು
• ಮುಂಬೈ (ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್) • ಠಾಣೆ • ವಿರಾರ್ • ಬೋಯಿಸರ್ • ವಾಪಿ • ಬಿಲಿಮೋರಾ • ಸೂರತ್ • ಭರೂಚ್ • ವಡೋದರಾ • ಆನಂದ್/ನಾಡಿಯಾಡ್ • ಅಹಮದಾಬಾದ್ • ಸಬರಮತಿ

21 ಕಿ.ಮೀ. ಸುರಂಗ ಮಾರ್ಗ

ಬುಲೆಟ್ ರೈಲು ಒಟ್ಟು 21 ಕಿ.ಮೀ. ನಷ್ಟು ದೂರ ಸುರಂಗ ಮಾರ್ಗದಲ್ಲಿ ಚಲಿಸಲಿದೆ. ಈ ಪೈಕಿ 7 ಕಿ.ಮೀ. ದೂರದಷ್ಟು ಸಮುದ್ರದ ತಳದಲ್ಲಿ ರೈಲು ಮಾರ್ಗ ನಿರ್ಮಿಸಲಾಗುತ್ತಿದೆ.

ಈಗಾಗಲೇ, ಸುರಂಗ ಮಾರ್ಗ ನಿರ್ಮಾಣ ಕಾರ್ಯ ಶುರುವಾಗಿದೆ. ಭಾರತದಲ್ಲಿ ಸಮುದ್ರದ ತಳದಲ್ಲಿ ರೈಲ್ವೆ ಸುರಂಗ ಮಾರ್ಗ ನಿರ್ಮಿಸುತ್ತಿರುವುದು ಇದೇ ಮೊದಲು ಎಂದು ಎನ್‌ಎಚ್‌ಎಸ್‌ಆರ್‌ಸಿಎಲ್ ತಿಳಿಸಿದೆ.

ಕೇಂದ್ರ, ರಾಜ್ಯಗಳ ಪಾಲು ಎಷ್ಟು?

ದೇಶದ ಮೊದಲ ಬುಲೆಟ್ ರೈಲು ಯೋಜನೆಗೆ ಒಟ್ಟು ₹1.08 ಲಕ್ಷ ಕೋಟಿ ವೆಚ್ಚ ಮಾಡಲಾಗುತ್ತಿದೆ. ಈ ಪೈಕಿ ಕೇಂದ್ರ ಸರ್ಕಾರವು ಎನ್‌ಎಚ್‌ಎಸ್‌ಆರ್‌ಸಿಎಲ್‌ಗೆ ₹10 ಸಾವಿರ ಕೋಟಿ ಅನುದಾನ ನೀಡಿದೆ. ಗುಜರಾತ್ ಮತ್ತು ಮಹಾರಾಷ್ಟ್ರ ಸರ್ಕಾರಗಳು ತಲಾ ₹5 ಸಾವಿರ ಕೋಟಿ ಭರಿಸಲಿವೆ.

ಉಳಿದ ಹಣವನ್ನು ಜಪಾನ್ ದೇಶದಿಂದ ಶೇ 0.1ರಷ್ಟು ಬಡ್ಡಿದರದಲ್ಲಿ ಸಾಲ ಪಡೆಯಲಾಗುತ್ತಿದೆ.

ಹೂಡಿಕೆ ಯಶಸ್ಸಿಗೆ ನಾಲ್ಕು ಸೂತ್ರ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ದೇಶದಲ್ಲಿ 50ಕ್ಕೂ ಹೆಚ್ಚು ಮ್ಯೂಚುವಲ್ ಫಂಡ್ ಕಂಪನಿಗಳಿದ್ದು, ಸಾವಿರಾರು ಸ್ಕೀಂಗಳಿವೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಯಾವ ಕಂಪನಿಯ ಯಾವ ಫಂಡ್ ಆಯ್ಕೆ ಮಾಡಿಕೊಳ್ಳುವುದು ಎನ್ನುವುದೇ ದೊಡ್ಡ ಪ್ರಶ್ನೆ.

ಎಲ್ಲ ಕಂಪನಿಗಳ ಒಂದೊಂದೇ ಸ್ಕೀಂ ಅನ್ನು ಅಳೆದು ತೂಗಿ ಯಾವುದು ಉತ್ತಮವಾಗಿದೆ ಎಂದು ಪರಿಷ್ಕರಿಸಿ ನೋಡುವುದು ವಾಸ್ತವದಲ್ಲಿ ಅಸಾಧ್ಯದ ಕೆಲಸ. ಪರಿಸ್ಥಿತಿ ಹೀಗಿರುವಾಗ ಹೊಸ ಹೂಡಿಕೆದಾರರು ಗೊಂದಲಕ್ಕೀಡಾಗಿ ಮ್ಯೂಚುವಲ್ ಫಂಡ್ ಹೂಡಿಕೆಯ ಸಹವಾಸವೇ ಬೇಡ ಎಂದು ದೂರ ಸರಿದು ಬಿಡುತ್ತಾರೆ.

ಇದನ್ನು ತಪ್ಪಿಸಲು ಫೋರ್ ಫಂಡ್ ಪೋರ್ಟ್‌ಫೋಲಿಯೊ ಎಂಬ ಪರಿಕಲ್ಪನೆ ನೆರವಿಗೆ ಬರುತ್ತದೆ. ನಾಲ್ಕು ವಿವಿಧ ಮಾದರಿಯ ಹೂಡಿಕೆಗಳ ಸಮ್ಮಿಶ್ರಣವನ್ನು ಫೋರ್ ಫಂಡ್ ಪೋರ್ಟ್‌ಫೋಲಿಯೊ ಎಂದು ಕರೆಯಲಾಗುತ್ತದೆ. ಇದನ್ನು ರಚಿಸುವುದು ಹೇಗೆ? ಯಾರಿಗೆ ಇದು ಸರಿ ಹೊಂದುತ್ತದೆ? ಬನ್ನಿ ತಿಳಿಯೋಣ.

ಫೋರ್ ಫಂಡ್ ಪೋರ್ಟ್‌ಫೋಲಿಯೊ ಎಂದರೇನು?: ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವಾಗ ಯಾವ ಮಾದರಿಯ ಫಂಡ್‌ನಲ್ಲಿ ಎಷ್ಟು ಹೂಡಿಕೆ ಮಾಡಬೇಕು (ಅಸೆಟ್ ಅಲೊಕೇಷನ್) ಎನ್ನುವುದು ಬಹಳ ಮುಖ್ಯ. ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳಬೇಕಾದರೆ ಈ ಅಂಶವನ್ನು ಸದಾ ಗಮನದಲ್ಲಿಟ್ಟುಕೊಳ್ಳಬೇಕು. ಒಂದು ಒಳ್ಳೆಯ ಮ್ಯೂಚುವಲ್ ಫಂಡ್ ಪೋರ್ಟ್‌ಫೋಲಿಯೊ ಅಂದರೆ, ಷೇರು ಮಾರುಕಟ್ಟೆ ಆಧಾರಿತವಾಗಿ ಎರಡು ಇಂಡೆಕ್ಸ್ ಫಂಡ್‌ಗಳು, ಒಂದು ಬಾಂಡ್ ಫಂಡ್ ಮತ್ತು ಗೋಲ್ಡ್ ಫಂಡ್‌ನ ಸಮ್ಮಿಶ್ರಣ ಇರಬೇಕು.

ಅಮೆರಿಕದಲ್ಲಿ ತ್ರಿಫಂಡ್ ಪೋರ್ಟ್‌ಫೋಲಿಯೊ ಅನ್ನೋ ಪರಿಕಲ್ಪನೆ ಬಹಳ ಜನಪ್ರಿಯವಾಗಿದೆ. ಅದೇ ಮಾದರಿಯಲ್ಲಿ ಭಾರತದ ಸನ್ನಿವೇಶಕ್ಕೆ ಫೋರ್ ಫಂಡ್ ಪೋರ್ಟ್‌ಫೋಲಿಯೊ ಸರಿ ಹೊಂದುತ್ತದೆ ಎಂದು ಜೆರೋಧಾ ಸಂಸ್ಥೆಯ ಹಣಕಾಸು ಶಿಕ್ಷಣ ವಿಭಾಗದ ಮುಖ್ಯಸ್ಥ ಕಾರ್ತಿಕ್ ರಂಗಪ್ಪ ಹೇಳುತ್ತಾರೆ.

ಮ್ಯೂಚುವಲ್ ಫಂಡ್ ಹೂಡಿಕೆಗೆ ಹೊಸದಾಗಿ ಪ್ರವೇಶ ಮಾಡುವವರಿಗೆ ಈ ಫೋರ್ ಫಂಡ್ ಪೋರ್ಟ್‌ಫೋಲಿಯೊ ಸರಿಹೊಂದುತ್ತದೆ. ಆದರೆ ನೆನಪಿರಲಿ, ಯಾವುದೇ ವ್ಯಕ್ತಿ ಮ್ಯೂಚುವಲ್ ಫಂಡ್ ಹೂಡಿಕೆಗೆ ಪ್ರವೇಶ ಮಾಡುವ ಮುನ್ನ ಆರೋಗ್ಯ ವಿಮೆ ಮತ್ತು ಜೀವ ವಿಮೆ ಪಡೆದುಕೊಳ್ಳುವುದಕ್ಕೆ ಆದ್ಯತೆ ನೀಡಬೇಕು.

ಈ ಫೋಲಿಯೊದಲ್ಲಿ ಯಾವ ಫಂಡ್ ಇರುತ್ತವೆ?: ಫೋರ್ ಫಂಡ್ ಪೋರ್ಟ್‌ಫೋಲಿಯೊದಲ್ಲಿ ನಿಫ್ಟಿ 50 ಇಂಡೆಕ್ಸ್ ಫಂಡ್, ಮಿಡ್ ಕ್ಯಾಪ್ ಇಂಡೆಕ್ಸ್ ಫಂಡ್, ಅಲ್ಪಾವಧಿ ಅಥವಾ ಮಧ್ಯಮಾವಧಿಯ ಬಾಂಡ್ ಫಂಡ್ ಮತ್ತು ಗೋಲ್ಡ್ ಫಂಡ್ ಅಥವಾ ಗೋಲ್ಡ್ ಇಟಿಎಫ್ ಇರಬೇಕಾಗುತ್ತದೆ. ಈ ಮಿಶ್ರಣ ಇದ್ದಾಗ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

ನಿಫ್ಟಿ 50 ಇಂಡೆಕ್ಸ್ ಫಂಡ್‌ನಲ್ಲಿ ಹೂಡಿಕೆ ಮಾಡಿದಾಗ ದೇಶದ ಅಗ್ರಮಾನ್ಯ ಕಂಪನಿಗಳ ಮೇಲೆ ನಿಮ್ಮ ಹಣ ತೊಡಗಿಸಿದಂತಾಗುತ್ತದೆ. ಅಲ್ಲದೆ ಇಲ್ಲಿ ನಿಫ್ಟಿ 50 ಸೂಚ್ಯಂಕವನ್ನೇ ಹೋಲಿಕೆ ಮಾಡಿ ಹೂಡುವುದರಿಂದ ವೆಚ್ಚ ಅನುಪಾತ (ಎಕ್ಸ್‌ಪೆನ್ಸ್ ರೇಷಿಯೊ) ಅಂದರೆ ಕಮಿಷನ್ ಕಡಿಮೆ ಇರುತ್ತದೆ. ಆರಂಭಿಕ ಹೂಡಿಕೆದಾರರಿಗೆ ಈ ಆಯ್ಕೆ ಅತ್ಯಂತ ಸೂಕ್ತವಾಗುತ್ತದೆ.

ಮಿಡ್ ಕ್ಯಾಪ್ ಇಂಡೆಕ್ಸ್ ಫಂಡ್‌ನಲ್ಲಿ ಹೂಡಿಕೆ ಮಾಡಿದಾಗ ಭವಿಷ್ಯದಲ್ಲಿ ಉತ್ತಮ ಬೆಳವಣಿಗೆ ಸಾಧಿಸುವ ಅವಕಾಶವಿರುವ ಕಂಪನಿಯಲ್ಲಿ ನಿಮ್ಮ ಹಣವಿರುತ್ತದೆ. ಲಾರ್ಜ್‌ಕ್ಯಾಪ್ ಕಂಪನಿಗಳ ಮೌಲ್ಯಕ್ಕಿಂತ ಮಿಡ್‌ಕ್ಯಾಪ್ ಕಂಪನಿಗಳ ಮೌಲ್ಯ ಕಡಿಮೆ ಇದ್ದರೂ ಇಲ್ಲಿ ಬೆಳವಣಿಗೆಯ ಸಾಧ್ಯತೆ ಹೆಚ್ಚಿರುತ್ತದೆ. ಇಂಡೆಕ್ಸ್ ಫಂಡ್‌ಗಳ ಜೊತೆ ಬಾಂಡ್ ಫಂಡ್‌ಗಳೂ ನಿಮ್ಮ ಪೋರ್ಟ್‌ಫೋಲಿಯೊದ ಭಾಗವಾಗಬೇಕು.

ಏಕೆಂದರೆ, ಇಂಡೆಕ್ಸ್ ಫಂಡ್‌ಗಳ ಗಳಿಕೆ ಮೇಲೆ ಮಾರುಕಟ್ಟೆಯ ಏರಿಳಿತದ ರಿಸ್ಕ್ ಹೆಚ್ಚಿಗೆ ಇದ್ದರೆ ಬಾಂಡ್ ಫಂಡ್‌ಗಳಲ್ಲಿ ಈ ರಿಸ್ಕ್ ಕೊಂಚ ಕಡಿಮೆ ಇರುತ್ತದೆ. ಹೀಗಿದ್ದಾಗ ಒಟ್ಟಾರೆ ಪೋರ್ಟ್‌ಫೋಲಿಯೊದಲ್ಲಿ ಒಂದು ಹದ ಕಂಡುಕೊಂಡು ಹೂಡಿಕೆ ವೈವಿಧ್ಯ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇನ್ನೂ ಹೂಡಿಕೆ ಪೋರ್ಟ್‌ಫೋಲಿಯೊದಲ್ಲಿ ಚಿನ್ನಕ್ಕೆ ಸ್ಥಾನ ಕೊಡದಿದ್ದರೆ ಹೇಗೆ? ಹೌದು ಬಂಗಾರ ಒಳ್ಳೆಯ ಹೂಡಿಕೆಯೇ. ಆದರೆ, ಆಭರಣ ಚಿನ್ನ ಒಳ್ಳೆಯ ಹೂಡಿಕೆಯಲ್ಲ. ಚಿನ್ನದ ಮೇಲೆ ಹೂಡಿಕೆ ಮಾಡುವಾಗ ಗೋಲ್ಡ್ ಮ್ಯೂಚುವಲ್ ಫಂಡ್ ಅಥವಾ ಗೋಲ್ಡ್ ಇಟಿಎಫ್ ಪರಿಗಣಿಸಬೇಕು.

ಎಷ್ಟು ಹಣ ಹಂಚಿಕೆ ಮಾಡಬೇಕು?: ನಿಮ್ಮ ವಯಸ್ಸು ಚಿಕ್ಕದಿದೆ. ಈಗಷ್ಟೇ ಮ್ಯೂಚುವಲ್ ಫಂಡ್ ಹೂಡಿಕೆ ಆರಂಭಿಸಿದ್ದೀರಿ ಅಂತಾದರೆ ಈಕ್ವಿಟಿ ಆಧಾರಿತ ಹೂಡಿಕೆಗಳಿಗೆ ಹೆಚ್ಚಿನ ಒತ್ತು ನೀಡಿ. ಅಂದರೆ ನಿಫ್ಟಿ 50 ಇಂಡೆಕ್ಸ್ ಫಂಡ್ ಮತ್ತು ಮಿಡ್ ಕ್ಯಾಪ್ ಇಂಡೆಕ್ಸ್ ಫಂಡ್‌ನಲ್ಲಿ ನಿಮ್ಮ ಉಳಿತಾಯದ ಶೇ 60ರಿಂದ ಶೇ 70ರಷ್ಟು ಹಣ ತೊಡಗಿಸಿ. ಶೇ 20ರಷ್ಟು ಹಣವನ್ನು ಬಾಂಡ್ ಫಂಡ್‌ಗಳ ಮೇಲೆ ಹಾಕಿ. ಇನ್ನುಳಿದ ಶೇ 10ರಷ್ಟು ಮೊತ್ತವನ್ನು ಗೋಲ್ಡ್ ಫಂಡ್‌ಗಳ ಮೇಲೆ ಹೂಡಿಕೆ ಮಾಡಿ. ಈ ನಿಯಮ ಒಂದು ಸಿದ್ಧ ಸೂತ್ರವಲ್ಲ. ಅಂದಾಜು ಅಷ್ಟೇ. ನಿಮ್ಮ ಹಣಕಾಸಿನ ಸ್ಥಿತಿಗತಿ ಮತ್ತು ಅಗತ್ಯಕ್ಕೆ ತಕ್ಕಂತೆ ಇದನ್ನು ಮಾರ್ಪಾಡು ಮಾಡಿಕೊಳ್ಳಬಹುದು.

ಹೂಡಿಕೆ ಮಾಡುವಾಗ ನಿರ್ದಿಷ್ಟ ಗುರಿ ಮುಖ್ಯ: ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವಾಗ ಅನೇಕರಿಗೆ ಯಾವ ಉದ್ದೇಶಕ್ಕೆ ಹೂಡಿಕೆ ಮಾಡುತ್ತಿದ್ದೀವಿ ಎನ್ನುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಮ್ಯೂಚುವಲ್ ಫಂಡ್‌ನಲ್ಲಿ ತೊಡಗಿಸುವಾಗ ನಿವೃತ್ತಿ, ಉನ್ನತ ಶಿಕ್ಷಣ, ಮನೆ ನಿರ್ಮಾಣ, ಕಾರು ಖರೀದಿ ಹೀಗೆ ಒಂದಲ್ಲ ಒಂದು ನಿರ್ದಿಷ್ಟ ಹಣಕಾಸಿನ ಗುರಿ ಇರಬೇಕಾಗುತ್ತದೆ. ಗುರಿ ಕೇಂದ್ರಿತ ಹೂಡಿಕೆಯಿಂದ ದೀರ್ಘಾವಧಿಯಲ್ಲಿ ನಿಗದಿತ ಮೊತ್ತ ಪೇರಿಸಲು ಸಾಧ್ಯವಾಗುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಇಳಿಕೆ ಕಂಡ ಸೂಚ್ಯಂಕಗಳು

ಷೇರುಪೇಟೆ

ಅಕ್ಟೋಬರ್ 31ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಇಳಿಕೆ ದಾಖಲಿಸಿವೆ. 79,389 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.84ರಷ್ಟು ಕುಸಿತ ಕಂಡಿದೆ. 24,205 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.8 ಅಂಶದಷ್ಟು ಇಳಿಕೆಯಾಗಿದೆ.

ಅಕ್ಟೋಬರ್ ತಿಂಗಳಲ್ಲಿ ಒಟ್ಟಾರೆ ಸೆನ್ಸೆಕ್ಸ್ ಶೇ 6.19ರಷ್ಟು ಕುಸಿದಿದ್ದರೆ, ನಿಫ್ಟಿ ಶೇ 6.63ರಷ್ಟು ತಗ್ಗಿದೆ. ₹94 ಸಾವಿರ ಕೋಟಿ ಮೊತ್ತದ ಷೇರುಗಳನ್ನು ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಾರಾಟ ಮಾಡಿದ್ದಾರೆ. ಮಾರ್ಚ್ 2020ರ ಕೋವಿಡ್ ನಂತರದಲ್ಲಿ ತಿಂಗಳೊಂದರ ಅವಧಿಯಲ್ಲಿ ಆಗಿರುವ ಅತಿದೊಡ್ಡ ಮೊತ್ತದ ಮಾರಾಟ ಇದಾಗಿದೆ. 2024-25ನೇ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದಲ್ಲಿ ಕಂಪನಿಗಳು ನಿರೀಕ್ಷಿತ ಬೆಳವಣಿಗೆ ಸಾಧಿಸದಿರುವುದು ಮಾರುಕಟ್ಟೆಯಲ್ಲಿ ಮಾರಾಟದ ಒತ್ತಡಕ್ಕೆ ಕಾರಣವಾಗಿದೆ.

ವಾರದ ಲೆಕ್ಕಾಚಾರದಲ್ಲಿ ವಲಯವಾರು ಪ್ರಗತಿ ನೋಡಿದಾಗ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 4.11, ಆಟೊ ಸೂಚ್ಯಂಕ ಶೇ 3.33, ಬ್ಯಾಂಕ್ ಸೂಚ್ಯಂಕ ಶೇ 0.11ರಷ್ಟು ಕುಸಿದಿವೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 4.59, ಮಾಧ್ಯಮ ಶೇ 4.24, ರಿಯಲ್ ಎಸ್ಟೇಟ್ ಶೇ 1.39, ಫಾರ್ಮಾ ಶೇ 0.73 ಮತ್ತು ಲೋಹ ವಲಯ ಶೇ 0.58ರಷ್ಟು ಗಳಿಸಿಕೊಂಡಿವೆ.

ಇಳಿಕೆ–ಏರಿಕೆ: ನಿಫ್ಟಿಯಲ್ಲಿ ಇಂಡಸ್ ಇಂಡ್ ಬ್ಯಾಂಕ್ ಶೇ 17.45, ಟೆಕ್ ಮಹೀಂದ್ರ ಶೇ 7.28, ಮಾರುತಿ ಸುಜುಕಿ ಶೇ 5.86, ಇನ್ಫೊಸಿಸ್ ಶೇ 5.82, ಕೋಲ್ ಇಂಡಿಯಾ ಶೇ 5.22, ಟಾಟಾ ಮೋಟರ್ಸ್ ಶೇ 5.19, ಟ್ರೆಂಟ್ ಶೇ 4.71, ಬಜಾಜ್ ಆಟೊ ಶೇ 4.57, ಏರ್‌ಟೆಲ್ ಶೇ 4.4, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 4.16, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 3.56 ಮತ್ತು ಬಿಪಿಸಿಎಲ್ ಶೇ 3.33ರಷ್ಟು ಕುಸಿದಿವೆ.

ಎಲ್ ಆ್ಯಂಡ್ ಟಿ ಶೇ 5.27, ಐಷರ್ ಮೋಟರ್ಸ್ ಶೇ 5.21, ಭಾರತ್ ಎಲೆಕ್ಟ್ರಾನಿಕ್ಸ್ ಶೇ 4.96, ಅದಾನಿ ಎಂಟರ್‌ಪ್ರೈಸಸ್ ಶೇ 4.29, ಸಿಪ್ಲಾ ಶೇ 4.12, ಐಟಿಸಿ ಶೇ 3.53, ಎಸ್‌ಬಿಐ ಶೇ 3.21, ಐಸಿಐಸಿಐ ಬ್ಯಾಂಕ್ ಶೇ 3.11, ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 2.03 , ಅದಾನಿ ಪೋರ್ಟ್ಸ್ ಶೇ 1.67, ಎಚ್‌ಯುಎಲ್ ಶೇ 0.98 ಮತ್ತು ವಿಪ್ರೊ ಶೇ 0.89ರಷ್ಟು ಜಿಗಿದಿವೆ.

ಮುನ್ನೋಟ: ಈ ವಾರ ಟಾಟಾ ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಸ್‌ಬಿಐ, ಐಆರ್‌ಎಫ್‌ಸಿ, ಬಾಟಾ ಇಂಡಿಯಾ, ಐಆರ್‌ಸಿಟಿಸಿ, ಸುಂದರಂ ಫೈನಾನ್ಸ್, ಎಕ್ಸೈಡ್, ರೇಮಂಡ್, ಜೆ.ಕೆ. ಪೇಪರ್, ಟೈಟನ್, ಎಂಡ್ಯೂರೆನ್ಸ್ ಟೆಕ್ನಾಲಜೀಸ್, ಎಲ್‌ಐಸಿ, ಎನ್‌ಎಚ್‌ಪಿಸಿ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ವರದಿ ಪ್ರಕಟಿಸುತ್ತಿವೆ.

ಈ ಕಂಪನಿಗಳ ವರದಿ ಎಷ್ಟು ಆಶಾದಾಯಕವಾಗಿದೆ ಎನ್ನುವ ಅಂಶ ಷೇರುಪೇಟೆಯ ಮೇಲೆ ಪರಿಣಾಮ ಬೀರಲಿದೆ. ಉಳಿದಂತೆ ಚೀನಾ ಮಾರುಕಟ್ಟೆಯತ್ತ ವಿದೇಶಿ ಹೂಡಿಕೆದಾರರು ವಾಲಿರುವುದು ಷೇರುಪೇಟೆಗೆ ಪೆಟ್ಟು ಕೊಟ್ಟಿದೆ. ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

₹94 ಸಾವಿರ ಕೋಟಿ ಬಂಡವಾಳ ವಾಪಸ್

ನವದೆಹಲಿ (ಪಿಟಿಐ): ಅಕ್ಟೋಬರ್‌ನಲ್ಲಿ ದೇಶದ ಈಕ್ವಿಟಿ ಮಾರುಕಟ್ಟೆಯಿಂದ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹94 ಸಾವಿರ ಕೋಟಿ ಬಂಡವಾಳವನ್ನು ಹಿಂಪಡೆದಿದ್ದಾರೆ.

2020ರ ಮಾರ್ಚ್‌ನಲ್ಲಿ ₹61,973 ಕೋಟಿ ಬಂಡವಾಳವನ್ನು ವಾಪಸ್ ಪಡೆದಿದ್ದರು. ಆ ಬಳಿಕ ಅತಿಹೆಚ್ಚು ಬಂಡವಾಳ ಹಿಂಪಡೆದಿರುವ ತಿಂಗಳು ಇದಾಗಿದೆ.

ಚೀನಾ ಮಾರುಕಟ್ಟೆಯತ್ತ ವಿದೇಶಿ ಹೂಡಿಕೆದಾರರು ಆಕರ್ಷಿತರಾಗಿದ್ದಾರೆ. ಹಾಗಾಗಿ, ದೇಶೀಯ ಷೇರುಪೇಟೆಯಿಂದ ದಾಖಲೆ ಪ್ರಮಾಣದಲ್ಲಿ ಬಂಡವಾಳದ ಹೊರಹರಿವು ಹೆಚ್ಚಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

‘ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಇನ್ನೂ ನಿಂತಿಲ್ಲ. ಕೆಲವು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಕಡಿತಗೊಳಿಸಿವೆ. ಚೀನಾದ ಆರ್ಥಿಕತೆ ಸುಧಾರಣೆಗೆ ಅಲ್ಲಿನ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಅಮೆರಿಕದ ಅಧ್ಯಕ್ಷೀಯ ಚುನಾವಣೆಯು ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳ ಒಳಹರಿವಿನ ಮೇಲೆ ಪರಿಣಾಮ ಬೀರಲಿದೆ’ ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹300-538

ದ್ವಿತಳಿ (ಬಿ.ವಿ) ₹341-675

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ಸಂಕ್ಷಿಪ್ತ ಸುದ್ದಿ

₹6,000 ಕೋಟಿ ಬಾಕಿ ಸಾಲ ವಸೂಲಿ ಗುರಿ: ಕೆನರಾ ಬ್ಯಾಂಕ್

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ (ಅಕ್ಟೋಬರ್‌ನಿಂದ ಮಾರ್ಚ್) ವಸೂಲಾಗದೆ ಬಾಕಿ ಉಳಿದಿರುವ ಸಾಲದ ಪೈಕಿ ₹6 ಸಾವಿರ ಕೋಟಿ ಸಾಲವನ್ನು ವಸೂಲಿ ಮಾಡುವ ಗುರಿ ಹೊಂದಲಾಗಿದೆ ಎಂದು ಕೆನರಾ ಬ್ಯಾಂಕ್ ತಿಳಿಸಿದೆ.

‘ಮೂರನೇ ತ್ರೈಮಾಸಿಕದಲ್ಲಿ ₹3 ಸಾವಿರ ಕೋಟಿ ಹಾಗೂ ನಾಲ್ಕನೇ ತ್ರೈಮಾಸಿಕದಲ್ಲಿ ಅಷ್ಟೇ ಮೊತ್ತದ ಬಾಕಿ ಸಾಲ ವಸೂಲಿಗೆ ನಿರ್ಧರಿಸಲಾಗಿದೆ’ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು ಅವರು, ಪಿಟಿಐಗೆ ತಿಳಿಸಿದ್ದಾರೆ.

ಎರಡನೇ ತ್ರೈಮಾಸಿಕದಲ್ಲಿ ರೈಟ್ ಆಫ್ ಮೊತ್ತ ಸೇರಿ ₹2,905 ಕೋಟಿ ಸಾಲ ವಸೂಲಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಕೆನರಾ ಬ್ಯಾಂಕ್‌ನ ಅಂಗಸಂಸ್ಥೆಯಾದ ಕೆನರಾ ರೊಬೆಕೊ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯು ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ. ನಾಲ್ಕನೇ ತ್ರೈಮಾಸಿಕದಲ್ಲಿ ಈ ಪ್ರಕ್ರಿಯೆ ಆರಂಭಿಸಲಿದೆ ಎಂದು ಮಾಹಿತಿ ನೀಡಿದ್ದಾರೆ.

85 ಲಕ್ಷ ಟನ್ ಭತ್ತ ಖರೀದಿ

ನವದೆಹಲಿ (ಪಿಟಿಐ): 2024–25ನೇ ಸಾಲಿನ ಮಾರುಕಟ್ಟೆ ವರ್ಷದಲ್ಲಿ ಪಂಜಾಬ್‌ನಲ್ಲಿ ಇಲ್ಲಿಯವರೆಗೆ 85.41 ಲಕ್ಷ ಟನ್ ಭತ್ತ ಖರೀದಿಸಲಾಗಿದೆ ಎಂದು ಕೇಂದ್ರ ಆಹಾರ ಸಚಿವಾಲಯ ಭಾನುವಾರ ತಿಳಿಸಿದೆ.

‘ಭಾರತೀಯ ಆಹಾರ ನಿಗಮದ ರಾಜ್ಯ ಘಟಕದಿಂದ ಖರೀದಿ ಪ್ರಕ್ರಿಯೆ ನಡೆಯುತ್ತಿದೆ. 4 ಲಕ್ಷಕ್ಕೂ ಹೆಚ್ಚು ರೈತರ ಬ್ಯಾಂಕ್ ಖಾತೆಗಳಿಗೆ ₹19,800 ಕೋಟಿ ಪಾವತಿಸಲಾಗಿದೆ’ ಎಂದು ತಿಳಿಸಿದೆ.

ಪ್ರವಾಹದ ಸಂತ್ರಸ್ತರನ್ನು ಭೇಟಿಯಾಗಲು ಪೈಪೋರ್ಥಾ ನಗರಕ್ಕೆ ಬಂದಿದ್ದ ರಾಜ ಆರನೇ ಫಿಲೀಪೆ ಅವರ ಮೇಲೆ ಸಾರ್ವಜನಿಕರು ಕೆಸರು ಎರಚಿದರು. ಭದ್ರತಾ ಪಡೆಗಳು ಕೊಡೆ ಹಿಡಿದು ರಾಜನನ್ನು ರಕ್ಷಿಸಿದರು –ಎಎಫ್‌ಪಿ ಚಿತ್ರ

ಸ್ಪೇನ್: ರಾಜನ ಮೇಲೆ ಕೆಸರು ಎರಚಿದ ಸಂತ್ರಸ್ತರು

ವಲೆನ್ಸಿಯಾ (ಎಪಿ/ಎಎಫ್‌ಪಿ): ಸ್ಪೇನ್‌ನಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದ ಹಾನಿಗೊಳಗಾದ ಸಂತ್ರಸ್ತರನ್ನು ಭೇಟಿಯಾಗಲು ರಾಜ ಆರನೇ ಫಿಲೀಪೆ ಹಾಗೂ ಅವರ ಪತ್ನಿ ರಾಣಿ ಲೆಟಿಜಿಯಾ ಅವರು ಪೈಪೋರ್ಥಾ ನಗರಕ್ಕೆ ಭಾನುವಾರ ಬಂದಿದ್ದರು. ಈ ವೇಳೆ ಅವರ ಮೇಲೆ ಸಂತ್ರಸ್ತರು ಕೆಸರು ಎರಚಿದ್ದಾರೆ. ‘ಇಲ್ಲಿಂದ ಹೊರ ನಡೆಯಿರಿ’, ‘ಕೊಲೆಗಡುಕರು’ ಎಂದು ಘೋಷಣೆ ಕೂಗಿದ್ದಾರೆ.

ಪ್ರವಾಹ ಸಂಭವಿಸಿದ ಬಳಿಕ ಇದೇ ಮೊದಲ ಬಾರಿಗೆ ರಾಜ ಹಾಗೂ ರಾಣಿ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಪ್ರವಾಹದಲ್ಲಿ 200ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಈ ಪೈಕಿ ಪೈಪೋರ್ಥಾ ನಗರವೊಂದರಲ್ಲಿಯೇ 60 ಮಂದಿ ಮೃತಪಟ್ಟಿದ್ದಾರೆ. ಸಂತ್ರಸ್ತರಿಗೆ ರಾಜ ಹಾಗೂ ರಾಣಿ ಅವರಿಗಿಂತ ಪ್ರಧಾನಿ ಪೆದ್ರೊ ಸ್ಯಾಂಚೆಸ್ ಅವರ ಮೇಲೆಯೇ ಹೆಚ್ಚು ಆಕ್ರೋಶವಿದೆ ಎನ್ನಲಾಗಿದೆ.

ಪ್ರವಾಹದ ಬಳಿಕ ಸರ್ಕಾರವು ಪರಿಹಾರ ಹಾಗೂ ಸಂತ್ರಸ್ತರಿಗೆ ನೆರವು ನೀಡುವ ಕುರಿತು ನಿರ್ಲಕ್ಷ್ಯ ಧೋರಣೆ ತೋರಿದೆ ಎಂದು ಸಾರ್ವಜನಿಕರು ಆಕ್ರೋಶಗೊಂಡಿದ್ದಾರೆ. ಈ ಕಾರಣಕ್ಕಾಗಿಯೇ ರಾಜ ಹಾಗೂ ರಾಣಿಯ ಮೇಲೆ ಜನರು ಕೆಸರು ಎರಚಿದ್ದಾರೆ. ಇವರೊಂದಿಗೆ ಬಂದಿದ್ದ ಹಲವು ಅಧಿಕಾರಿಗಳ ಮೇಲೆಯೂ ಸಾರ್ವಜನಿಕರು ಕೆಸರು ಎರಚಿದ್ದಾರೆ.

ಈ ಮಧ್ಯೆಯು ಇಬ್ಬರು ಸಂತ್ರಸ್ತರನ್ನು ಮಾತನಾಡಿಸಲು ಯತ್ನಿಸಿದರು. ಭದ್ರತಾ ಪಡೆಗಳು ಕೊಡೆ ಹಿಡಿದು ಇಬ್ಬರನ್ನೂ ರಕ್ಷಿಸಿದರು. ಬಳಿಕ ತಮ್ಮ ಭೇಟಿಯನ್ನು ರಾಜ ಹಾಗೂ ರಾಣಿ ಮೊಟಕುಗೊಳಿಸಿದರು.

ಕಮಲಾ, ಟ್ರಂಪ್ ಅಬ್ಬರದ ಪ್ರಚಾರ

ಡೆಟ್ರಾಯಿಟ್(ಎಎಫ್‌ಪಿ): ಅಮೆರಿಕದ ಅಧ್ಯಕ್ಷರ ಆಯ್ಕೆಗಾಗಿ ನ.5ರಂದು ಮತದಾನ ನಡೆಯಲಿದ್ದು, ಡೆಮಾಕ್ರಟಿಕ್ ಮತ್ತು ರಿಪಬ್ಲಿಕನ್ ಪಕ್ಷಗಳ ಅಭ್ಯರ್ಥಿಗಳಿಬ್ಬರು ಕೊನೆ ಹಂತದ ಅಬ್ಬರದ ಪ್ರಚಾರ ಕೈಗೊಂಡಿದ್ದಾರೆ.

ಮತದಾನ ಪ್ರಕ್ರಿಯೆ ಆರಂಭವಾಗುವುದಕ್ಕೂ 50 ತಾಸು ಮೊದಲು ಬಹಿರಂಗ ಪ್ರಚಾರಕ್ಕೆ ತೆರೆ ಬೀಳುವ ಕಾರಣ, ಉಭಯ ನಾಯಕರು ಮತದಾರರ ಓಲೈಕೆಗಾಗಿ ಕೊನೆ ಕ್ಷಣದ ಕಸರತ್ತಿಗೆ ಮೊರೆ ಹೋಗಿದ್ದರು. ಪರಸ್ಪರರ ವಿರುದ್ಧ ಟೀಕಾಪ್ರಹಾರವನ್ನೂ ಹರಿತಗೊಳಿಸಿದ್ದರು. ವಿಸ್ಕೊನ್‌ಸಿನ್‌ನಲ್ಲಿ ನಡೆದ ಭಾರಿ ಪ್ರಚಾರಸಭೆಯಲ್ಲಿ ಮಾತನಾಡಿದ ಡೆಮಾಕ್ರಟಿಕ್‌ಪಕ್ಷದಅಭ್ಯರ್ಥಿಕಮಲಾ ಹ್ಯಾರಿಸ್, ‘ಈ ಬಾರಿ ನಮ್ಮದೇ ಗೆಲುವು’ ಎಂದಾಗ ಬೆಂಬಲಿಗರಿಂದ ಭಾರಿ ಕರತಾಡನ ಕೇಳಿಬಂತು.

ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯೂ ಆಗಿರುವ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವರ್ಜೀನಿಯಾದಲ್ಲಿ ಶನಿವಾರ ಪ್ರಚಾರ ನಡೆಸಿದ್ದು, ಪೆನ್ಸಿಲ್ವೇನಿಯಾ, ನಾರ್ತ್ ಕೆರೋಲಿನಾ ಹಾಗೂ ಜಾರ್ಜಿಯಾ ರಾಜ್ಯಗಳಲ್ಲಿ ಬಿರುಸಿನ ಪ್ರಚಾರ ಕೈಗೊಳ್ಳಲಿದ್ದಾರೆ.

7.5 ಕೋಟಿ ಜನರಿಂದ ಹಕ್ಕು ಚಲಾವಣೆ

ನ್ಯೂಯಾರ್ಕ್(ಪಿಟಿಐ): ಆರಂಭಿಕ ಮತದಾನ ಪ್ರಕ್ರಿಯೆಯಲ್ಲಿ ಕೆಲವರು ಮತಗಟ್ಟೆಗಳಿಗೆ ಖುದ್ದಾಗಿ ಬಂದು ಮತ ಚಲಾಯಿಸಿದರೆ, ಮತ್ತೂ ಕೆಲವರು ಅಂಚೆ ಮತದಾನದಲ್ಲಿ ಪಾಲ್ಗೊಂಡರು.

ಈ ವೇಳೆ, 7.5 ಕೋಟಿಗೂ ಅಧಿಕ ಜನರು ತಮ್ಮ ಹಕ್ಕು ಚಲಾಯಿಸಿದ್ದಾರೆ ಎಂದು ಚುನಾವನಾ ಮಂಡಳಿ ಮೂಲಗಳು ಹೇಳಿವೆ. ಆರಂಭಿಕ ಮತದಾನಕ್ಕಾಗಿ ಕಲ್ಪಿಸಿದ್ದ ಅವಕಾಶವನ್ನು ಹೆಚ್ಚು ಜನರು ಬಳಕೆ ಮಾಡಿಕೊಂಡಿದ್ದಾರೆ. ಕೆಲವರು ಖುದ್ದಾಗಿ ಮತಗಟ್ಟೆಗಳಿಗೆ ಬಂದು ಮತ ಚಲಾಯಿಸಿದ್ದರೆ ಇನ್ನೂ ಕೆಲವರು ಅಂಚೆ ಮೂಲಕ ಮತ ಹಾಕಿದ್ದಾರೆ ಎಂದು ಮಂಡಳಿಯ ಕಾರ್ಯಕಾರಿ ನಿರ್ದೇಶಕ ಮೈಕಲ್ ರ್‍ಯಾನ್ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ
Astrology

ಒಂದೇಗಂಟೆಯಲ್ಲಿ 100%ಗ್ಯಾರಂಟಿ ಶಾಶ್ವತಪರಿಹಾರ,ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್. ಪಂಡಿತ್. ಕೃಷ್ಣಪ್ರಸಾದ್. ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ
Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 04.12.2024 13.12.2024 ರಿಂದ 8/11/17 ದಿನಗಳ ಗುಜರಾತ್ ರಾಜಸ್ಥಾನ್. 12.12.2024 28.02.2025 ರಿಂದ 8 ದಿನಗಳ ಕಾಶಿ,ಗಯಾ,ಅಯೋಧ್ಯಾ. 22.12.2024 ರಿಂದ 7 ದಿನಗಳ ತಮಿಳುನಾಡು ಕೇರಳ. 23.12.2024 ರಿಂದ 7 ದಿನಗಳ ಹೈದ್ರಾಬಾದ್ ಮಂತ್ರಾಲಯ ಶ್ರೀಶೈಲ. 12.12.2024 17.02.2025 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 17.01.2025 25.01.2025 ರಿಂದ 6 ದಿನಗಳ ದುಬೈ,ಅಬುದಾಬಿ,ಶಾರ್ಜಾ. 17.01.2025 ರಿಂದ 10 ದಿನಗಳ ಕಾಂಬೋಡಿಯ, ವಿಯೆಟ್ನಂ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
@500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

LOOKING FOR JOB OPPORTUNITY
Refer Classifieds on Wednesday



ಸವಿನೆನಪು

ಡಾ.ಆರ್. ಶಿವರಾಮಯ್ಯ, MVSc.
(ನಿವೃತ್ತ ಸಹಾಯಕ ನಿರ್ದೇಶಕರು, AH&VS)
ನಿಧನ: 04-11-2023

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ. ನಿಮ್ಮ ನೆನಪು ಸದಾ ಹಸಿರು, ನಿಮ್ಮ ಪ್ರೀತಿ ಹಾಗೂ ಆದರ್ಶಮಯ ಜೀವನ ನಮಗೆ ದಾರಿದೀಪ. ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ,

ಇಂತಿ ದುಃಖತಪ್ತರು:
ಧರ್ಮಪತ್ನಿ ಮತ್ತು ಮಕ್ಕಳು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಗೌರಮ್ಮ
ದಿವಂಗತ ಶ್ರೀ ಜಯರಾಮ ರೆಡ್ಡಿಯವರ ಪತ್ನಿ
ನಿಧನ:-03/11/2024

ಅಂತಿಮ ಕಾರ್ಯವನ್ನು **ಇಂದಿರನಗರದ** ಸಿ.ಎಮ್.ಹೆಚ್ ರಸ್ತೆಯಲ್ಲಿರುವ **ಲಕ್ಷ್ಮೀಪುರ ರುದ್ರಭೂಮಿಯಲ್ಲಿ** ಮಧ್ಯಾಹ್ನ **12:30** ಗಂಟೆಗೆ ನೆರವೇರಲಿದೆ.
“ನಿಮ್ಮ ಆದರ್ಶ ಜೀವನವು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರವಾಗಿದ್ದು ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುವುದು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುವ.”
–ಡಾ.ಜೆ.ರಾಮಚಂದ್ರ ಮತ್ತು ಕುಟುಂಬದವರು.

ಗ್ರೆನೇಡ್ ದಾಳಿ; 12 ಮಂದಿಗೆ ಗಾಯ

ಶ್ರೀನಗರದ ಸಿಆರ್‌ಪಿಎಫ್ ಬಂಕರ್ ಗುರಿ; ಜನದಟ್ಟಣೆಯ ಮಾರುಕಟ್ಟೆಯಲ್ಲಿ ಸ್ಫೋಟ • ಭದ್ರತೆ ಹೆಚ್ಚಳ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರದ ಮಾರುಕಟ್ಟೆಯಲ್ಲಿ ಉಗ್ರರು ಗ್ರೆನೇಡ್ ದಾಳಿ ನಡೆಸಿದ ಬಳಿಕ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು

ಪಿಟಿಐ ಚಿತ್ರ

ಶ್ರೀನಗರ: ಇಲ್ಲಿನ ತೀವ್ರ ಜನಸಂದಣಿ ಹೊಂದಿದ ಮಾರುಕಟ್ಟೆಯೊಂದರ ಬಳಿ 'ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಬಂಕರ್' ಗುರಿಯಾಗಿಸಿ ಭಯೋತ್ಪಾದಕರು ಭಾನುವಾರ ಗ್ರೆನೇಡ್ ದಾಳಿ ನಡೆಸಿದ್ದಾರೆ. ಘಟನೆಯಲ್ಲಿ 12 ಮಂದಿ ಗಾಯಗೊಂಡಿದ್ದಾರೆ.

ಹೆಚ್ಚು ಭದ್ರತೆ ಹೊಂದಿರುವ ಆಲ್ ಇಂಡಿಯಾ ರೇಡಿಯೊ ಹಾಗೂ ದೂರದರ್ಶನ ಕೇಂದ್ರದ ಪ್ರವಾಸಿ ಸ್ವಾಗತ ಕೇಂದ್ರದ (ಟಿಆರ್‌ಸಿ) ಬಳಿ ಈ ದಾಳಿ ನಡೆದಿದೆ.

'ಸಿಆರ್‌ಪಿಎಫ್ ಬಂಕರ್ ಅನ್ನು ಗುರಿಯಾಗಿಸಿ ಗ್ರೆನೇಡ್ ಎಸೆದಿದ್ದಾರೆ. ಆದರೆ ಗುರಿ ತಪ್ಪಿ ರಸ್ತೆ ಬದಿಗೆ ಬಿದ್ದಿದೆ. ಗಾಯಾಳುಗಳಲ್ಲಿ ಬೀದಿ ವ್ಯಾಪಾರಿಗಳೇ ಹೆಚ್ಚಿದ್ದು, ಇಬ್ಬರು ಮಹಿಳೆಯರು, ನಾಲ್ವರು ಮಕ್ಕಳಿಗೂ ಗಾಯಗಳಾಗಿವೆ. ಕೂಡಲೇ ಅವರನ್ನು ಎಸ್‌ಎಂಎಚ್‌ಎಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಈ ಪೈಕಿ ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಪಾಕಿಸ್ತಾನ ಮೂಲದ ಲಷ್ಕರ್-ಎ-ತಯಬಾ (ಎಲ್‌ಇಟಿ) ಭಯೋತ್ಪಾದಕ ಸಂಘಟನೆಯ ಹಿರಿಯ ಕಮಾಂಡರ್ ಉಸ್ಮಾನ್ ಭಾಯಿಯನ್ನು ನವೆಂಬರ್ 2ರಂದು ಸೇನೆಯು ಹತ್ಯೆಗೈದಿತ್ತು. ಇದರಿಂದ ಹತಾಶೆಗೊಂಡು ಭಯೋತ್ಪಾದಕರು ಈ ದಾಳಿ ನಡೆಸಿದ್ದಾರೆ' ಎಂದು ಹೇಳಿದ್ದಾರೆ.

ಪೊಲೀಸರು ಹಾಗೂ ಅರೆಸೇನಾಪಡೆಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ. ಪ್ರಕರಣದ ಬಗ್ಗೆ ತನಿಖೆ ಆರಂಭಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕಳೆದ ಕೆಲವು ದಿನಗಳಿಂದ ಕಣಿವೆ ಭಾಗದ ಕೆಲವು ಕಡೆಗಳಲ್ಲಿ ನಡೆದ ಎನ್‌ಕೌಂಟರ್‌ನಿಂದ ಸುದ್ದಿಯಾಗಿತ್ತು. ಈಗ ಶ್ರೀನಗರದ ಅಮಾಯಕ ಅಂಗಡಿ ಮಾಲೀಕರ ಮೇಲೆ ಗ್ರೆನೇಡ್ ದಾಳಿಯಾಗಿದ್ದು, ತೀವ್ರವಾಗಿ ಆಘಾತ ಕ್ಕೊಳಗಾಗಿದ್ದೇನೆ. ನಾಗರಿಕರನ್ನು ಗುರಿಯಾಗಿರಿಸಿ ನಡೆದ ದಾಳಿಯು ಸಮರ್ಥನೀಯವಾದುದಲ್ಲ' ಎಂದು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು 'ಎಕ್ಸ್' ಮೂಲಕ ಖಂಡನೆ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಖಂಡನೆ: ಭಯೋತ್ಪಾದಕರ ದಾಳಿ ತಡೆಯಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

'ಅಂಗಡಿ ಮಾಲೀಕರ ಮೇಲೆ ದಾಳಿ ನಡೆದಿರುವುದು ದುರದೃಷ್ಟಕರವಾಗಿದ್ದು, ತೀವ್ರ ಆಘಾತ ಉಂಟುಮಾಡಿದೆ' ಎಂದು ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್ ಘಟಕದ ಅಧ್ಯಕ್ಷ ತಾರೀಕ್ ಹಮೀದ್ ಕರ್ರ ತಿಳಿಸಿದ್ದಾರೆ.

'ಇಂತಹ ಕ್ರೂರ ಹಾಗೂ ಅಮಾನವೀಯ ದಾಳಿ ತಡೆಯುವ ನಿಟ್ಟಿನಲ್ಲಿ ಪೊಲೀಸರು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಜನರು ಯಾವುದೇ ಭೀತಿಯಿಲ್ಲದೇ ಮುಕ್ತವಾಗಿ ಓಡಾಡುವಂತಹ ವಾತವರಣ ಸೃಷ್ಟಿಸಬೇಕು' ಎಂದು ಆಗ್ರಹಿಸಿದ್ದಾರೆ.

ಉಗ್ರರ ಸಹಚರರ ಬಂಧನ: ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆಯೊಂದಿಗೆ ನಂಟು ಹೊಂದಿದ ಆರೋಪದ ಮೇಲೆ ತಹಾಬ್ ಪ್ರದೇಶದ ನಿವಾಸಿ ಸಜಾದ್ ಅಹಮ್ಮದ್ ದರ್‌ನನ್ನು ಭದ್ರತಾ ಪಡೆಗಳು ಭಾನುವಾರ ಬಂಧಿಸಿವೆ.

ಸೇನೆ, ಸಿಆರ್‌ಪಿಎಫ್ ಹಾಗೂ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಆತನಿಂದ ಪಿಸ್ತೂಲ್, 2 ಜೀವಂತ ಗ್ರೆನೇಡ್, ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ವಶಪಡಿಸಿ ಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಠಿಣ ಕ್ರಮಕ್ಕೆ ಎಲ್.ಜಿ ಸೂಚನೆ

ಶ್ರೀನಗರ (ಪಿಟಿಐ): 'ದಾಳಿ ನಡೆಸಿದ ಭಯೋತ್ಪಾದಕರಿಗೆ ತಕ್ಕ ಪ್ರತ್ಯುತ್ತರ ನೀಡಬೇಕು' ಎಂದು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

'ಭಯೋತ್ಪಾದಕರನ್ನು ಮಟ್ಟಹಾಕುವ ನಿಟ್ಟಿನಲ್ಲಿ ಭದ್ರತಾ ಪಡೆಗಳು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಡಿಜಿಪಿ ನಳಿನ್ ಪ್ರಭಾತ್, ಭದ್ರತಾ ಪಡೆಗಳಿಗೆ ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದಾರೆ' ಎಂದು ರಾಜ್ಯಪಾಲರ ಅಧಿಕೃತ ವಕ್ತಾರರು ತಿಳಿಸಿದ್ದಾರೆ.

'ಭಯೋತ್ಪಾದಕರನ್ನು ಬಗ್ಗುಬಡಿಯಲು ಪೂರ್ಣ ಸ್ವಾತಂತ್ರ್ಯವಿದೆ. ನಾಗರಿಕರ ಮೇಲೆ ದಾಳಿ ನಡೆಸಿದವರು ಭಾರಿ ಬೆಲೆ ತೆರಲಿದ್ದಾರೆ' ಎಂದು ಸಿನ್ಹಾ ಎಚ್ಚರಿಸಿದ್ದಾರೆ.

3 ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕ

ಕೊಲಿಜಿಯಂ ಶಿಫಾರಸು: ಕಾಣದ ಪ್ರಗತಿ

ನವದೆಹಲಿ (ಪಿಟಿಐ): ಮೂರು ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕಕ್ಕಾಗಿ ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಕೊಲಿಜಿಯಂ ನಾಲ್ವರು ವಕೀಲರ ಹೆಸರುಗಳನ್ನು ಶಿಫಾರಸು ಮಾಡಿತ್ತು. ಆದರೆ, ಈ ದಿಸೆಯಲ್ಲಿ ಯಾವುದೇ ಪ್ರಗತಿಯಾಗಿಲ್ಲ.

ಸಿಜೆಐ ಚಂದ್ರಚೂಡ್ ಅವರು ಇದೇ 10ರಂದು ನಿವೃತ್ತರಾಗಲಿದ್ದಾರೆ ಎಂಬುದು ಗಮನಾರ್ಹ.

ಹಿರಿಯ ವಕೀಲ ಸೌರಭ್ ಕೃಪಾಲ್ ಅವರನ್ನು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಆಗಿ, ಆರ್.ಜಾನ್ ಸತ್ಯನ್ ಅವರನ್ನು ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ, ಅಮಿತೇಶ್ ಬ್ಯಾನರ್ಜಿ ಹಾಗೂ ಸಾಕ್ಯ ಸೇನ್ ಅವರನ್ನು ಕಲ್ಕತ್ತ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡುವುದಕ್ಕೆ ಕೊಲಿಜಿಯಂ ಶಿಫಾರಸು ಮಾಡಿತ್ತು.

ಮತ್ತೊಬ್ಬ ವಕೀಲ ಸೋಮಶೇಖರ್ ಸುಂದರೇಶನ್ ಅವರನ್ನು ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಮಾಡುವಂತೆಯೂ ಶಿಫಾರಸು ಮಾಡಿತ್ತು.

ಈ ವಕೀಲರನ್ನು ನ್ಯಾಯಮೂರ್ತಿಗಳಾಗಿ ನೇಮಕ ಮಾಡುವಂತೆ ಕಳೆದ ವರ್ಷ ಜನವರಿಯಲ್ಲಿ ಕೊಲಿಜಿಯಂ ಮತ್ತೊಮ್ಮೆ ಶಿಫಾರಸು ಮಾಡಿತ್ತು. ಈ ಪೈಕಿ, ಕಳೆದ ವರ್ಷ ನವೆಂಬರ್‌ನಲ್ಲಿ ಸೋಮಶೇಖರ್ ಸುಂದರೇಶನ್ ಅವರನ್ನು ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ.

ವಕೀಲರಾದ ಕೃಪಾಲ್, ಸತ್ಯನ್, ಬ್ಯಾನರ್ಜಿ ಹಾಗೂ ಸೇನ್ ಅವರ ನೇಮಕಕ್ಕೆ ಸಂಬಂಧಿಸಿದ ಕಡತಗಳನ್ನು ಕೇಂದ್ರ ಸರ್ಕಾರ ಇದುವರೆಗೂ ವಿಲೇವಾರಿ ಮಾಡಿಲ್ಲ ಎಂದು ಮೂಲಗಳು ಹೇಳಿವೆ.

ಸಂಚಾರ ಪೊಲೀಸರನ್ನು ಎಳೆದೊಯ್ದ ಸವಾರ

ನವದೆಹಲಿ (ಪಿಟಿಐ): ಕರ್ತವ್ಯನಿರತ ಇಬ್ಬರು ಸಂಚಾರ ಪೊಲೀಸರನ್ನು 20 ಮೀಟರ್ ದೂರದವರೆಗೆ ಎಳೆದೊಯ್ದ ಪ್ರಕರಣವೊಂದು ದಕ್ಷಿಣ ದೆಹಲಿಯಲ್ಲಿ ನಡೆದಿದೆ.

ಘಟನೆಯು ಶನಿವಾರ ರಾತ್ರಿ 7.45ರ ಸುಮಾರಿಗೆ ನಡೆದಿದೆ. ವೇದಾಂತ್ ದೇಶಿಕಾ ಮಾರ್ಗ್‌ನಲ್ಲಿ ಎಎಸ್‌ಐ ಪ್ರಮೋದ್ ಹಾಗೂ ಕಾನ್‌ಸ್ಟೆಬಲ್ ಶೈಲೇಶ್ ಕರ್ತವ್ಯದಲ್ಲಿ ಇದ್ದರು. ಸಿಗ್ನಲ್‌ನಲ್ಲಿ ನಿಲ್ಲುವ ಸೂಚನೆಯನ್ನು (ಕೆಂಪು ದೀಪ) ಉಲ್ಲಂಘಿಸಿ ವಾಹನವೊಂದು ಮುಂದೆ ಸಾಗಿತು. ವಾಹನ ನಿಲ್ಲಿಸುವಂತೆ ಶೈಲೇಶ್ ಅವರು ಸವಾರನಿಗೆ ಸೂಚಿಸಿದರು.

ಸೂಚನೆಯಂತೆ ಮೊದಲು ವಾಹನ ನಿಲ್ಲಿಸಿದ್ದ ಸವಾರ ನಂತರ ಏಕಾಏಕಿ ಇಬ್ಬರು ಪೊಲೀಸರನ್ನು ವಾಹನದೊಂದಿಗೆ 20 ಮೀಟರ್ ನಷ್ಟು ದೂರಕ್ಕೆ ಎಳೆದೊಯ್ದಿದ್ದಾರೆ. ನಂತರ ವೇಗವಾಗಿ ಮುಂದೆ ಸಾಗಿದ್ದಾರೆ. ಹತ್ತಿರದ ಪೊಲೀಸ್ ಠಾಣೆಗೆ ಘಟನೆ ಕುರಿತು ಕರೆ ಬಂದಿತ್ತು. ಬಳಿಕ ಪೊಲೀಸರ ತಂಡವು ತಕ್ಷಣವೇ ಘಟನಾ ಸ್ಥಳಕ್ಕೆ ತೆರಳಿತು. ಗಾಯಗೊಂಡ ಪೊಲೀಸರು ಈ ಬಗ್ಗೆ ಹೇಳಿಕೆ ನೀಡಿದ್ದಾರೆ.

'ಪ್ರಮೋದ್ ಹಾಗೂ ಶೈಲೇಶ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಅವರನ್ನು ಕೊಲ್ಲಬೇಕು ಎಂಬ ಉದ್ದೇಶದಿಂದಲೇ ಸವಾರ ಅವರನ್ನು ಎಳೆದೊಯ್ದಿದ್ದಾರೆ. ಕೊಲೆ ಯತ್ನ, ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ ಹಾಗೂ ಸಾರ್ವಜನಿಕರ ಜೀವವನ್ನು ಅಪಾಯಕ್ಕೆ ದೂಡುವ ಕಾಯ್ದೆಗಳ ಅಡಿಯಲ್ಲಿ ಸವಾರನ ಮೇಲೆ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಘಟನೆ ಕುರಿತು ಎರಡು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕಾರು ಇಬ್ಬರು ಪೊಲೀಸರನ್ನು ಎಳೆದೊಯ್ಯುತ್ತಿರುವುದು, ಇಬ್ಬರೂ ಕಾರಿನ ಬಾನೆಟ್ ಅನ್ನು ಹಿಡಿಕೊಂಡಿರುವುದು ನಂತರ ಕಾರು ವೇಗವಾಗಿ ಸಂಚರಿಸಿದ ದೃಶ್ಯಗಳು ವಿಡಿಯೊಗಳಲ್ಲಿವೆ. ಸವಾರ ಬ್ರೇಕ್ ಹಾಕಿದ ನಂತರ ಪೊಲೀಸರೊಬ್ಬರು ಕೆಳಗೆ ಬಿದ್ದಿರುವ ದೃಶ್ಯಗಳೂ ಇದರಲ್ಲಿ ಇವೆ.

ಜನಸಂದಣಿ.. ನವದೆಹಲಿಯ ಆನಂದವಿಹಾರ್ ರೈಲು ನಿಲ್ದಾಣದಲ್ಲಿನ ರೈಲೊಂದು 'ಛತ್ ಪೂಜೆ'ಗಾಗಿ ತಮ್ಮ ಊರುಗಳಿಗೆ ತೆರಳಿದ ಜನರಿಂದ ತುಂಬಿತ್ತು ಪಿಟಿಐ ಚಿತ್ರ

ಸ್ಥಳೀಯರಿಂದ ಪ್ರತಿಭಟನೆ • ಯಾರನ್ನೂ ಸ್ಥಳಾಂತರಿಸಬಾರದು: ಸಿಪಿಐ ಆಗ್ರಹ

ಕೇರಳದಲ್ಲೂ ವಕ್ಫ್ ಭೂಮಿ ವಿವಾದ

ತಿರುವನಂತಪುರ (ಪಿಟಿಐ): ಕೇರಳದ ಎರ್ನಾಕುಳಂ ಜಿಲ್ಲೆಯ ಮುನಂಬಮ್‌ನಲ್ಲಿ ವಕ್ಫ್ ಭೂಮಿ ವಿವಾದಕ್ಕೆ ಸಂಬಂಧಿಸಿದಂತೆ ಕ್ಯಾಥೋಲಿಕ್ ಚರ್ಚ್‌ನ ಬೆಂಬಲದೊಂದಿಗೆ ಸ್ಥಳೀಯ ನಿವಾಸಿಗಳು ತೀವ್ರ ಪ್ರತಿಭಟನೆ ನಡೆಸಿದ್ದಾರೆ. ಇದರ ಬೆನ್ನಲ್ಲೇ ಯಾರೊಬ್ಬರನ್ನೂ ಸ್ಥಳಾಂತರಿಸಬಾರದು ಎಂದು ಸಿಪಿಐ ಆಗ್ರಹಿಸಿದೆ.

ಮುನಂಬಮ್ ಗ್ರಾಮಗಳಲ್ಲಿ ತಲೆಮಾರುಗಳಿಂದ ಕ್ರಿಶ್ಚಿಯನ್ ಕುಟುಂಬಗಳಿಗೆ ಸೇರಿದ ಹಲವು ಆಸ್ತಿಗಳ ಮೇಲೆ ವಕ್ಫ್ ಮಂಡಳಿ ಕಾನೂನು ಬಾಹಿರವಾಗಿ ಹಕ್ಕು ಸಾಧಿಸುತ್ತಿದೆ ಎಂದು ಚರ್ಚ್ ಗಂಭೀರ ಆರೋಪ ಮಾಡಿದೆ.

'ನೋಂದಾಯಿತ ಪತ್ರಗಳು, ಭೂ ತೆರಿಗೆ ಪಾವತಿ ರಸೀದಿಗಳು ಇದ್ದ ಹೊರತಾಗಿಯೂ ವಕ್ಫ್ ಮಂಡಳಿಯು ನಮ್ಮ ಭೂಮಿ ಮತ್ತು ಆಸ್ತಿಗಳ ಮೇಲೆ ಕಾನೂನುಬಾಹಿರವಾಗಿ ಹಕ್ಕು ಪ್ರತಿಪಾದಿಸುತ್ತಿದೆ' ಎಂದು ಎರ್ನಾಕುಳಂ ಜಿಲ್ಲೆಯ ಚೆರಾಯಿ ಮತ್ತು ಮುನಂಬಮ್ ಗ್ರಾಮಗಳ ನಿವಾಸಿಗಳು ದೂರಿದ್ದಾರೆ.

ಪ್ರತಿಭಟನೆ ನಡೆಸುತ್ತಿರುವ ನಿವಾಸಿಗಳ ಪ್ರಕಾರ, 1950ರಲ್ಲಿ ಅವರ ಜಮೀನನ್ನು ಕೋಯಿಕ್ಕೋಡ್‌ನ ಫಾರೂಕ್ ಕಾಲೇಜಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ನೀಡಲಾಗಿತ್ತು. ಇದು ವಕ್ಫ್ ಭೂಮಿಯಲ್ಲ. ಅದಾಗ್ಯೂ ಈ ಭೂ ವಿವಾದಕ್ಕೆ ಸಂಬಂಧಿಸಿದ ಪ್ರಕರಣ ಕುರಿತು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ ಎಂದು ಹೇಳಿದರು.

ಕರ್ನಾಟಕದಂತೆ ಕೇರಳದಲ್ಲೂ ವಕ್ಫ್ ಭೂ ವಿವಾದ ರಾಜಕೀಯ ಚರ್ಚಾ ವಿಷಯವಾಗಿ ಮಾರ್ಪಟ್ಟಿದ್ದು, ವಿವಿಧ ಪಕ್ಷಗಳು ಪ್ರತಿಕ್ರಿಯಿಸಿವೆ.

ಸಿಪಿಐ ಎಚ್ಚರಿಕೆ: ಆಡಳಿತಾರೂಢ ಎಲ್‌ಡಿಎಫ್‌ನ ಎರಡನೇ ಅತಿದೊಡ್ಡ ಪಾಲುದಾರ ಪಕ್ಷವಾದ ಸಿಪಿಐ, ಸಮಾಜದಲ್ಲಿ ಕೋಮು ವಿಭಜನೆ ಸೃಷ್ಟಿಸಲು ಪಟ್ಟಭದ್ರ ಹಿತಾಸಕ್ತಿಗಳು ಯತ್ನಿಸುತ್ತಿವೆ ಎಂದು ಎಚ್ಚರಿಕೆ ನೀಡಿದೆ.

'ಮುನಂಬಮ್‌ನಿಂದ ಯಾರನ್ನೂ ಒಕ್ಕಲೆಬ್ಬಿಸಬಾರದು ಎಂಬುದು ಪಕ್ಷದ ನಿಲುವಾಗಿದೆ. ವಕ್ಫ್ ಭೂಮಿಯೇ ಆಗಲಿ, ದೇವಸ್ವಂ ಭೂಮಿಯೇ ಆಗಲಿ ಬಡವರನ್ನು ಸ್ಥಳಾಂತರಿಸಬಾರದು' ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಬಿನೋಯ್ ವಿಶ್ವಂ 'ಫೇಸ್‌ಬುಕ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮುನಂಬಮ್ ವಿಷಯದಲ್ಲಿ ಕೆಲವರು ಕೋಮುವಾದ ಪ್ರಚೋದಿಸಲು ಯತ್ನಿಸುತ್ತಿದ್ದಾರೆ. ಆರ್‌ಎಸ್‌ಎಸ್, ಎಸ್‌ಡಿಪಿಐ ಕ್ರಮವಾಗಿ ಹಿಂದೂ ಮತ್ತು ಮುಸ್ಲಿಂ ಮತಾಂಧತೆಯ ಬೀಜಗಳನ್ನು ಬಿತ್ತುತ್ತಿವೆ ಎಂದು ಅವರು ಪೋಸ್ಟ್‌ನಲ್ಲಿ ದೂರಿದ್ದಾರೆ.

ಕೇಂದ್ರ ಸರ್ಕಾರ ಪರಿಚಯಿಸಿರುವ ವಕ್ಫ್ (ತಿದ್ದುಪಡಿ) ಮಸೂದೆ-2024 ಅನ್ನು ವಿರೋಧಿಸಿ ಎಲ್‌ಡಿಎಫ್ ಮತ್ತು ಯುಡಿಎಫ್ ರಂಗಗಳು ಇತ್ತೀಚೆಗೆ ರಾಜ್ಯ ವಿಧಾನಸಭೆಯಲ್ಲಿ ಅವಿರೋಧವಾಗಿ ನಿರ್ಣಯ ಅಂಗೀಕರಿಸಿದ್ದವು.

ವಿರೋಧ ಪಕ್ಷವಾದ ಕಾಂಗ್ರೆಸ್‌ನ ನಾಯಕ ವಿ.ಡಿ.ಸತೀಶನ್, 'ಮುನಂಬಮ್‌ನಲ್ಲಿರುವ ವಿವಾದಿತ ಭೂಮಿಯು ವಕ್ಫ್ ಮಂಡಳಿಗೆ ಸೇರಿದ್ದಲ್ಲ ಎಂಬುದು ನಮ್ಮ ಪಕ್ಷದ ನಿಲುವಾಗಿದೆ. ಸರ್ಕಾರ ಬಯಸಿದರೆ ಈ ಸಮಸ್ಯೆಯನ್ನು 10 ನಿಮಿಷಗಳಲ್ಲಿ ಪರಿಹರಿಸಬಹುದು' ಎಂದು ಹೇಳಿದ್ದರು.

ಸುರೇಶ್ ಗೋಪಿ ವಿರುದ್ಧ ಎಫ್‌ಐಆರ್

ತ್ರಿಶ್ಶೂರ್ (ಪಿಟಿಐ): ಆಂಬುಲೆನ್ಸ್ ದುರುಪಯೋಗ ಮಾಡಿದ ಆರೋಪದಡಿ ಕೇಂದ್ರ ಸಚಿವ ಸುರೇಶ್ ಗೋಪಿ ಮತ್ತು ಇನ್ನಿಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ.

ಏಪ್ರಿಲ್ ತಿಂಗಳಿನಲ್ಲಿ ಕೇರಳದಲ್ಲಿ ನಡೆದಿದ್ದ 'ತ್ರಿಶ್ಶೂರ್ ಪೂರಂ' ಉತ್ಸವದ ವೇಳೆ ಸುರೇಶ್ ಗೋಪಿ ಅವರು ಆಂಬುಲೆನ್ಸ್‌ನಲ್ಲಿ ಪ್ರಯಾಣಿಸಿದ್ದಾರೆ ಎಂಬ ಆರೋಪದಡಿ ಸುರೇಶ್ ಗೋಪಿ, ಅಭಿಜೀತ್ ನಾಯರ್ ಮತ್ತು ಆಂಬುಲೆನ್ಸ್ ಚಾಲಕನ ವಿರುದ್ಧ ತ್ರಿಶ್ಶೂರ್ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಇರಾನ್: ಅರೆನಗ್ನಳಾಗಿ ಪ್ರತಿಭಟಿಸಿದ ಯುವತಿ

ದುಬೈ (ರಾಯಿಟರ್ಸ್): ದೇಶದಲ್ಲಿ ಕಠಿಣ ಇಸ್ಲಾಮಿಕ್ ವಸ್ತ್ರ ಸಂಹಿತೆ ಜಾರಿಗೊಳಿಸಿದ್ದನ್ನು ವಿರೋಧಿಸಿ ಇರಾನ್‌ನ ಇಸ್ಲಾಮಿಕ್ ಆಜಾದ್ ಯುನಿವರ್ಸಿಟಿ ಆವರಣದಲ್ಲಿ ಒಬ್ಬ ಯುವತಿ ಒಳ ಉಡುಪು ಮಾತ್ರ ಧರಿಸಿ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಈ ಕುರಿತ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು, ಮಾಧ್ಯಮಗಳು ಕೂಡ ಈ ವಿಡಿಯೊಗಳನ್ನು ಹಂಚಿಕೊಂಡಿವೆ.

ಶನಿವಾರ ಈ ಘಟನೆ ನಡೆದಿದೆ. ವಿಶ್ವವಿದ್ಯಾಲಯದ ವಿಭಾಗವೊಂದರ ಭದ್ರತಾ ಸಿಬ್ಬಂದಿ, ಯುವತಿಯನ್ನು ಬಂಧಿಸಿದ ದೃಶ್ಯಗಳು ವಿಡಿಯೊದಲ್ಲಿವೆ.

'ಯುವತಿ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದು, ಆಕೆ ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದಳು ಎಂಬುದು ಪೊಲೀಸರು ಕೈಗೊಂಡ ವಿಚಾರಣೆ ವೇಳೆ ತಿಳಿದುಬಂದಿದೆ' ಎಂದು ವಿಶ್ವವಿದ್ಯಾಲಯ ವಕ್ತಾರ ಅಮಿರ್ ಮಹಜೂಬ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಯುವತಿ ಉದ್ದೇಶಪೂರ್ವಕವಾಗಿ ಈ ರೀತಿ ಮಾಡಿದ್ದಾಳೆ ಎಂದು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಾರೆ.

'ಒಳ ಉಡುಪು ಮಾತ್ರ ಧರಿಸಿ ಸಾರ್ವಜನಿಕವಾಗಿ ಈ ರೀತಿ ಓಡಾಡುವುದು ಬಹುತೇಕ ಮಹಿಳೆಯರ ಪಾಲಿಗೆ ಭಯಾನಕ ಸಂಗತಿಗಳಲ್ಲೊಂದು. ಕಡ್ಡಾಯವಾಗಿ ಹಿಜಾಬ್ ಧರಿಸಬೇಕು ಎಂಬ ಸರ್ಕಾರದ ಅಸಂಬದ್ಧ ನಿರ್ದೇಶನಕ್ಕೆ ವ್ಯಕ್ತವಾದ ಪ್ರತಿಕ್ರಿಯೆ ಇದು' ಎಂದು ಲೀ ಲಾ ಎಂಬುವವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಘಟನೆ ಕುರಿತ ವಿಡಿಯೊವನ್ನು ಕೂಡ ಹಂಚಿಕೊಂಡಿದ್ದಾರೆ.

ಈ ರೀತಿ ಓಡಾಡಿದ ಯುವತಿಯ ಸ್ಥಿತಿ ನಂತರ ಏನಾಗಿದೆ ಎಂಬುದು ತಿಳಿದಿಲ್ಲ. 'ಈ ರೀತಿ ಪ್ರತಿಭಟನೆ ನಡೆಸಿದ ಯುವತಿ ವಿಪರೀತ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಳು. ತಪಾಸಣೆ ನಂತರ ಆಕೆಯನ್ನು ಮಾನಸಿಕ ಆಸ್ಪತ್ರೆಗೆ ದಾಖಲಿಸುವ ಸಾಧ್ಯತೆ ಇದೆ' ಎಂದು, ಇರಾನ್‌ನ ಆನ್‌ಲೈನ್ ಸುದ್ದಿತಾಣ 'ಹಮ್‌ಶಹ್ರಿ' ವರದಿ ಮಾಡಿದೆ.

ಹಿಂದಿಯಲ್ಲಿ ಪತ್ರಕ್ಕೆ ಸಂಸದ ಆಕ್ಷೇಪ

ನವದೆಹಲಿ (ಪಿಟಿಐ): 'ಕೇಂದ್ರ ಸಚಿವ ರವನೀತ್ ಬಿಟ್ಟೂ ಅವರು ಹಿಂದಿಯೇತರ ಭಾಷಿಕರಿಗೂ ಉದ್ದೇಶಪೂರ್ವಕವಾಗಿ ಹಿಂದಿಯಲ್ಲೇ ಪತ್ರ ಬರೆಯುತ್ತಿದ್ದಾರೆ' ಎಂದು ಟೀಕಿಸಿರುವ ಸಿಪಿಎಂ ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್ ಪ್ರತಿಭಟನೆಯಾಗಿ ಮಲಯಾಳದಲ್ಲಿ ಪತ್ರ ಬರೆದಿದ್ದಾರೆ.

'ಪತ್ರದಲ್ಲಿ ನಾನು ಮಲಯಾಳ ಭಾಷೆಯಲ್ಲಿ ಬರೆದಿರುವುದನ್ನು ಅರ್ಥಮಾಡಿಕೊಳ್ಳಲು ಸಚಿವರು ಯತ್ನಿಸುತ್ತಾರೆ' ಎಂದೂ ಆಶಿಸಿದ್ದಾರೆ. ಶೂನ್ಯವೇಳೆಯ ಪ್ರಶ್ನೋತ್ತರ ಅವಧಿಗೆ ಸಂಬಂಧಿಸಿದ ಎರಡು ಪತ್ರಗಳಿಗೆ ಪ್ರತಿಕ್ರಿಯೆಯಾಗಿ ಬಿಟ್ಟೂ ಅ.21ರಂದು ಹಿಂದಿಯಲ್ಲಿ ಪತ್ರಬರೆದಿದ್ದರು.

'ದಕ್ಷಿಣ ಭಾರತದ ಸಂಸದರು ಹಿಂದಿಯನ್ನು ಅರ್ಥಮಾಡಿಕೊಳ್ಳಲಾರರು' ಎಂದು ಪತ್ರದಲ್ಲಿ ಒತ್ತಿಹೇಳಿರುವ ಜಾನ್ ಬ್ರಿಟ್ಟಾಸ್, 'ಈ ಸ್ಥಿತಿಯ ಹೊರತಾಗಿಯೂ ನೀವು ಹಿಂದಿಯಲ್ಲೇ ಪತ್ರ ಬರೆದಿದ್ದೀರಿ. ನಿಮ್ಮ ಪತ್ರ ಓದುವ ಸಲುವಾಗಿ ಪ್ರಸ್ತುತ ಸಂದರ್ಭದಲ್ಲಿ ಹಿಂದಿ ಭಾಷೆಯನ್ನು ಕಲಿಯುವ ಯಾವುದೇ ಉದ್ದೇಶವು ತಮಗಿಲ್ಲ' ಎಂದು ಹೇಳಿದ್ದಾರೆ.

ಬಾಲಕನ ಹೊಟ್ಟೆಯಲ್ಲಿದ್ದವು ಲೋಹದ 56 ತುಣುಕುಗಳು

ಹಾಥರಸ್ (ಪಿಟಿಐ): ಉತ್ತರ ಪ್ರದೇಶದ ಹಾಥರಸ್‌ನಲ್ಲಿ 15 ವರ್ಷದ ಬಾಲಕನ ಹೊಟ್ಟೆಯಲ್ಲಿ ಬ್ಯಾಟರಿ, ಬ್ಲೇಡ್ ಸೇರಿದಂತೆ 56 ಲೋಹದ ವಸ್ತುಗಳು ಪತ್ತೆಯಾಗಿದೆ. ದೆಹಲಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ನಡೆಸಿ, ಎಲ್ಲ ವಸ್ತುಗಳನ್ನು ಹೊರತೆಗೆದ ಕೆಲವೇ ಗಂಟೆಗಳಲ್ಲಿ ಕೊನೆಯುಸಿರೆಳೆದಿದ್ದಾನೆ.

ಹಾಥರಸ್‌ನ ರತ್ನಗರ್ಭ ಕಾಲೊನಿ ನಿವಾಸಿ, ವೈದ್ಯಕೀಯ ಪ್ರತಿನಿಧಿ ಸಂಚಿತ್ ಶರ್ಮಾ ಅವರ ಮಗ 9ನೇ ತರಗತಿ ಕಲಿಯುತ್ತಿದ್ದ ಆದಿತ್ಯ ಶರ್ಮಾ ಕೆಲದಿನಗಳಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದ. ಉಸಿರಾಡಲು ಕಷ್ಟವಾಗುತ್ತಿದೆ ಎಂದು ಹೆತ್ತವರಿಗೆ ತಿಳಿಸಿದ್ದರಿಂದ ತಕ್ಷಣವೇ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದಿದ್ದರು.

'ಹಾಥರಸ್‌ನ ಆಸ್ಪತ್ರೆಯಲ್ಲಿ ಪರಿಶೀಲಿಸಿದ ವೇಳೆ ಜೈಪುರಕ್ಕೆ ಕರೆದೊಯ್ಯುವಂತೆ ವೈದ್ಯರು ಸಲಹೆ ನೀಡಿದ್ದರು. ಅಲ್ಲಿನ ಆಸ್ಪತ್ರೆಯೊಂದರಲ್ಲಿ ದಾಖಲಾಗಿ ಕೆಲದಿನ ಚಿಕಿತ್ಸೆ ಪಡೆದ ಬಳಿಕ ಮನೆಗೆ ಕರೆತಂದಿದ್ದರು. ಉಸಿರಾಟದ ಸಮಸ್ಯೆ ಮತ್ತೆ ಬಿಗಡಾಯಿಸಿದ್ದರಿಂದ ಅಲೀಗಢ ಆಸ್ಪತ್ರೆಗೆ ದಾಖಲಿಸಿದ್ದರು. ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದ್ದರು. ಅ.26ರಂದು ಆದಿತ್ಯನಿಗೆ ಅಲ್ಟ್ರಾಸೌಂಡ್ ಪರೀಕ್ಷೆ ನಡೆಸಿದ್ದ ವೇಳೆ ಹೊಟ್ಟೆಯಲ್ಲಿ 19 ಲೋಹದ ತುಣುಕುಗಳು ಇರುವುದನ್ನು ಪತ್ತೆಮಾಡಿದ್ದರು' ಎಂದು ಸಂಚಿತ್ ವಿವರಿಸಿದರು.

'ನಂತರ ನೋಯ್ಡಾದ ಅತ್ಯಾಧುನಿಕ ಆಸ್ಪತ್ರೆಯಲ್ಲಿ ಆತನಿಗೆ ಮತ್ತೆ ಪರೀಕ್ಷೆ ನಡೆಸುವಂತೆ ಸಲಹೆ ನೀಡಿದ್ದರು. ಅಲ್ಲಿಗೆ ಕರೆದೊಯ್ದು, ಪರೀಕ್ಷೆ ನಡೆಸಿದ ವೇಳೆ 56 ಲೋಹದ ತುಣುಕುಗಳು ದೇಹ ಸೇರಿರುವುದನ್ನು ವೈದ್ಯರು ಖಚಿತಪಡಿಸಿದ್ದರು. ಇದಾದ ಮರುದಿನವೇ ದೆಹಲಿಯ ಸಫ್ದರ್‌ಜಂಗ್ ಆಸ್ಪತ್ರೆಗೆ ದಾಖಲಿಸಿದ್ದೆವು. ತಜ್ಞ ವೈದ್ಯರು ತಕ್ಷಣವೇ ಶಸ್ತ್ರಚಿಕಿತ್ಸೆ ನಡೆಸಿ, ತುಣುಕುಗಳನ್ನು ಹೊರಗೆ ತೆಗೆದಿದ್ದರು. ಇಷ್ಟೊಂದು ವಸ್ತುಗಳು ಹೊಟ್ಟೆ ಸೇರಿದ ಕುರಿತು ವೈದ್ಯರು ಸಹ ಆಘಾತಕ್ಕೊಳಗಾದರು' ಎಂದು ವಿವರಿಸಿದರು.

ಗದ್ದಲ ಸೃಷ್ಟಿಸಿದವನ ಉಗುಳು ನೆಕ್ಕಿಸಿದ ಪೊಲೀಸರು: ಆರೋಪ

ರಾಯ್‌ಬರೇಲಿ(ಉತ್ತರ ಪ್ರದೇಶ), (ಪಿಟಿಐ): ಗದ್ದಲ ಸೃಷ್ಟಿಸಿದ ಆರೋಪದ ಮೇಲೆ ನಾಸಿರ್‌ಬಾದ್ ಪ್ರದೇಶದ ಗ್ರಾಮವೊಂದರ ಮುಖ್ಯಸ್ಥರ ಪ್ರತಿನಿಧಿಗೆ ಬಲವಂತವಾಗಿ ಆತನದೇ ಉಗುಳನ್ನು ಪೊಲೀಸರು ನೆಕ್ಕಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಕೆನಡಾ: 'ಸೈಬರ್ ಬೆದರಿಕೆ ಪಟ್ಟಿ'ಯಲ್ಲಿ ಭಾರತ

ಒಟ್ಟಾವಾ/ನವದೆಹಲಿ (ಪಿಟಿಐ): ಭಾರತ ಮತ್ತು ಕೆನಡಾ ಮಧ್ಯದ ರಾಜತಾಂತ್ರಿಕ ಬಿಕ್ಕಟ್ಟಿನ ನಡುವೆಯೇ, 'ಸೈಬರ್ ಬೆದರಿಕೆ ಪಟ್ಟಿ'ಯಲ್ಲಿ ಮೊದಲ ಬಾರಿಗೆ ಭಾರತವನ್ನು ಕೆನಡಾ ಹೆಸರಿಸಿದೆ.

ಅಲ್ಲದೆ, ಭಾರತ ಸರ್ಕಾರ ಪ್ರಾಯೋಜಿತ ವ್ಯಕ್ತಿಗಳು ಕೆನಡಾ ವಿರುದ್ಧ ಸೈಬರ್ ಬೆದರಿಕೆ ಒಡ್ಡುವ ಚಟುವಟಿಕೆಗಳಲ್ಲಿ ನಿರತವಾಗಿ ಹಾಗೂ ಆ ಮೂಲಕ ಬೇಹುಗಾರಿಕೆ ನಡೆಸುತ್ತಿರುವ ಸಾಧ್ಯತೆ ಇದೆ ಎಂದೂ ಹೇಳಿದೆ.

ಕೆನಡಾ ಹೇಳಿಕೆಯನ್ನು ಖಂಡಿಸಿರುವ ಭಾರತ, 'ಭಾರತದ ವಿರುದ್ಧ ನಿರಾಧಾರ ಆರೋಪಗಳನ್ನು ಹೊರಿಸಲು ಕೆನಡಾ ಅನುಸರಿಸುತ್ತಿರುವ ತಂತ್ರಕ್ಕೆ ಮತ್ತೊಂದು ನಿದರ್ಶನವಿದು' ಎಂದು ಟೀಕಿಸಿದೆ.

ಕೆನಡಾ, 'ನ್ಯಾಷನಲ್ ಸೈಬರ್ ಥ್ರೆಟ್ ಅಸೆಸ್‌ಮೆಂಟ್, 2025-26' ಎಂಬ ವರದಿ ಬಿಡುಗಡೆ ಮಾಡಿದೆ. ಚೀನಾ, ರಷ್ಯಾ, ಇರಾನ್ ಹಾಗೂ ಉತ್ತರ ಕೊರಿಯಾ ಹೆಸರುಗಳು ಈ ಪಟ್ಟಿಯಲ್ಲಿವೆ. ಈಗ, ಭಾರತದ ಹೆಸರು ಸೇರಿಸಲಾಗಿದೆ.

'ಕೆನಡಾ ಪ್ರಜೆ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂದು ಆರೋಪಿಸಿದ ನಂತರ, ಕೆನಡಾದ ಹಲವು ವೆಬ್‌ಸೈಟ್‌ಗಳ ಮೇಲೆ ದಾಳಿ ನಡೆಸಲಾಯಿತು. ಭಾರತ ಪರವಿರುವ ಹ್ಯಾಕರ್‌ಗಳ ಗುಂಪೊಂದು ಈ ದಾಳಿಯ ಹೊಣೆ ಹೊತ್ತಿತ್ತು. ಇಂತಹ ನಡೆಗಳು, ಕಲ್ಪಿಸಲಾಗದಂತಹ ಪರಿಣಾಮಗಳಿಗೆ ಕಾರಣವಾಗುತ್ತಿವೆ' ಎಂದು ಭಾರತದ ಹೆಸರು ಉಲ್ಲೇಖಿಸಲಾಗಿದೆ.

ಭಾರತದ ತಿರುಗೇಟು

ಸೈಬರ್ ಬೆದರಿಕೆ ಕುರಿತು ಕೆನಡಾ ಬಿಡುಗಡೆ ಮಾಡಿರುವ ವರದಿ ಕುರಿತು ಪ್ರತಿಕ್ರಿಯಿಸಿರುವ ಭಾರತ ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ ಜೈಸ್ವಾಲ್, 'ಭಾರತ ಕುರಿತು ಜಾಗತಿಕ ಮಟ್ಟದಲ್ಲಿರುವ ಅಭಿಪ್ರಾಯವನ್ನು ದುರ್ಬಲಕೆ ಮಾಡಲು ಯತ್ನಿಸಿದ್ದಾಗಿ ಕೆನಡಾದ ಹಿರಿಯ ಅಧಿಕಾರಿಗಳೇ ಬಹಿರಂಗವಾಗಿ ತಪ್ಪೊಪ್ಪಿಕೊಂಡಿದ್ದಾರೆ' ಎಂದು ಹೇಳಿದ್ದಾರೆ.

'ಭಾರತದ ವಿರುದ್ಧ ಕೆನಡಾ ಆಧಾರ ರಹಿತ ಆರೋಪಗಳನ್ನು ಮಾಡಿದೆ. ಇದನ್ನು ಸಹ ಆ ರಾಷ್ಟ್ರದ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ' ಎಂದಿದ್ದಾರೆ.

ವಿದೇಶಾಂಗ ಸಚಿವ ಜೈಶಂಕರ್ ಹೇಳಿಕೆ

'ಸೇನೆ ವಾಪಸ್ ಪ್ರಕ್ರಿಯೆಯಲ್ಲಿ ಅಲ್ಪ ಪ್ರಗತಿ'

ಎಸ್.ಜೈಶಂಕರ್

ಮುಖ್ಯಾಂಶಗಳು

- 2 ದಿನಗಳ ಆಸ್ಟ್ರೇಲಿಯಾ ಪ್ರವಾಸ
- ಭಾರತದ 4ನೇ ಕಾನ್ಸುಲೇಟ್ ಉದ್ಘಾಟಿಸಲಿರುವ ಜೈಶಂಕರ್
- 15ನೇ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗಿ

ಬ್ರಿಸ್ಬೇನ್(ಪಿಟಿಐ): ಉಭಯ ದೇಶಗಳ ನಡುವಿನ ಗಡಿಯಲ್ಲಿನ 'ಸಂಘರ್ಷದ ಸ್ಥಳ'ದಿಂದ ಸೇನೆಯನ್ನು ವಾಪಸ್ ಕರೆಸಿಕೊಳ್ಳುವ ವಿಚಾರದಲ್ಲಿ ಚೀನಾ ಮತ್ತು ಭಾರತ 'ಅಲ್ಪ ಪ್ರಮಾಣದ ಪ್ರಗತಿ' ಸಾಧಿಸಿವೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾನುವಾರ ಹೇಳಿದ್ದಾರೆ.

ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಅವರು, ಬ್ರಿಸ್ಬೇನ್‌ನಲ್ಲಿ ಭಾರತೀಯ ಸಮುದಾಯದೊಂದಿಗೆ ನಡೆಸಿದ ಸಂವಾದದ ವೇಳೆ ಈ ಮಾತು ಹೇಳಿದ್ದಾರೆ.

'ಭಾರತ ಮತ್ತು ಚೀನಾ ನಡುವಿನ ಸಂಬಂಧಗಳಲ್ಲಿ ಗೊಂದಲ ಉಂಟಾಗಿತ್ತು. ಇದಕ್ಕೆ ಏನು ಕಾರಣ ಎಂಬುದು ನಿಮಗೆ ತಿಳಿದೇ ಇದೆ. ಗಡಿಯಿಂದ ಸೇನೆ ವಾಪಸು ಪಡೆಯುವ ವಿಚಾರದಲ್ಲಿ ಎರಡೂ ದೇಶಗಳಿಂದ ಅಲ್ಪಪ್ರಮಾಣದ ಪ್ರಗತಿಯಾಗಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದ್ದಾರೆ.

'ಎರಡೂ ದೇಶಗಳ ಸೈನಿಕ ಮುಖಾಮುಖಿಯಾಗಿದ್ದ ಸನ್ನಿವೇಶ ಸೃಷ್ಟಿಯಾಗಿತ್ತು. ಅದು, ಅಹಿತಕರ ಘಟನೆಗೂ ಕಾರಣವಾಗುವ ಸಾಧ್ಯತೆ ಇತ್ತು. ಈ ವೇಳೆ, ನಾವು ಮಾತುಕತೆ ನಡೆಸಿ, ಸಂಘರ್ಷ ಪೀಡಿತ ಸ್ಥಳಗಳಿಂದ ಸೇನೆ ವಾಪಸ್ ಕರೆಸಿಕೊಳ್ಳುವ ನಿರ್ಧಾರ ಕೈಗೊಂಡೆವು' ಎಂದು ತಿಳಿಸಿದರು.

'ಸೇನೆ ವಾಪಸು ಕರೆಸಿಕೊಳ್ಳುವ ನಿರ್ಧಾರ ಸ್ವಾಗತಾರ್ಹ ನಡೆಯಾಗಿದ್ದು, ಈ ವಿಷಯದಲ್ಲಿ ಸ್ವಲ್ಪ ಪ್ರಮಾಣದ ಪ್ರಗತಿಯಾಗಿದೆ. ಇದು ಎರಡೂ ದೇಶಗಳ ಸಂಬಂಧ ಸುಧಾರಣೆಗೆ ಇರುವ ಹಲವು ಸಾಧ್ಯತೆಗಳನ್ನು ತೆರೆಯಲಿದೆ' ಎಂದು ಹೇಳಿದ್ದಾರೆ.

'2020ಕ್ಕೂ ಮುಂಚೆ ಇದ್ದಿರದಷ್ಟು ಭಾರಿ ಸಂಖ್ಯೆಯಲ್ಲಿ, ವಾಸ್ತವ ನಿಯಂತ್ರಣ ರೇಖೆ(ಎಲ್‌ಎಸಿ) ಉದ್ದಕ್ಕೂ ಚೀನಾ ತನ್ನ ಯೋಧರನ್ನು ನಿಯೋಜಿಸಿತ್ತು. ಇದಕ್ಕೆ ಪ್ರತಿಯಾಗಿ ಭಾರತ ಕೂಡ ತನ್ನ ಯೋಧರನ್ನು ನಿಯೋಜಿಸಿತ್ತು. ಈ ಅವಧಿಯಲ್ಲಿ, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಮಾತ್ರವಲ್ಲದೇ, ಇತರ ವಿಚಾರಗಳ ಮೇಲೂ ಪರಿಣಾಮ ಉಂಟಾಗಿತ್ತು' ಎಂದೂ ಹೇಳಿದ್ದಾರೆ.

ಪೋಶೆ ಕಾರು ಅಪಘಾತ: ಹಾಸ್ಯ ಕಲಾವಿದನ ಸೆರೆ

ಹೈದರಾಬಾದ್ (ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸ್ಯ ಕಲಾವಿದರೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಹಾಸ್ಯ ಕಲಾವಿದ, ಉದ್ಯಮಿ ಉತ್ಸವ್ ದೀಕ್ಷಿತ್ (33) ಚಲಾಯಿಸುತ್ತಿದ್ದ ಪೋಶೆ ಕಾರು ಶುಕ್ರವಾರ ಬೆಳಿಗ್ಗೆ 5.45ಕ್ಕೆ ಹೈದರಾಬಾದ್‌ನ ಕೆಬಿಆರ್ ಉದ್ಯಾನವನದ ಆವರಣ ಗೋಡೆ ಮತ್ತು ಮರಕ್ಕೆ ಡಿಕ್ಕಿ ಹೊಡೆದಿತ್ತು.

'ಅಪಘಾತದಿಂದ ಉದ್ಯಾನದ ಕಬ್ಬಿಣದ ಕಂಬಿ ಮತ್ತು ಫುಟ್‌ಪಾತ್‌ಗೆ ಹಾನಿ ಯಾಗಿತ್ತು. ಕಾರಿನ ಮುಂಭಾಗ ಹಾನಿಗೊಂಡಿತ್ತು. ಸ್ಥಳದಿಂದ ಪರಾರಿಯಾಗಿದ್ದ ಉತ್ಸವ್ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಹಾಲಿ ಐಎಸ್‌ಎಲ್‌ನಲ್ಲಿ ಚೆಟ್ರಿ ಪಡೆಗೆ ಮೊದಲ ಸೋಲು

ಎಫ್‌ಸಿ ಗೋವಾಕ್ಕೆ ಮಣಿದ ಬಿಎಫ್‌ಸಿ

ಮಡಗಾಂವ್ (ಪಿಟಿಐ): ರಾಷ್ಟ್ರೀಯ ಕೋಚ್ ಮನೊಲೊ ಮಾರ್ಕ್ವೆಝ್ ಗರಡಿಯಲ್ಲಿರುವ ಎಫ್‌ಸಿ ಗೋವಾ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಪಂದ್ಯದಲ್ಲಿ ಶನಿವಾರ ಬೆಂಗಳೂರು ಎಫ್‌ಸಿ ತಂಡವನ್ನು 3-0 ಗೋಲುಗಳಿಂದ ಸೋಲಿಸಿತು. ಇದು ಹಾಲಿ ಲೀಗ್‌ನಲ್ಲಿ ಬೆಂಗಳೂರು ತಂಡಕ್ಕೆ ಮೊದಲ ಸೋಲು.

ಗೋವಾ ಪರ ಅರ್ಮಾಂಡೊ ಸಾದಿಕು ಮತ್ತೆ ಮಿಂಚಿದರು. 63ನೇ ನಿಮಿಷ ಪಂದ್ಯದ ಮೊದಲ ಗೋಲು ಗಳಿಸಿದ ಅವರು ಮತ್ತೊಂದು ಗೋಲಿಗೆ ಸಹಾಯಹಸ್ತ ನೀಡಿದರು. 72ನೇ ನಿಮಿಷ ಬ್ರಿಸನ್ ಫೆರ್ನಾಂಡಿಸ್ ಮತ್ತು 90+3ನೇ ನಿಮಿಷ ಡೆಜಾನ್ ಡ್ರಾಝಿಕ್ ಅವರು ಗೋವಾದ ಗೋಲುಗಳನ್ನು ಗಳಿಸಿದರು.

ಡೆಜಾನ್ ಡ್ರಾಝಿಕ್ ಮತ್ತು ಯುವ ಮಿಡ್‌ಫೀಲ್ಡರ್ ಆಯುಷ್ ದೇವ್ ಚೆಟ್ರಿ ಅವರು ಚುರುಕಾದ ಓಡಾಟದಿಂದ ಬೆಂಗಳೂರು ಎಫ್‌ಸಿ ತಂಡದ ಡಿಫೆಂಡರ್‌ಗಳಿಗೆ ಸಾಕಷ್ಟು ತಲೆನೋವಿಗೆ ಕಾರಣರಾದರು. ಮೊದಲಾರ್ಧದಲ್ಲಿ ಬಿಎಫ್‌ಸಿ ಗೋಲ್‌ಕೀಪರ್ ಗುರುಪ್ರೀತ್ ಸಂಧು ಅವರು ಅವರು ಎದುರಾಳಿಗೆ ತಡೆಗೋಡೆಯಾದರು.

ಗಾಯದಿಂದ ಚೇತರಿಸಿ ತಂಡಕ್ಕೆ ಮರಳಿದ ಸಂದೇಶ್ ಜಿಂಗಾನ್ ಕೂಡ ಮಿಂಚಿದರು. ಅವರು ಎಡ್ಗರ್ ಮೆಂಡೆಝ್ ಜೊತೆಗೂಡಿ ಸುನಿಲ್ ಚೆಟ್ರಿ ಪಡೆಯ ಹಲವು ಅವಕಾಶಗಳನ್ನು ತಡೆದರು. ಗೋವಾ ಎಫ್‌ಸಿಗೆ ಅಗತ್ಯವಾಗಿದ್ದ ರಕ್ಷಣಾ ಬಲ ಜಿಂಗಾನ್ ಅವರಿಂದ ದೊರೆಯಿತು.

63ನೇ ನಿಮಿಷ ಮೊಹಮದ್ ಯಾಸಿರ್ ಅವರು ಬಿಎಫ್‌ಸಿ ಬಾಕ್ಸ್‌ನಲ್ಲಿ ಕಾಯುತ್ತಿದ್ದ ಸಾದಿಕು ಅವರಿಗೆ ಕ್ರಾಸ್ ನೀಡಿದರು. ಅಲ್ಬೇನಿಯಾದ ಸಾದಿಕು ಈ ಅವಕಾಶದಲ್ಲಿ ಎಡವದೇ ತಂಡಕ್ಕೆ ಮುನ್ನಡೆ ಒದಗಿಸಿದರು. ಸಮೀಪದಿಂದ ನಡೆಸಿದ ಗೋಲು ಯತ್ನವನ್ನು ತಡೆಯುವ ಅವಕಾಶ ಗುರುಪ್ರೀತ್‌ಗೆ ಇರಲಿಲ್ಲ.

ಬ್ರಿಸನ್ ಮತ್ತೊಂದು ಅವಕಾಶದಲ್ಲಿ ಸಾಕಷ್ಟು ದೂರದಿಂದ ಹೊಡೆದ ಚೆಂಡು ರಾಹುಲ್ ಭೆಕೆ ಸೇರಿದಂತೆ ಬಿಎಫ್‌ಸಿಯ ರಕ್ಷಣಾ ಆಟಗಾರರಿಗೆ ಅಚ್ಚರಿ ಮೂಡಿಸುವಂತೆ ನೇರವಾಗಿ ಗೋಲಿನೊಳಕ್ಕೆ ನುಗ್ಗಿ ಎಫ್‌ಸಿ ಗೋವಾ 2-0 ಮುನ್ನಡೆ ಸಾಧಿಸಿತು. ಮನೊಲೊ ಅವರು 79ನೇ ನಿಮಿಷ ಇಕರ್ ಗಾರೊಟ್‌ಕ್ಸೇನಾ ಅವರನ್ನು ಕಣಕ್ಕಿಳಿಸಿದರು. ಸ್ಪೇನ್‌ನ ಆಟಗಾರ ನಿರಾಸೆ ಮೂಡಿಸಲಿಲ್ಲ. ಅವರು ಡೆಜಾನ್ ಜೊತೆಗೆ ಸಮನ್ವಯ ಸಾಧಿಸಿದರು. ಈ ಮಧ್ಯೆ ಡೆಜಾನ್ ಗೋವಾದ ಮೂರನೇ ಗೋಲನ್ನು ಗಳಿಸಿದರು.

ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ಅವಕಾಶಗಳು ಇರಲಿಲ್ಲವೆಂದಲ್ಲ. ಅದರೆ ಸುವರ್ಣಾವಕಾಶ ಎಂಬುದು ದಕ್ಕಲಿಲ್ಲ.

ಇದು ಏಳು ಪಂದ್ಯಗಳಲ್ಲಿ ಗೋವಾಕ್ಕೆ ಎರಡನೇ ಜಯ. ಬಿಎಫ್‌ಸಿಗೆ ಏಳು ಪಂದ್ಯಗಳಲ್ಲಿ ಇದು ಮೊದಲ ಸೋಲು. ಇದಕ್ಕೆ ಮೊದಲು ಚೆಟ್ರಿ ಬಳಗ ಐದು ಗೆದ್ದು, ಒಂದು ಡ್ರಾ ಮಾಡಿತ್ತು.

ಸಂಕ್ಷಿಪ್ತ ಸುದ್ದಿ

ಕಿಕ್‌ಸ್ಟಾರ್ಟ್‌ಗೆ ಜಯ

ಬೆಂಗಳೂರು: ಸಿ. ರೋಹನ್ ಸಿಂಗ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಬಿಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 1-0 ಗೋಲುಗಳಿಂದ ಎಚ್‌ಎಎಲ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ರೋಹನ್ ಅವರು 69ನೇ ನಿಮಿಷದಲ್ಲಿ ಗೆಲುವಿನ ಗೋಲು ದಾಖಲಿಸಿದರು. ಈ ಗೆಲುವಿನೊಂದಿಗೆ ಬಿಎಫ್‌ಸಿ ತಂಡವು 6 ಪಂದ್ಯಗಳಲ್ಲಿ (5 ಗೆಲುವು, 1 ಸೋಲು) 15 ಅಂಕ ಪಡೆದು ಅಗ್ರಸ್ಥಾನದಲ್ಲಿದೆ.

ದಿನದ ಮತ್ತೊಂದು ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡವು 2-1 ಗೋಲುಗಳಿಂದ ಅಗ್ನಿಪುತ್ರ ತಂಡವು ಸೋಲಿಸಿತು. ಕಿಕ್‌ಸ್ಟಾರ್ಟ್ ಪರ ಸೈಖೋಮ್ ಬೋರಿಶ್ ಸಿಂಗ್ (51ನೇ) ಮತ್ತು ಶ್ರೀದಾರ್ಥ್ ನಾಂಗ್‌ಮೇಕಪಂ (70ನೇ) ಗೋಲು ಗಳಿಸಿದರೆ, ಅಗ್ನಿಪುತ್ರ ಪರ ಸೂರ್ಯ ಯು.ಕೆ (16ನೇ) ಚೆಂಡನ್ನು ಗುರಿ ಸೇರಿಸಿದರು.

ಶನಿವಾರ ನಡೆದ ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡವು 3-2ರಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಮಣಿಸಿದರೆ, ಮತ್ತೊಂದು ಪಂದ್ಯದಲ್ಲಿ ಸೌತ್ ಯುನೈಟೆಡ್ ಎಫ್‌ಸಿ ತಂಡವು 2-1ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ತಂಡವನ್ನು ಸೋಲಿಸಿತು.

ಟೆನಿಸ್: ಶ್ರೀನಿಧಿಗೆ ಪ್ರಶಸ್ತಿ ಡಬಲ್

ಬೆಂಗಳೂರು: ಕರ್ನಾಟಕದ ಯುವ ಆಟಗಾರ್ತಿ ಶ್ರೀನಿಧಿ ಬಾಲಾಜಿ ಕೆನ್ಯಾದ ನೈರೋಬಿಯಲ್ಲಿ ಶನಿವಾರ ನಡೆದ ಐಟಿಎಫ್ ಜೂನಿಯರ್ (18 ವರ್ಷದೊಳಗಿನವರ) ಟೆನಿಸ್ ಟೂರ್ನಿಯಲ್ಲಿ ಡಬಲ್ ಪ್ರಶಸ್ತಿ ಗೆದ್ದರು.

18 ವರ್ಷ ವಯಸ್ಸಿನ ಶ್ರೀನಿಧಿ ಬಾಲಕಿಯರ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ 3-6, 6-1, 6-4ರಿಂದ ಸ್ವದೇಶದ ದಿಯಾ ರಮೇಶ್ ಅವರನ್ನು ಸೋಲಿಸಿದರು.

ಶ್ರೀನಿಧಿ ಡಬಲ್ಸ್‌ನಲ್ಲೂ ಜನ್ನತ್ ಚೆರಿಪಾಲ್ ಅವರೊಂದಿಗೆ ಚಾಂಪಿಯನ್ ಆದರು.

ಬ್ಯಾಡ್ಮಿಂಟನ್: ಮಾಳವಿಕಾ ರನ್ನರ್‌ಅಪ್

ಸಾರ್‌ಬ್ರೂಕನ್ (ಜರ್ಮನಿ), (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ಮಾಳವಿಕಾ ಬನ್ಸೋಡ್, ಹ್ಯಾಲೊ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ನಲ್ಲಿ ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ಎದುರು ಭಾನುವಾರ 10-21, 15-21ರಲ್ಲಿ ಸೋಲನುಭವಿಸಿದರು.

23 ವರ್ಷದ ಎಡಗೈ ಆಟಗಾರ್ತಿ ಮಾಳವಿಕಾ ಅವರು ಮೊದಲ ಬಾರಿ ಸೂಪರ್ 300 ಮಟ್ಟದ ಟೂರ್ನಿಯ ಫೈನಲ್ ತಲುಪಿದ್ದರು. ಈ ಹಾದಿಯಲ್ಲಿ ನಾಲ್ಕನೇ ಶ್ರೇಯಾಂಕದ ಗುಯೆನ್ ಥುಯಿ ಲಿನ್ ಸೇರಿದಂತೆ ಕೆಲ ಪ್ರಮುಖ ಆಟಗಾರ್ತಿಯರನ್ನು ಮಣಿಸಿದ್ದರು.

ಇದೇ ಮೊದಲ ಬಾರಿ 3–0 ‘ವೈಟ್‌ವಾಷ್’ • ಕ್ಲೀನ್ ಸ್ವೀಪ್ ಮಾಡಿದ ಕಿವೀಸ್ • ಮತ್ತೆ ಕೈಚಳಕ ತೋರಿದ ಎಜಾಜ್

ಮುಂಬೈ ಟೆಸ್ಟ್‌ನಲ್ಲೂ ಮುಖಭಂಗ

ಪ್ರಜಾವಾಣಿ ವಾರ್ತೆ

ಮುಂಬೈ: ಆಗ ಗಂಟೆ 12.23. ಭಾನುವಾರ ಮಧ್ಯಾಹ್ನ ಮುಂಬೈ ಮಹಾನಗರಿಯ ಜನಜೀವನ ಎಂದಿನಂತೆ ಇತ್ತು. ಆದರೆ ವಾಂಖೆಡೆ ಕ್ರೀಡಾಂಗಣದ ಒಳಗೆ ಸೇರಿದ್ದ 20,000 ಪ್ರೇಕ್ಷಕರಲ್ಲಿ ಅಸಹಜ ಮೌನ ಆವರಿಸಿದ್ದು ಎಲ್ಲರೂ ತದೇಕಚಿತ್ತರಾಗಿ ದೈತ್ಯ ಪರದೆಯತ್ತ ನೋಡುತ್ತಿದ್ದರು.

ರಿಷಭ್ ಪಂತ್ ಅವರು ಔಟ್ ಅಥವಾ ನಾಟೌಟ್ ಎಂಬ ತೀರ್ಮಾನವಾಗಬೇಕಿತ್ತು. ಅವರೆಲ್ಲ ನಾಟೌಟ್ ಎಂದು ಉದ್ಗರಿಸಲಾರಂಭಿಸಿದರು. ಪಂತ್ ‘ಕಾಟ್ ಬಿಹೈಂಡ್’ ಆಗಿದ್ದಾರೆ ಎಂಬ ಬೌಲರ್ ಮನವಿಗೆ ಮೈದಾನದಲ್ಲಿದ್ದ ಅಂಪೈರ್ ನಾಟೌಟ್ ತೀರ್ಪು ನೀಡಿದ್ದರು. ಟಿ.ವಿ. ಅಂಪೈರ್ ಪಾಲ್ ರೈಫೆಲ್ ಕೂಡ ಹಾಗೇ ಹೇಳಬಹುದೆಂಬ ನಿರೀಕ್ಷೆ ಅವರೆಲ್ಲರದೂ ಆಗಿತ್ತು. ಆದರೆ ಪರದೆಯಲ್ಲಿ ಕೆಂಪು ಬಣ್ಣದಲ್ಲಿ ಔಟ್ ಪದ ಮೂಡಿತು. ಎಡಗೈ ಸ್ಪಿನ್ನರ್ ಬೌಲರ್ ಎಜಾಜ್ ಪಟೇಲ್ (57ಕ್ಕೆ6) ಅವರನ್ನು ಮುತ್ತಿದ ನ್ಯೂಜಿಲೆಂಡ್ ಆಟಗಾರರು ಅಭಿನಂದಿಸಿದರು. ಕೆಚ್ಚೆದೆಯ 64 ರನ್‌ಗಳ ಆಟ ಈ ರೀತಿ ಅಂತ್ಯಕಾಣಬಹುದೆಂಬ ನಿರೀಕ್ಷೆ ಪಂತ್ ಅವರಲ್ಲಿ ಇರಲಿಲ್ಲ. ‘ಚೀಟರ್ಸ್, ಚೀಟರ್ಸ್’ ಎಂಬ ಕೂಗುಗಳು ಕೇಳಿಬಂದವು.

ಇದಾಗಿ 40 ನಿಮಿಷಗಳ ನಂತರ ನ್ಯೂಜಿಲೆಂಡ್ ತಂಡ, ಪ್ರೇಕ್ಷಕರ ಗ್ಯಾಲರಿಯಲ್ಲಿ ಮೌನ ಆವರಿಸುವಂತೆ ಮಾಡಿತು. ನ್ಯೂಜಿಲೆಂಡ್ ಮೂರನೇ ಟೆಸ್ಟ್ ಪಂದ್ಯವನ್ನು ಎರಡೂವರೆ ದಿನಗಳಲ್ಲಿ 25 ರನ್‌ಗಳಿಂದ ಗೆದ್ದುಕೊಂಡಿತು.

ಭಾರತ ತಂಡ ತವರಿನಲ್ಲಿ ನಡೆದ ಮೂರು ಟೆಸ್ಟ್‌ಗಳ ಸರಣಿಯಲ್ಲಿ ಮೊದಲ ಬಾರಿ ‘ವೈಟ್‌ವಾಷ್’ ಕಳಂಕ ಅನುಭವಿಸಬೇಕಾಯಿತು. ಈ ಹಿಂದೆ 2000ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 2-0 ಯಿಂದ ಸೋತರೂ ಆ ಸರಣಿ ಎರಡು ಟೆಸ್ಟ್‌ಗಳದ್ದಾಗಿತ್ತು. ಇದು ಮೂರು ಪಂದ್ಯಗಳ ಸರಣಿಯಾಗಿದ್ದು, ಭಾರತ ತಂಡದ ಇದುವರೆಗಿನ ಹೀನಾಯ ಪ್ರದರ್ಶನ ಎನಿಸಿತು.

ಸತತವಾಗಿ 18 ಸರಣಿಗಳನ್ನು ಗೆದ್ದುಬೀಗಿದ್ದ ತಂಡ ತವರಿನಲ್ಲೇ 147 ರನ್‌ಗಳ ಗುರಿಯನ್ನು ತಲುಪಲು ಅಸಮರ್ಥವಾಯಿತು. ಮೊದಲ ಎರಡೂ ಟೆಸ್ಟ್‌ಗಳಲ್ಲಿ (ಬೆಂಗಳೂರು ಮತ್ತು ಪುಣೆ) ಮೊದಲ ಇನಿಂಗ್ಸ್ ವೈಫಲ್ಯ ಸೋಲಿಗೆ ಕಾರಣವಾಯಿತು. ಆದರೆ ಇಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಪಡೆದಿತ್ತು. ಜಡೇಜ ಪಂದ್ಯದಲ್ಲಿ ಎರಡನೇ ಸಲ ಐದು ವಿಕೆಟ್‌ಗಳ ಗೊಂಚಲು ಪಡೆದಿದ್ದರು. ಎರಡನೇ ಇನಿಂಗ್ಸ್‌ನಲ್ಲಿ ಸಾಧಾರಣ ಗುರಿ ಎದುರಾಗಿತ್ತು. ಸಮಯವೂ ಹೇರಳವಾಗೇ ಇತ್ತು.

ಆದರೆ ಬ್ಯಾಟ್ಸ್‌ಮನ್ನರ್ ವೈಫಲ್ಯ ಮುಳುವಾಯಿತು. ರೋಹಿತ್ ‘ಪುಲ್’ ಹೊಡೆತಕ್ಕೆ ಆಯ್ದ ಎಸೆತ ಅದಕ್ಕೆ ತಕ್ಕುದಾಗಿರಲಿಲ್ಲ. ತಪ್ಪು ಮಾಡಿ ಮಿಡ್‌ವಿಕೆಟ್‌ನಲ್ಲಿ ಕ್ಯಾಚಿತ್ತರು. ಶುಭಮನ್ ಗಿಲ್, ಎಜಾಜ್ ಪಟೇಲ್ ಬೌಲಿಂಗ್‌ನಲ್ಲಿ ಆಫ್‌ಸ್ಟಂಪ್ ಆಚೆ ಬಿದ್ದ ಚೆಂಡನ್ನು ಆಡದೇ ಬಿಟ್ಟರು. ಅದು ಒಳಕ್ಕೆ ತಿರುಗಿ ಬೌಲ್ಡ್ ಆಗಬೇಕಾಯಿತು. ವಿರಾಟ್ ಕೊಹ್ಲಿ ಅವರ ಬ್ಯಾಟ್‌ನ ಮೇಲಂಚಿಗೆ ತಾಗಿದ ಚೆಂಡು ಸ್ಲಿಪ್‌ನಲ್ಲಿ ಕ್ಯಾಚಾಯಿತು.

ಗ್ಲೆನ್ ಫಿಲಿಪ್ಸ್ ಬೌಲಿಂಗ್‌ನಲ್ಲಿ ಚೆಂಡು ತಿರುಗಬಹುದೆಂದು ಗ್ರಹಿಸಿ ಯಶಸ್ವಿ ಜೈಸ್ವಾಲ್ ಆಡಹೋದರು. ಆದರೆ ಅದು ನೇರವಾಗಿ ಬಂದು ಪ್ಯಾಡ್‌ಗೆ ಬಡಿದು ಎಲ್‌ಬಿ ಬಲೆಗೆ ಬಿದ್ದರು. ಸರ್ಫರಾಜ್, ಫುಲ್‌ಟಾಸ್ ಎಸೆತವನ್ನು ಸ್ವೀಪ್ ಮಾಡಲು ಹೋಗಿ ಡೀಪ್ ಸ್ಕ್ವೇರ್‌ನಲ್ಲಿ ಕ್ಯಾಚಿತ್ತರು. 43 ಎಸೆತಗಳ ಅಂತರದಲ್ಲಿ ಭಾರತ 29 ರನ್ನಿಗೆ 5 ವಿಕೆಟ್ ಕಳೆದುಕೊಂಡು ಒತ್ತಡಕ್ಕೆ ಸಿಲುಕಿತು. ಪಿಚ್ ಕೂಡ ಹದಗೆಡಲು ಶುರುವಾಗಿತ್ತು.

ಆದರೆ ಪಂತ್ ಆಕ್ರಮಣಕಾರಿಯಾಗಿದ್ದರು. ಮೊದಲ ಇನಿಂಗ್ಸ್‌ನಲ್ಲಿ 60 ರನ್ ಗಳಿಸಿದ್ದ ಎಡಗೈ ಆಟಗಾರ ಮತ್ತೊಮ್ಮೆ ವೇಗವಾಗಿ 64 ರನ್ ಗಳಿಸಿದರು. ಪಿಚ್ ಸ್ಥಿತಿ ನೋಡಿದರೆ, ಈ ಇನಿಂಗ್ಸ್‌ಗೆ ಹೆಚ್ಚು ತೂಕ. ಪಂತ್ ಮತ್ತು ರವೀಂದ್ರ ಜಡೇಜ ನಡುವಣ 42 ರನ್‌ಗಳ ಆರನೇ ವಿಕೆಟ್ ಜೊತೆಯಾಟದಿಂದ ಈ ಎಲ್ಲ ನಾಟಕೀಯ ತಿರುವು ಕೊನೆಯಾಗುವಂತೆ ಕಂಡಿತು. ಪಂತ್, ಈ ಪಂದ್ಯದ ಅತ್ಯುತ್ತಮ ಬೌಲರ್ ಎನಿಸಿದ ಎಜಾಜ್ (160ಕ್ಕೆ11) ಅವರನ್ನು ನಿರಾಯಾಸವಾಗಿ ಆಡತೊಡಗಿದ್ದರು.

ಈ ಹಂತದಲ್ಲಿ ಜಡೇಜ, ಬ್ಯಾಟ್‌ಗೆ ತಾಗಿದ ಚೆಂಡು ಪ್ಯಾಡ್‌ಗೆ ಸವರಿ ಷಾರ್ಟ್‌ಲೆಗ್‌ನತ್ತ ಹಾರಿದಾಗ ವಿಲ್ ಯಂಗ್ ತಪ್ಪು ಮಾಡಲಿಲ್ಲ. 35 ರನ್ ಬಳಿಕ (ಮೊತ್ತ 106) ಪಂತ್ ನಿರ್ಗಮನವು ಸೋಲು ಖಚಿತಪಡಿಸಿತು. ಅವರು ಮುನ್ನುಗ್ಗಿ ಆಡಲು ಅನುವಾಗಿದ್ದರು. ಆದರೆ ಮನಸ್ಸು ಬದಲಾಯಿಸಿ ಪ್ಯಾಡ್‌ನಿಂದ ಚೆಂಡನ್ನು ಆಡಿದರು. ಆದರೆ ಎರಡು ಸದ್ದು ಕೇಳಿದ ತಕ್ಷಣ ಕಿವೀಸ್ ಆಟಗಾರರು ಬಲವಾದ ಮನವಿ ಮಾಡಿದರು. ಅಂಪೈರ್ ಇಲಿಂಗ್‌ವರ್ತ್ ನಾಟೌಟ್ ನೀಡಿದಾಗ, ಉಳಿದಿದ್ದ ಏಕೈಕ ಮರುಪರಿಶೀಲನೆ ಅವಕಾಶವನ್ನು ಪ್ರವಾಸಿ ತಂಡ ಬಳಸಿತು. ಮರುಪ್ರಸಾರವನ್ನು ವಿವಿಧ ಕೋನಗಳ ಮೂಲಕ ಪರಿಶೀಲಿಸಿದರೂ, ಅವು ಅಸ್ಪಷ್ಟವಾಗಿದ್ದವು. ಆದರೆ ಮೂರನೇ ಅಂಪೈರ್ ರೈಫೆಲ್ ಕೊನೆಗೂ, ಔಟ್ ತೀರ್ಪು ನೀಡಲು ನಿರ್ದೇಶಿಸಿದರು.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯವನ್ನು ಭಾನುವಾರ ಗೆದ್ದ ನ್ಯೂಜಿಲೆಂಡ್ ತಂಡದ ಆಟಗಾರರು ಸಂಭ್ರಮಪಟ್ಟಿದ್ದು ಹೀಗೆ.... ಪಿಟಿಐ ಚಿತ್ರ

ಕನಿಷ್ಠ ಗುರಿ ಬೆನ್ನಟ್ಟುವಲ್ಲಿ ಭಾರತ ಯಾವಾಗೆಲ್ಲ ಎಡವಿತ್ತು? (ಟೆಸ್ಟ್)

ರನ್	ಎದುರಾಳಿ	ಕ್ರೀಡಾಂಗಣ	ವರ್ಷ
120	ವೆಸ್ಟ್ ಇಂಡೀಸ್	ಬ್ರಿಜ್‌ಟೌನ್	1997
147	ನ್ಯೂಜಿಲೆಂಡ್	ವಾಂಖೆಡೆ	2024
176	ಶ್ರೀಲಂಕಾ	ಗಾಲೆ	2015
194	ಇಂಗ್ಲೆಂಡ್	ಎಜ್‌ಬಾಸ್ಟನ್	2018

ಕಡಿಮೆ ಗುರಿ ಕೊಟ್ಟು ನ್ಯೂಜಿಲೆಂಡ್ ಗೆದ್ದ ಸಂದರ್ಭಗಳು (ಟೆಸ್ಟ್)

ರನ್	ಎದುರಾಳಿ	ಕ್ರೀಡಾಂಗಣ	ವರ್ಷ
137	ಇಂಗ್ಲೆಂಡ್	ವೆಲ್ಲಿಂಗ್ಟನ್	1978
147	ಭಾರತ	ವಾಂಖೆಡೆ	2024
176	ಪಾಕಿಸ್ತಾನ	ಅಬುಧಾಬಿ	2018
241	ಆಸ್ಟ್ರೇಲಿಯಾ	ಹೋಬಾರ್ಟ್	2011

ಕ್ರಿಕೆಟ್ ಬದುಕಿನ ಹಿನ್ನಡೆಯ ಕ್ಷಣ: ರೋಹಿತ್

ಮುಂಬೈ (ಪಿಟಿಐ): ‘ನ್ಯೂಜಿಲೆಂಡ್ ಎದುರಿನ 0–3 ಸರಣಿ ಸೋಲು ನನ್ನ ಕ್ರಿಕೆಟ್ ಜೀವನದ ಅತ್ಯಂತ ಹಿನ್ನಡೆಯ ಗಳಿಗೆ. ಇದರ ಸಂಪೂರ್ಣ ಹೊಣೆಯನ್ನು ನಾನೇ ಹೊತ್ತುಕೊಳ್ಳುವೆ’ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಭಾನುವಾರ ಪ್ರತಿಕ್ರಿಯಿಸಿದ್ದಾರೆ.

‘ಹೌದು, ಇಂಥ ಕಹಿ ಅನುಭವವನ್ನು ಅರಗಿಸಿಕೊಳ್ಳುವುದು ಕಷ್ಟ. ತವರಿನಲ್ಲಿ ಟೆಸ್ಟ್ ಸೋಲು, ಸರಣಿ ಸೋಲನ್ನು ಜೀರ್ಣಿಸಿಕೊಳ್ಳುವುದು ಕಷ್ಟ. ನಾವು ಉತ್ತಮವಾಗಿ ಆಡಲಿಲ್ಲ. ನ್ಯೂಜಿಲೆಂಡ್ ಸರಣಿಯುದ್ದಕ್ಕೂ ಚೆನ್ನಾಗಿ ಆಡಿತು. ನಾವು ಅನೇಕ ತಪ್ಪುಗಳನ್ನು ಎಸಗಿದೆವು’ ಎಂದು ಅವರು ಭಾನುವಾರ ಮೂರನೇ ಟೆಸ್ಟ್ ಸೋಲಿನ ನಂತರ ಪತ್ರಿಕಾಗೋಷ್ಠಿಯಲ್ಲಿ ವಿಶ್ಲೇಷಿಸಿದರು.

‘ಮೊದಲ ಎರಡು ಟೆಸ್ಟ್‌ಗಳಲ್ಲಿ ನಾವು ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮೊತ್ತ ಗಳಿಸಲಿಲ್ಲ. ಈ ಪಂದ್ಯದಲ್ಲಿ 28 ರನ್ ಲೀಡ್ ಪಡೆದೆವು. ಸಾಧಿಸಬಹುದಾದ ಗುರಿ ನಮ್ಮ ಮುಂದಿತ್ತು. ತಂಡವಾಗಿ ನಾವು ವಿಫಲವಾಗಿದ್ದೇವೆ. ಇಂಥ ಗುರಿ ಎದುರಿಸುವಾಗ ಉತ್ತಮ ಆರಂಭ ಪಡೆಯಬೇಕಾಗುತ್ತದೆ. ಆದರೆ ಹಾಗೆ ಆಗಲಿಲ್ಲ’ ಎಂದರು.

ತಮ್ಮ ವೈಯಕ್ತಿಕ ಬ್ಯಾಟಿಂಗ್ ಬಗ್ಗೆಯೂ ನಿರಾಸೆ ವ್ಯಕ್ತಪಡಿಸಿದರು. ‘ನಾನು ನಿರ್ದಿಷ್ಟ ಯೋಜನೆಯೊಡನೆ ಕಣಕ್ಕಿಳಿಯುತ್ತೇನೆ. ಆದರೆ ಈ ಸರಣಿಯಲ್ಲಿ ಅವು ಯಾವುದೂ ಕೈಗೂಡಲಿಲ್ಲ. ಪರಿಸ್ಥಿತಿಗೆ ಅನುಗುಣವಾಗಿ ನಾವು ಆಡಲಿಲ್ಲ’ ಎಂದು ಒಪ್ಪಿಕೊಂಡರು.

‘ನಾಯಕನಾಗಿ ತಂಡವನ್ನು ಮುನ್ನಡೆಸುವಲ್ಲಿ ನಾನು ನಿರೀಕ್ಷಿತ ಮಟ್ಟ ತಲುಪಲಿಲ್ಲ. ವೈಯಕ್ತಿಕವಾಗಿ ನನ್ನ ಬ್ಯಾಟಿಂಗ್ ಕೂಡ ನಿರಾಸೆ ಮೂಡಿಸಿದೆ. ತಂಡ ಸಾಂಘಿಕವಾಗಿ ಆಡುವಲ್ಲಿ ವಿಫಲವಾಗಿದೆ’ ಎಂದರು.

ತಂಡದ ಕೋಚ್ ಗೌತಮ್ ಗಂಭೀರ್, ನೆರವು ಸಿಬ್ಬಂದಿಯಾದ ನೆದರ್ಲೆಂಡ್ಸ್‌ನ ರಯಾನ್ ಟೆನ್ ಡೋಷೆ ಮತ್ತು ಅಭಿಷೇಕ್ ನಾಯರ್ ಅವರನ್ನು ರೋಹಿತ್ ಸಮರ್ಥಿಸಿಕೊಂಡರು.

ಅಗಾಧ ಸಾಧನೆ: ಲೇಥಮ್

ಮುಂಬೈ (ಪಿಟಿಐ): ‘ಈ ಸರಣಿ ನಮ್ಮ ಪಾಲಿಗೆ ಅವಿಸ್ಮರಣೀಯ. ಇದೊಂದು ಅಗಾಧ ಸಾಧನೆ. ಮೊದಲ ಟೆಸ್ಟ್ ಗೆಲುವು ವಿಶೇಷವಾಗಿತ್ತು. ಎರಡನೇ ಟೆಸ್ಟ್ ಹಾಗೂ ಸರಣಿ ಗೆಲುವು ಅದಕ್ಕಿಂತ ಹೆಚ್ಚು ವಿಶೇಷವಾದುದು’ ಎಂದು ನ್ಯೂಜಿಲೆಂಡ್ ನಾಯಕ ಟಾಮ್ ಲೇಥಮ್ ಸಂತಸ ವ್ಯಕ್ತಪಡಿಸಿದರು.

‘ಈ ಸರಣಿ ಗೆಲುವಿನ ನೈಜ ಖುಷಿಯನ್ನು ತವರಿಗೆ ಮರಳಿದ ನಂತರ ಅನುಭವಿಸುತ್ತೇವೆ. ಇದು ನ್ಯೂಜಿಲೆಂಡ್ ಕ್ರಿಕೆಟ್‌ಗೆ ಮಹತ್ವಪೂರ್ಣ ಗಳಿಗೆ. ನ್ಯೂಜಿಲೆಂಡ್ ಕ್ರಿಕೆಟ್ ಗಳಿಸಿದ ಅತಿ ಶ್ರೇಷ್ಠ ಸರಣಿ ಗೆಲುವು’ ಎಂದು ಅವರು ಬಣ್ಣಿಸಿದರು.

ಡಬ್ಲ್ಯುಟಿಸಿ ಫೈನಲ್: ಭಾರತಕ್ಕೆ ಹೆಚ್ಚಿದ ಆತಂಕ

ದುಬೈ (ಪಿಟಿಐ): ಭಾರತ ತಂಡವು 0-3ರಿಂದ ನ್ಯೂಜಿಲೆಂಡ್ ವಿರುದ್ಧ ಸರಣಿ ಸೋತ ನಂತರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಕಳೆದುಕೊಂಡು, ಎರಡನೇ ಸ್ಥಾನಕ್ಕೆ ಸರಿದಿದೆ.

ಹಾಲಿ ಡಬ್ಲ್ಯುಟಿಸಿ ವರ್ಷದಲ್ಲಿ ಭಾರತಕ್ಕೆ ಇದು ಐದನೇ ಸೋಲು. ಕಿವೀಸ್ ವಿರುದ್ಧ ಕೊನೆಯ ಪಂದ್ಯದ ಸೋಲಿನ ಬಳಿಕ ಪಿಸಿಟಿ ಪ್ರಮಾಣ ಶೇ 62.82ರಿಂದ 58.33ಕ್ಕೆ ಇಳಿಸಿದೆ. ಎರಡನೇ ಸ್ಥಾನದಲ್ಲಿದ್ದ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ (62.50) ಅಗ್ರಸ್ಥಾನಕ್ಕೆ ಏರಿದೆ.

ಸತತ ಮೂರನೇ ಬಾರಿಗೆ ವಿಶ್ವ ಟೆಸ್ಟ್ ಚಾಂಪಿಯನ್‌ಪಿಪ್ ಫೈನಲ್ ತಲುಪುವ ಪ್ರಯತ್ನದಲ್ಲಿದ್ದ ಭಾರತ ತಂಡಕ್ಕೆ ನ್ಯೂಜಿಲೆಂಡ್ ತಂಡವು ಹ್ಯಾಟ್ರಿಕ್ ಸೋಲಿನ ಆಘಾತ ನೀಡಿದೆ.

ಹಾಲಿ ಡಬ್ಲ್ಯುಟಿಸಿ ವರ್ಷದಲ್ಲಿ ಭಾರತಕ್ಕೆ ಇನ್ನು ಉಳಿದಿರುವುದು ಆಸ್ಟ್ರೇಲಿಯಾ ವಿರುದ್ಧದ ಸರಣಿಯ ಐದು ಪಂದ್ಯಗಳು ಮಾತ್ರ. ಫೈನಲ್‌ಗೆ ನೇರ ಅರ್ಹತೆ ಪಡೆಯಲು ಈ ಐದು ಪಂದ್ಯಗಳ ಪೈಕಿ ಕನಿಷ್ಠ ನಾಲ್ಕನ್ನು ಗೆಲ್ಲಲೇಬೇಕಾದ ಒತ್ತಡವಿದೆ. ನ್ಯೂಜಿಲೆಂಡ್ ಸರಣಿಗೆ ಮೊದಲು ಭಾರತ ತಂಡವು ಡಬ್ಲ್ಯುಟಿಸಿ ಫೈನಲ್ ತಲುಪುವ ನೆಚ್ಚಿನ ತಂಡವಾಗಿತ್ತು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್ ಪಟ್ಟಿ

ಸ್ಥಾನ	ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಅಂಕ	ಶೇಕಡಾವಾರು
1	ಆಸ್ಟ್ರೇಲಿಯಾ	12	8	3	1	90	62.50
2	ಭಾರತ	14	8	5	1	98	58.33
3	ಶ್ರೀಲಂಕಾ	9	5	4	0	60	55.56
4	ನ್ಯೂಜಿಲೆಂಡ್	11	6	5	0	72	54.55
5	ದಕ್ಷಿಣ ಆಫ್ರಿಕಾ	8	4	3	1	52	54.17

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 235 (65.4 ಓವರುಗಳಲ್ಲಿ)
ಭಾರತ: 263 (59.4 ಓವರುಗಳಲ್ಲಿ)
ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 174 (45.5 ಓವರುಗಳಲ್ಲಿ)
ಲೇಥಮ್ ಬಿ ಆಕಾಶ್ ದೀಪ್ 1 (4ಎ)
ಕಾನ್ವೆ ಸಿ ಗಿಲ್ ಬಿ ಸುಂದರ್ 22 (47ಎ, 4x2)
ಯಂಗ್ ಸಿ ಮತ್ತು ಬಿ ಅಶ್ವಿನ್ 51 (100ಎ, 4x2, 6x1)
ರವೀಂದ್ರ ಸ್ಟಂ ಪಂತ್ ಬಿ ಅಶ್ವಿನ್ 4 (3ಎ, 4x1)
ಮಿಚೆಲ್ ಸಿ ಅಶ್ವಿನ್ ಬಿ ಜಡೇಜ 21 (44ಎ, 4x1, 6x1)
ಬ್ಲಂಡೆಲ್ ಬಿ ಜಡೇಜ 4 (6ಎ, 4x1)
ಫಿಲಿಪ್ಸ್ ಬಿ ಅಶ್ವಿನ್ 26 (14ಎ, 4x1, 6x3)
ಸೋಧಿ ಸಿ ಕೊಹ್ಲಿ ಬಿ ಜಡೇಜ 8 (14ಎ, 4x1)
ಹೆನ್ರಿ ಬಿ ಜಡೇಜ 10 (16ಎ,6x1)
ಎಜಾಜ್ ಸಿ ಆಕಾಶ್ ಬಿ ಜಡೇಜ 9 (23ಎ, 6x1)
ಓ ರೂರ್ಕಿ ಔಟಾಗದೇ 2 (5ಎ)
ಇತರೆ: 17 (ಬೈ 12, ಲೆಗ್‌ಬೈ 4, ನೋಬಾಲ್ 1)
ವಿಕೆಟ್ ಪತನ: 1–2 (ಟಾಮ್ ಲೇಥಮ್, 0.5), 2–39 (ಡೇವಾನ್ ಕಾನ್ವೆ, 12.5), 3–44 (ರಚಿನ್ ರವೀಂದ್ರ, 13.6), 4–94 (ಡೇರಿಲ್ ಮಿಚೆಲ್, 27.5), 5–100 (ಟಾಮ್ ಬ್ಲಂಡೆಲ್, 29.3), 6–131 (ಗ್ಲೆನ್ ಫಿಲಿಪ್ಸ್, 32.5), 7–148 (ಈಶ್ ಸೋಧಿ, 37.5), 8–150 (ವಿಲ್ ಯಂಗ್, 38.6), 9–171 (ಮ್ಯಾಟ್ ಹೆನ್ರಿ, 43.3), 10–174 (ಎಜಾಜ್ ಪಟೇಲ್, 45.5)
ಬೌಲಿಂಗ್: ಆಕಾಶ್ ದೀಪ್ 5–0–10–1, ವಾಷಿಂಗ್ಟನ್ ಸುಂದರ್ 10–0–30–1, ರವಿಚಂದ್ರನ್ ಅಶ್ವಿನ್ 17–1–63–3, ರವೀಂದ್ರ ಜಡೇಜ 13.5–3–55–5
ಭಾರತ: 2ನೇ ಇನಿಂಗ್ಸ್: 121 (29.1 ಓವರುಗಳಲ್ಲಿ)
ಜೈಸ್ವಾಲ್ ಎಲ್‌ಬಿಡಬ್ಲ್ಯು ಬಿ ಫಿಲಿಪ್ಸ್ 5 (16ಎ)
ರೋಹಿತ್ ಸಿ ಫಿಲಿಪ್ಸ್ ಬಿ ಹೆನ್ರಿ 11 (11ಎ, 4x2)
ಗಿಲ್ ಬಿ ಪಟೇಲ್ 1 (4ಎ)
ಕೊಹ್ಲಿ ಸಿ ಮಿಚೆಲ್ ಬಿ ಪಟೇಲ್ 1 (7ಎ)
ಪಂತ್ ಸಿ ಬ್ಲಂಡೆಲ್ ಬಿ ಪಟೇಲ್ 64 (57ಎ, 4x9, 6x1)
ಸರ್ಫರಾಜ್ ಸಿ ರವೀಂದ್ರ ಬಿ ಪಟೇಲ್ 1 (2ಎ)
ಜಡೇಜ ಸಿ ಯಂಗ್ ಬಿ ಪಟೇಲ್ 6 (22ಎ)
ಸುಂದರ್ ಬಿ ಪಟೇಲ್ 12 (25ಎ)
ಅಶ್ವಿನ್ ಸಿ ಬ್ಲಂಡೆಲ್ ಬಿ ಫಿಲಿಪ್ಸ್ 8 (29ಎ)
ಆಕಾಶ್ ದೀಪ್ ಬಿ ಫಿಲಿಪ್ಸ್ 0 (1ಎ)
ಸಿರಾಜ್ ಔಟಾಗದೇ 0 (1ಎ)
ಇತರೆ: 12 (ಬೈ 12)
ವಿಕೆಟ್ ಪತನ: 1–13 (ರೋಹಿತ್ ಶರ್ಮ, 2.6), 2–16 (ಶುಭಮನ್ ಗಿಲ್, 3.6), 4–18 (ವಿರಾಟ್ ಕೊಹ್ಲಿ 5.3), 4–28 (ಯಶಸ್ವಿ ಜೈಸ್ವಾಲ್, 6.5), 5–29 (ಸರ್ಫರಾಜ್ ಖಾನ್, 7.1), 6–71 (ರವೀಂದ್ರ ಜಡೇಜ, 15.6), 7–106 (ರಿಷಭ್ ಪಂತ್, 21.4), 8–121 (ರವಿಚಂದ್ರನ್ ಅಶ್ವಿನ್, 28.4), 9–121 (ಆಕಾಶ್ ದೀಪ್, 28.5), 10–121 (ವಾಷಿಂಗ್ಟನ್ ಸುಂದರ್, 29.1).
ಬೌಲಿಂಗ್: ಮ್ಯಾಟ್ ಹೆನ್ರಿ 3–0–10–1, ಎಜಾಜ್ ಪಟೇಲ್ 14.1–1–57–6, ಗ್ಲೆನ್ ಫಿಲಿಪ್ಸ್ 12–0–42–3
ಪಂದ್ಯದ ಆಟಗಾರ: ಎಜಾಜ್ ಪಟೇಲ್ (160ಕ್ಕೆ11)
ಸರಣಿಯ ಆಟಗಾರ: ವಿಲ್ ಯಂಗ್ (244 ರನ್)
ಫಲಿತಾಂಶ: ನ್ಯೂಜಿಲೆಂಡ್‌ಗೆ 25 ರನ್‌ಗಳ ಜಯ, 3–0 ಸರಣಿ ಗೆಲುವು

ಆತ್ಮಾವಲೋಕನಕ್ಕೆ ಸಚಿನ್ ಸಲಹೆ

ಮುಂಬೈ (ಪಿಟಿಐ): ಭಾರತ ತಂಡ ಆತ್ಮಾಲೋಕನ ಮಾಡಿಕೊಳ್ಳಬೇಕು. ಟೆಸ್ಟ್ ಮಾದರಿಯಲ್ಲಿ ಅನಗತ್ಯ ಪ್ರಯೋಗಕ್ಕೆ ಮುಂದಾಗಬಾರದು ಮತ್ತು ಉತ್ತಮ ಪಿಚ್‌ಗಳಲ್ಲಿ ಆಡಲು ಮುಂದಾಗಬೇಕು ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ತಾರೆಗಳಾದ ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್ ಮತ್ತು ಹರಭಜನ್ ಸಿಂಗ್ ಸಲಹೆ ನೀಡಿದ್ದಾರೆ. ಟಾಮ್ ಲೇಥಮ್ ಸಾರಥ್ಯದ ನ್ಯೂಜಿಲೆಂಡ್ ಎದುರು ಟೆಸ್ಟ್ ಸರಣಿಯನ್ನು 0–3 ರಿಂದ ಶೋಚನೀಯವಾಗಿ ಸೋತ ನಂತರ ಅಭಿಮಾನಿಗಳೂ ಆಕ್ರೋಶಗೊಂಡಿದ್ದಾರೆ.

‘ತವರಿನಲ್ಲಿ ಈ ರೀತಿ ಸೋತಿದ್ದನ್ನು ಜೀರ್ಣಿಸಿಕೊಳ್ಳುವುದು ಕಷ್ಟ. ಆತ್ಮಾವಲೋಕನಕ್ಕೆ ಇದು ಸಕಾಲ. ಸಿದ್ಧತೆಯ ಕೊರತೆ ಕಾರಣವೇ ಅಥವಾ ಹೊಡೆತಗಳ ಆಯ್ಕೆಯಲ್ಲಿ ಎಡವಿದ್ದು ಕಾರಣವೇ?’ ಎಂದು ತೆಂಡೂಲ್ಕರ್ ‘ಎಕ್ಸ್’ನಲ್ಲಿ ಪೋಸ್ಟ್ ಹಾಕಿದ್ದಾರೆ. ಗಿಲ್ ಮೊದಲ ಇನಿಂಗ್ಸ್‌ನಲ್ಲಿ ದಿಟ್ಟವಾಗಿ ಆಡಿದರು. ಪಂತ್ ಎರಡೂ ಇನಿಂಗ್ಸ್‌ಗಳಲ್ಲಿ ಅಮೋಘವಾಗಿದ್ದರು. ಇಂಥ ಸವಾಲಿನ ಪಿಚ್‌ನಲ್ಲಿ ಅವರ ಪಾದಚಲನೆಯ ರೀತಿ ಎದ್ದುಕಂಡಿತು. ಅವರ ಆಟ ಅತ್ಯಾಕರ್ಷಕ’ ಎಂದು ತೆಂಡೂಲ್ಕರ್ ಉಲ್ಲೇಖಿಸಿದ್ದಾರೆ.

‘ಇಂಥ ವೇಳೆಯೂ ಅಭಿಮಾನಿಗಳೂ ತಂಡಕ್ಕೆ ಬೆಂಬಲ ನೀಡುವುದು ಸಹಜ. ಆದರೆ ಇದು ನಮ್ಮ ತಂಡದ ಅತಿ ಕಳಪೆ ಆಟ’ ಎಂದು ಮಾಜಿ ಆರಂಭ ಆಟಗಾರ ಸೆಹ್ವಾಗ್ ಹೇಳಿದ್ದಾರೆ.

ಮಣಿಂದರ್ ಮಿಂಚು, ವಾರಿಯರ್ಸ್‌ಗೆ ಜಯ

ಹೈದರಾಬಾದ್: ಮಣಿಂದರ್ ಸಿಂಗ್ ಅವರ ಸೂಪರ್ ಟೆನ್ ಸಾಹಸದ ಜತೆಗೆ ಸಾಂಘಿಕ ಹೋರಾಟ ಪ್ರದರ್ಶಿಸಿದ ಬೆಂಗಾಲ್ ವಾರಿಯರ್ಸ್ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವನ್ನು ಭಾನುವಾರ ಎರಡು ಅಂಕಗಳಿಂದ ಸೋಲಿಸಿತು.

ಇದರೊಂದಿಗೆ ಸತತ ಎರಡು ಟೈಗಳ ಬಳಿಕ ಬೆಂಗಾಲ್ ಗೆಲುವಿನ ಲಹರಿಗೆ ಮರಳಿತು. ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಬೆಂಗಾಲ್ ತಂಡ 40-38 ಅಂಕಗಳಿಂದ ಜಯ ಗಳಿಸಿತು. ದಿಟ್ಟ ಹೋರಾಟ ನೀಡಿದ ಹೊರತಾಗಿಯೂ ಕೊನೆಯ ಕ್ಷಣದ ಒತ್ತಡವನ್ನು ನಿಭಾಯಿಸಲು ಎಡವಿದ ಹರಿಯಾಣ ಹ್ಯಾಟ್ರಿಕ್ ಗೆಲುವಿನ ನಂತರ ಸೋಲಿಗೆ ಶರಣಾಯಿತು.

ಬೆಂಗಾಲ್ ವಾರಿಯರ್ಸ್ ಗೆಲುವಿನಲ್ಲಿ ಮಣಿಂದರ್ ಸಿಂಗ್ (12 ಅಂಕ) ಮಹತ್ವದ ಪಾತ್ರ ವಹಿಸಿದರೆ, ಸುಶೀಲ್, ನಿತಿನ್, ಪ್ರವೀಣ್ ಮತ್ತು ನಾಯಕ ಫಜ್ಲಲ್ ಅತ್ರಾಚಲಿ ಅಲ್ಪ ಕಾಣಿಕೆ ನೀಡಿದರು. ಹರಿಯಾಣ ಸ್ಟೀಲರ್ಸ್ ಪರ ಆಲ್‌ರೌಂಡರ್ ಮೊಹಮ್ಮದ್‌ರೇಝಾ (9 ಅಂಕ), ನವೀನ್ (7ಅಂಕ) ಮತ್ತು ವಿನಯ್ (10 ಅಂಕ) ಮಿಂಚಿದರು.

ದಿನದ ಎರಡನೇ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಪುಣೇರಿ ಪಲ್ಟನ್ ತಂಡ 35–28 ಪಾಯಿಂಟ್‌ಗಳಿಂದ ಯು ಮುಂಬಾ ತಂಡವನ್ನು ಮಣಿಸಿತು.

ಬುಲ್ಸ್‌ಗೆ ನಿರಾಸೆ: ಶನಿವಾರ ನಡೆದ ಎರಡನೇ ಪಂದ್ಯದಲ್ಲಿ ಆತಿಥೇಯ ತೆಲುಗು ಟೈಟನ್ಸ್ ತಂಡ 38–35ರಲ್ಲಿ ಮೂರು ಪಾಯಿಂಟ್‌ಗಳಿಂದ ಬೆಂಗಳೂರು ಬುಲ್ಸ್ ತಂಡವನ್ನು ಸೋಲಿಸಿತು. ಇದು ಬುಲ್ಸ್ ತಂಡಕ್ಕೆ ಆರು ಪಂದ್ಯಗಳಲ್ಲಿ ಎದುರಾದ ಐದನೇ ಸೋಲು.

ಮಣಿಂದರ್ ಸಿಂಗ್ –ಎಕ್ಸ್ ಚಿತ್ರ

ಬಾಕ್ಸಿಂಗ್: ಭಾರತಕ್ಕೆ 4 ಚಿನ್ನ ಸೇರಿ 17 ಪದಕ

ನವದೆಹಲಿ (ಪಿಟಿಐ): ಪಾರ್ಥವಿ ಗ್ರೇವಾಲ್, ವಂಶಿಕಾ ಗೋಸ್ವಾಮಿ ಮತ್ತು ಹೇಮಂತ್ ಸಂಗ್ವಾನ್ ಅವರು ಅಮೆರಿಕದ ಕೊಲರಾಡೊದಲ್ಲಿ ವಿಶ್ವ ಬಾಕ್ಸಿಂಗ್ ಆಶ್ರಯದಲ್ಲಿ ಶನಿವಾರ ವಿಶ್ವ 19 ವರ್ಷದೊಳಗಿನವರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡರು. ಮೊದಲ ಬಾರಿಗೆ ನಡೆದ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತ 4 ಚಿನ್ನ ಸೇರಿ 17 ಪದಕಗಳನ್ನು ಗೆದ್ದುಕೊಂಡು ಅತ್ಯುತ್ತಮ ಸಾಧನೆ ಪ್ರದರ್ಶಿಸಿದೆ.

ಎಂಟು ದಿನಗಳ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಮಹಿಳೆಯರ ಪ್ರದರ್ಶನ ಉತ್ತಮವಾಗಿದ್ದು, 10 ಮಂದಿ ಪದಕ ಗೆದ್ದರು.

ಪಾರ್ಥವಿ, ಮಹಿಳೆಯರ 65 ಕೆ.ಜಿ. ವಿಭಾಗದ ಫೈನಲ್‌ನಲ್ಲಿ 5-0 ಯಿಂದ ನೆದರ್ಲೆಂಡ್ಸ್‌ನ ಆಲಿಯಾ ಹೊಪ್ಪೆಮಾ ವಿರುದ್ಧ ಜಯಗಳಿಸಿದರು. ವಂಶಿಕಾ, ಮಹಿಳೆಯರ +80 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಜರ್ಮನಿಯ ವಿಕ್ಟೋರಿಯಾ ಗಾಟ್ ವಿರುದ್ಧ ಆರ್‌ಎಸ್‌ಸಿ (ರೆಫ್ರಿ ಸ್ಟಾಪ್ಸ್ ಕಂಟೆಸ್ಟ್) ಆಧಾರದಲ್ಲಿ 1ನಿಮಿಷ 37 ಸೆಕೆಂಡುಗಳ ಸೆಣಸಾಟ ನಡೆಸಿ ಗೆದ್ದರು.

ಹೇಮಂತ್, ಪುರುಷರ 90 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಅಮೆರಿಕದ ರಿಶೊನ್ ಸಿಮ್ಸ್ ವಿರುದ್ಧ 4–1 ವಿಭಜಿತ ತೀರ್ಪಿನ ಆಧಾರದಲ್ಲಿ ಜಯ ಗಳಿಸಿದರು. ನಿಶಾ (51 ಕೆ.ಜಿ), ಸುಪ್ರಿಯಾ ದೇವಿ ಥಾಕೋಮ್ (54 ಕೆ.ಜಿ) ಮತ್ತು ಕೃತಿಕಾ ವಾಸನ್ (80 ಕೆ.ಜಿ) ಅವರು ತಮ್ಮ ವಿಭಾಗದ ಫೈನಲ್‌ನಲ್ಲಿ ಸೋತು ಬೆಳ್ಳಿ ಪದಕಗಳಿಗೆ ತೃಪ್ತಿ ಪಡಬೇಕಾಯಿತು.

ಚೆಂಡು ಬದಲಾವಣೆ ಪ್ರಕರಣ ಸುಖಾಂತ್ಯ ಆಸ್ಟ್ರೇಲಿಯಾ ‘ಎ’ ತಂಡಕ್ಕೆ ಜಯ

ಮ್ಯಾಕೆ (ಆಸ್ಟ್ರೇಲಿಯಾ), (ಪಿಟಿಐ): ಚೆಂಡು ಬದಲಾವಣೆ ಪ್ರಕರಣದ ಬಿಸಿಚರ್ಚೆಯ ನಡುವೆ, ಆಸ್ಟ್ರೇಲಿಯಾ ‘ಎ’ ತಂಡ, ನಾಲ್ಕು ದಿನಗಳ ‘ಟೆಸ್ಟ್’ ಪಂದ್ಯದ ಕೊನೆಯ ದಿನವಾದ ಭಾನುವಾರ ಏಳು ವಿಕೆಟ್‌ಗಳಿಂದ ಭಾರತ ‘ಎ’ ತಂಡವನ್ನು ಸೋಲಿಸಿತು.

ಗೆಲ್ಲಲು 225 ರನ್ ಗಳಿಸುವ ಗುರಿಯೊಡನೆ 3 ವಿಕೆಟ್‌ಗೆ 130 ರನ್ ಗಳಿಸಿದ್ದ ಆಸ್ಟ್ರೇಲಿಯಾ ‘ಎ’ ತಂಡ ಭಾನುವಾರ ಇನ್ನಷ್ಟು ವಿಕೆಟ್ ಕಳೆದುಕೊಳ್ಳದೇ ಗುರಿ ತಲುಪಿತು. 75 ಓವರುಗಳಲ್ಲಿ 3 ವಿಕೆಟ್‌ಗೆ 226 ರನ್ ಹೊಡೆಯಿತು. ನಾಯಕ ನಥಾನ್ ಮೆಕ್‌ಸ್ವೀನಿ (ಔಟಾಗದೇ 88, 178 ಎಸೆತ) ಮತ್ತು ಬ್ಯೂ ವೆಬ್‌ಸ್ಟರ್ (ಔಟಾಗದೇ 61, 117 ಎಸೆತ) ಮುರಿಯದ ನಾಲ್ಕನೇ ವಿಕೆಟ್‌ಗೆ 141 ರನ್ ಸೇರಿಸಿದರು.

ಪಂದ್ಯದ ಮೂರನೇ ದಿನವಾದ ಶನಿವಾರ ಬೆಳಿಗ್ಗೆ, ಭಾರತ ಎ ತಂಡದ ಸಾಯಿ ಸುದರ್ಶನ್ (103) ಶತಕ ಪೂರೈಸಿದರೆ, ಕನ್ನಡಿಗ ದೇವದತ್ತ ಪಡಿಕ್ಕಲ್ 88 ರನ್ ಬಾರಿಸಿದ್ದರು. ಇವರಿಬ್ಬರು ಮೂರನೇ ವಿಕೆಟ್‌ಗೆ 196 ರನ್ ಸೇರಿಸಿದ್ದರು. ಸರಣಿಯ ಎರಡನೇ ಪಂದ್ಯ ಗುರುವಾರ ಆರಂಭವಾಗಲಿದೆ. ಈ ಪಂದ್ಯದಲ್ಲಿ ಬ್ಯಾಟರ್ ಕೆ.ಎಲ್. ರಾಹುಲ್, ವಿಕೆಟ್ ಕೀಪರ್ ಧ್ರುವ ಜುರೇಲ್ ಭಾರತ ‘ಎ’ ತಂಡಕ್ಕಾಗಿ ಆಡುವರು.

ಸ್ಕೋರುಗಳು: ಭಾರತ ಎ: 107 ಮತ್ತು 100 ಓವರುಗಳಲ್ಲಿ 312 (ಸಾಯಿ ಸುದರ್ಶನ್ 103, ದೇವದತ್ತ ಪಡಿಕ್ಕಲ್ 88, ಇಶಾನ್ ಕಿಶನ್ 32; ಫೆರ್ಗಸ್ ಓನೀಲ್ 55ಕ್ಕೆ4, ಟಾಡ್ ಮರ್ಫಿ 77ಕ್ಕೆ3); ಆಸ್ಟ್ರೇಲಿಯಾ ಎ: 195 ಮತ್ತು 75 ಓವರುಗಳಲ್ಲಿ 3 ವಿಕೆಟ್‌ಗೆ 226 (ಮಾರ್ಕಸ್ ಹ್ಯಾರಿಸ್ 36, ನಥಾನ್ ಮ್ಯಾಕ್‌ಸ್ವೀನಿ ಔಟಾಗದೇ 88, ಬ್ಯೂ ವೆಬ್‌ಸ್ಟರ್ ಔಟಾಗದೇ 61).

ಅಶಿಸ್ತು ಆರೋಪದಿಂದ ಇಶಾನ್ ಪಾರು

ಬೆಳಿಗ್ಗೆ ಆಟ ಆರಂಭವಾಗುವಾಗ ಚೆಂಡು ಬದಲಾವಣೆ ಮಾಡಿದ್ದಕ್ಕೆ ಸಂಬಂಧಿಸಿ ಮೈದಾನದಲ್ಲಿ ಅಂಪೈರ್ ಶಾನ್ ಕ್ರೆಗ್ ಜೊತೆ ವಾದಿಸಿದ್ದ ಭಾರತ ತಂಡದ ವಿಕೆಟ್ ಕೀಪರ್ ಇಶಾನ್ ಕಿಶನ್ ಅಶಿಸ್ತು ಆರೋಪದಿಂದ ಪಾರಾಗಿದ್ದಾರೆ.

ನಾಲ್ಕನೇ ದಿನ ಬೆಳಿಗ್ಗೆ ಚೆಂಡು ಬದಲಾಯಿಸಲಾಗಿತ್ತು. 225 ರನ್ ಗುರಿ ಎದುರಿಸಿದ್ದ ಆಸ್ಟ್ರೇಲಿಯಾ 3 ವಿಕೆಟ್‌ಗೆ 139 ರನ್ ಗಳಿಸಿ ಆಟ ಮುಂದುವರಿಸಬೇಕಿತ್ತು. ಚೆಂಡು ಬದಲಾಯಿಸಿದ್ದಕ್ಕೆ ಭಾರತ ‘ಎ’ ತಂಡದ ಆಟಗಾರರು ಅಸಮಾಧಾನ ವ್ಯಕ್ತಪಡಿಸಿದರು. ಚೆಂಡಿನ ಮೇಲೆ ತಿದ್ದಿದ ಗುರುತುಗಳಿವೆ ಎಂದು ಕ್ರೆಗ್ ಹೇಳಿದರು. ‘ನೀವು ಗೀರಿದ್ದೀರಿ. ನಾವು ಚೆಂಡು ಬದಲಾಯಿಸುತ್ತಿದ್ದೇವೆ. ಚರ್ಚೆ ಸಾಕು. ನಡೀರಿ, ಆಡೋಣ’ ಎಂದು ಅಂಪೈರ್ ಹೇಳಿದ್ದು ಸ್ಟಂಪ್ ಮೈಕ್ರೊಫೋನ್‌ನಲ್ಲಿ ಕೇಳಿಸಿದೆ. ಈ ಬಿಸಿಚರ್ಚೆ ಚೆಂಡು ವಿರೂಪಗಳಿಸಿದ ಪ್ರಕರಣದ ತಿರುವು ಪಡೆಯುವ ಲಕ್ಷಣಗಳು ಕಾಣಿಸಿದವು.

‘ಹಾಗಾದರೆ, ಈ ಚೆಂಡಿನೊಡನೆ ಆಡಬೇಕಾ?. ಇದು ಮೂರ್ಖತನದ ನಿರ್ಧಾರ’ ಎಂದು ಇಶಾನ್ ತಿರುಗಿಬಿದ್ದರು. ವಾಗ್ವಾದದಿಂದ ಸಿಟ್ಟಿಗೆದ್ದ ಕ್ರೆಗ್, ‘ಎಕ್ಸ್‌ಕ್ಯೂಸ್ ಮಿ. ನಿಮ್ಮ ವಿರುದ್ಧ ಅಶಿಸ್ತು ತೋರಿದ ವರದಿ ಸಲ್ಲಿಸಬೇಕಾಗುತ್ತದೆ. ಇದು ಅನುಚಿತ ನಡವಳಿಕೆ. ನಿಮ್ಮ ವರ್ತನೆಯಿಂದ ನಾವು ಚೆಂಡು ಬದಲಾಯಿಸಿದ್ದೇವೆ’ ಎಂದಿದ್ದಾರೆ.

ಆದರೆ ಚೆಂಡು ಬದಲಾಯಿಸಿದ್ದು, ಅದು ಆಡಲು ಯೋಗ್ಯವಾಗಿಲ್ಲದ ಕಾರಣ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಪಂದ್ಯ ಮುಗಿದು ಮೂರು ಗಂಟೆಗಳ ನಂತರ ನೀಡಿದ ಹೇಳಿಕೆಯಲ್ಲಿ ಸ್ಪಷ್ಟಪಡಿಸಿ ವಿವಾದಕ್ಕೆ ತೆರೆಯೆಳೆದಿದೆ. ಕಿಶನ್ ವಿರುದ್ಧ ಅಶಿಸ್ತಿನ ಆರೋಪ ಹೊರಿಸುವುದಿಲ್ಲ ಎಂದೂ ತಿಳಿಸಿದೆ. ಹೀಗಾಗಿ ಪ್ರಕರಣ ತಿಳಿಗೊಂಡಿತು.

ದಿನದಾಟ ಆರಂಭವಾಗುವ ಮೊದಲು ಉಭಯ ತಂಡದ ನಾಯಕರಿಗೆ ಮತ್ತು ಮ್ಯಾನೇಜರ್‌ಗಳಿಗೆ ಈ (ಚೆಂಡು ಬದಲಾವಣೆ) ನಿರ್ಧಾರದ ಬಗ್ಗೆ ತಿಳಿಸಲಾಗಿದೆ. ಹೀಗಾಗಿ ಮುಂದಿನ ಕ್ರಮ ಕೈಗೊಳ್ಳುವುದಿಲ್ಲ ಎಂದೂ ತಿಳಿಸಿದೆ.